CALLING ATTENTION TO MATTERS OF URGENT PUBLIC IMPORTANCE

(i) *re* : Strike by Students of the Siddaganga Institute of Technology, Tumkúr.

Sri GATTI CHANDRASHEKAR (Gubbi).—I call the attention of the Hon. Minister for Education to a strike by the students of Siddaganga Institute of Technology, Tumkur.

Sri A. R. BADARINARAYANA (Minister for Education).–Sir, I state as follows :—

In the Magazine 'Science To-day' an article has appeared in which the list of Engineering Colleges offering Degree Courses is shown. In this list, there are a few Engineering Colleges which are not getting any financial assistance from the State or Central Government and in the foot note, it has been indicated that some Colleges in Mysore State are not being given any financial assistance and hence indicated as unapproved institutions. However, they are all recognised Institutions.

2. These unaided Institutions are affiliated to the University of Mysore (Mysore University-2 and Bangalore University-2) and they are given affiliation and recognition by the State Government. The Degree awarded by the respective Universities are recognised.

3. The term 'unapproved Colleges' has created some doubts and anxiety in the minds of the students and they were afraid that this would come in their way of employment which was responsible for the strike. It has been explained that the approval of the Institutions for assistance and recognition of the Institutions for the award of Degree are two separate issues. This matter was discussed with the student leaders and they were also convinced and the students have returned to their classes.

re : Taking over Playground for constructing Buildings for the State Home, Hubli

ಶ್ರೀ ಕೆ. ಯಂಕಟಪ್ಪ.—ಹುಬ್ಬಳ್ಳಿಯಲ್ಲಿ ಪ್ರತಿಪ್ರೇಕ್ಷಣ ಗೃಹದ ಕಟ್ಟಡಗಳನ್ನು ನಿರ್ಮಿಸುವುದಕ್ಕೆ ಸರ್ಕಾರದವರು ಎರಡನೇ ವಾರ್ಡಿನಲ್ಲಿರುವ ಆಟದ ಮೈದಾನವನ್ನು ವಹಿಸಿಕೊಂಡಿರುವ ವಿಚಾರದ ಬಗ್ಗೆ ಮಾನ್ಯ ಸಮಾಜವಿಕಾಸ ಹಾಗೂ ಕಲ್ಯಾಣ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಚನ್ನಬಸಪ್ಪನವರು ಸಂಬಂಧಪಟ್ಟ ಹೇಳಿಕೆಯನ್ನು ಓದುತ್ತಾರೆ. ಅದರ ಮೇಲೆ ಏನಾದರೂ ವಿವರಣೆಗಳನ್ನು ಕೇಳಿದರೆ ಅದನ್ನು ಹೇಳುವುದಕ್ಕೆ ಅವರಿಗೆ ಅವಕಾಶವಿಲ್ಲದೆ ಇರುವುದರಿಂದ ಸಂಬಂಧಪಟ್ಟ ಮಂತ್ರಿಗಳು ಬಂದನಂತರ ಇದನ್ನು ತೆಗೆದುಕೊಳ್ಳುವುದು ಸೂಕ್ತ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೇಳಿದ ಪ್ರಶ್ನೆಗೆ ಎಷ್ಟು ಉತ್ತರ ಸಿಕ್ಕುತ್ತದೆ ಅದನ್ನು ಹೇಳುವುದಕ್ಕೆ ಸಾಧ್ಯ. ಆದರೆ ಅಧ್ಯಕ್ಷರು ಅವರ ಇಚ್ಛೆಬಂದಂತೆ ಮಾಡಲು ನನ್ನ ಅಭ್ಯಂತರವಿಲ್ಲ.

ಅಧ್ಯಕ್ಷರು.—ಈ ವಿಚಾರವನ್ನು ಸಂಬಂಧಪಟ್ಟ ಮಂತ್ರಿಗಳು ಬಂದನಂತರ ತೆಗೆದು ಕೊಳ್ಳುತ್ತೇನೆ.

Matter under Rule 312 *re* : Statement of some Congress M. Ps. against the Ministry

ಶ್ರೀ ಎಚ್. ಎಸ್. ಸಿದ್ದಪ್ಪ (ಅರಸೀಕೆರೆ).—ನಾನು ರೂಲ್ 312 ರ ಪ್ರಕಾರ ಒಂದು ವಿಷಯವನ್ನು ಪ್ರಸ್ತಾಪಮಾಡಲು ಕಳುಹಿಸಿದ್ದೆ.

ಅಧ್ಯಕ್ಷರು.—ರೂಲ್ 312 ಹೇಗೆ ಉಪಯೋಗಿಸಿಕೊಳ್ಳಬೇಕು ಎನ್ನುವ ಬಗ್ಗೆ ರೂಲಿಂಗ್ ಕೊಟ್ಟಿದ್ದೇನೆ. ಅದನ್ನು ವಾರಕ್ಕೆ ಒಂದು ದಿನ ಅಥವಾ ಎರಡು ದಿನ ತೆಗೆದುಕೊಳ್ಳಬೇಕೆಂದಿದ್ದೇನೆ. ಯಾವ ದಿನ ಅಜೆಂಡಾದಲ್ಲಿ ಹಾಕಲಾಗುತ್ತದೆ ಆ ದಿವಸ ಮಾತ್ರ ತೆಗೆದುಕೊಳ್ಳುತ್ತೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಮಾನ್ಯ ಮಂತ್ರಿಗಳು ಇದ್ದಾರೆ. ಅವರಲ್ಲಿ ತಮ್ಮ ಮೂಲಕ ನಾನು ಒಂದು ವಿಚಾರವನ್ನು ಪ್ರಸ್ತಾಪ ಮಾಡಲು ಇಚ್ಛಿಸುತ್ತೇನೆ. ನಮ್ಮ ರಾಜ್ಯದ ಮಂತ್ರಿ ಮಂಡಲದ ಮೇಲೆ ಪಾರ್ಲಿಮೆಂಟ್ ಸದಸ್ಯರು ಕೆಲವು ಆರೋಪಗಳನ್ನು ಪ್ರಧಾನಿಗೆ ಕೊಟ್ಟಿದ್ದೇ ವೆಂದು ಹೇಳಿದ್ದಾರೆ. ಆ ಆರೋಪಗಳೇನು, ಅವುಗಳ ಬಗ್ಗೆ ನಮ್ಮ ಮಂತ್ರಿಮಂಡಲದ ಪ್ರತಿಕ್ರಿಯೆ ಏನು ? ಪಾರ್ಲಿಮೆಂಟ್ ಸದಸ್ಯರು ಡೆಲ್ಲಿಯಿಂದ ಬೆಂಗಳೂರಿಗೆ ಬಂದಮೇಲೆ ಒಬ್ಬೊಬ್ಬರು ಒಂದೊಂದು ರೀತಿಯ ಹೇಳಿಕೆಗಳನ್ನು ಕೊಟ್ಟಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಅವರ ಅಭಿಪ್ರಾಯವನ್ನು ತಿಳಿಸಬೇಕೆಂದು ಕೇಳುತ್ತೇನೆ.

ಅಧ್ಯಕ್ಷರು.—ಬಜೆಟ್ ಮೇಲಿನ ಚರ್ಚೆಯಲ್ಲಿ ಬೇಕಾದಷ್ಟು ಹೇಳಿದ್ದೀರಿ.

ಶ್ರೀ ವಾಟಾಳ್ ನಾಗರಾಜ್.—ಇತ್ತೀಚೆಗೆ ಬಂದಿರುವ ಸಮಾಚಾರದ ಪ್ರಕಾರ ಪ್ರಧಾನಿ ಯವರು ಸಹಿತ ಮಾನ್ಯ ಮುಖ್ಯ ಮಂತ್ರಿಗಳಿಗೆ ಕಿವಿ ಮಾತಿನಲ್ಲಿ ಕೆಲವು ಸಚಿವರನ್ನು ತೆಗೆದುಹಾಕ ಬೇಕು, ಇಲ್ಲದೆ ಇದ್ದರೆ ನಿಮಗೂ ಕೆಟ್ಟ ಹೆಸರು ಬರುತ್ತದೆ ಎಂದು ಹೇಳಿದ್ದಾರೆ. ಸಭೆ ನಡೆಯುವಾಗ ಅವರನ್ನು ತೆಗೆದುಹಾಕಿದರೆ ಪಕ್ಷದಲ್ಲಿ ಒಡಕು ಬರುವ ಸಂಭವವಿದೆ. ಅಧಿವೇಶನ ಮುಗಿದನಂತರ ಪರಿಶೀಲನೆ ಮಾಡೋಣವೆಂದು ಹೇಳಿದ್ದಾರೆಂದು ಸಮಾಚಾರ ಅವರ ಪಕ್ಷದವರಿಂದಲೇ ನಮಗೆ ಬಂದಿದೆ. ಹಾಗೆ ಮಾಡುವುದಾದರೆ ಹೊಸದಾಗಿ ಯಾರನ್ನು ತೆಗೆದುಕೊಳ್ಳುತ್ತಾರೆ ಎನ್ನುವುದನ್ನು ನಮಗೂ ಸ್ವಲ್ಪ ಗೊತ್ತಾಗುವಂತೆ ಹೇಳಲಿ. ಇದು ಪಕ್ಷದ ಪ್ರಶ್ನೆ ಮಾತ್ರವಲ್ಲ ಅವರ ಪಕ್ಷದ ಸಭೆಯಲ್ಲಿ ಗೊಂದಲವಾಗಿ ಎರಡು ಭಾಗವಾಯಿತು ಎಂದೂ ತಿಳಿದು ಬಂದಿದೆ. ಯಾರು ಬಂದರೂ ಚಿಂತೆ ಇಲ್ಲ, ನನ್ನನ್ನು ಅಲ್ಲಾಡಿಸುವುದಕ್ಕೆ ಸಾಧ್ಯವಿಲ್ಲ, ನಾನು ಭದ್ರವಾಗಿದ್ದೇನೆಂದು ಹೇಳುತ್ತಿ ದ್ದಾರೆಂದು ಕೇಳಿದ್ದೇವೆ. ಈಗಿನ ಮಂತ್ರಿಮಂಡಲದಲ್ಲಿ ನಮಗೆ ಅಪನಂಬಿಕೆ ಬಂದಿದೆ. ಆದುದರಿಂದ ಮಾನ್ಯ ಮುಖ್ಯ ಮಂತ್ರಿಗಳು ನಮ್ಮ ಕಾತುರತೆಯನ್ನು ಹೋಗಲಾಡಿಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಸಾಮಾನ್ಯ ಜನರು ಅಪಾದನೆ ಮಾಡಿದ್ದರೆ ನಾವೇನೂ ಕಾತುರ ಪಡಬೇಕಾಗಿದ್ದಿರ ಲಿಲ್ಲ. ಆದರೆ ರಾಜ್ಯದ ಸಂಸತ್ ಸದಸ್ಯರೇ ಹೇಳಿರಬೇಕಾದರೆ, ಇದು ಪ್ರತಿಯೊಬ್ಬರೂ ಕೂಡ ಚಿಂತೆ ಮಾಡಬೇಕಾದ ಪ್ರಶ್ನೆಯಾಗಿದೆ. ಈ ವಿಚಾರದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಏನು ಅಭಿಪ್ರಾಯ ತಾಳಿದ್ದಾರೆನ್ನುವುದನ್ನು ಹೇಳಿದರೆ ಅನೇಕ ಅನುಮಾನಗಳು ಬಗೆಹರಿಯುತ್ತವೆ.

2-00 P.M

ಶ್ರೀ ಡಿ. ದೇವರಾಜ ಅರಸ್ (ಮುಖ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ಸದಸ್ಯರು ಇವರ ಮೇಲೆ ಇಷ್ಟೊಂದು ಆಸಕ್ತಿ ವಹಿಸಿರತಕ್ಕದ್ದು ಬಹಳ ಸಂತೋಷ. ಬಹುಶಃ ನಾನು ಹೇಳಿದರೆ ಶ್ರೀಮಾನ್ ನಾಗರಾಜರವರೂ ಎಲ್ಲರಿಗಿಂತ ಹೆಚ್ಚಾಗಿ ಒಪ್ಪುತ್ತಾರೆಂದು ಭಾವಿಸು ತ್ತೇನೆ. ಅದಕ್ಕಾಗಿ ಅವರಿಗೂ ನನ್ನ ಧನ್ಯವಾದಗಳು. ನಮ್ಮ ಸದಸ್ಯರುಗಳಿಗೆ ಮಂತ್ರಿಮಂಡಲ ದಲ್ಲಿ ಭದ್ರತೆ ಇದೆಯೋ ಹೇಗೆ ಎಂದು ಕೇಳುತ್ತಿದ್ದಾರೆ. ಬಹುಶಃ ನಮ್ಮ ಮಂತ್ರಿಮಂಡಲ ಭ್ರ

ವಾಗಿರಲಿ ಎಂದು ಹಾಗೆ ಹೇಳುತ್ತಾರೆಂದು ನಾನು ಭಾವಿಸುತ್ತೇನೆ. ಆ ರೀತಿ ಹೇಳುವುದೂ ಒಳ್ಳೆಯದು, ಇದಕ್ಕಾಗಿ ಅವರಿಗೆ ನನ್ನ ಧನ್ಯವಾದಗಳು. ಇದು ಭದ್ರವಾಗಿಯೇ ಇದೆ. ಈಗಲೂ ಇದೆ, ನಾಳೆಯೂ ಇರುತ್ತದೆ. ಪತ್ರಿಕೆಗಳಲ್ಲಿ ಇದರ ಬಗ್ಗೆ ಏನೇನೋ ಬಂದಿದೆ ಎಂದು ಹೇಳಿದರು. ಇದರ ಬಗ್ಗೆ ಹೇಳಬೇಕಾದ ಅಗತ್ಯವೇ ಇಲ್ಲ ಇದರಲ್ಲಿ ಯಾರು ಹೇಳಿದ್ದಾರೋ ಅವರೇ ಮತ್ತೆ ಇದರ ಬಗ್ಗೆ ಹೇಳಿದ್ದಾರೆ. ಇದರಲ್ಲಿ ಯಾರೋ ಕೆಲವರು ನನಗೆ ಅರ್ಜಿಗಳನ್ನು ಕೊಟ್ಟಿದ್ದಾರೆಂದು ಹೇಳಿದರು, ಅಂತಹ ಯಾವುದೂ ಬರವಣಿಗೆಯಲ್ಲಿ ಬಂದಿಲ್ಲ, ನನಗೆ ಗೊತ್ತಿರುವ ಪ್ರಕಾರ ನಾವು ಯಾರೂ ಕೊಟ್ಟಿಲ್ಲ. ಇದು ಇರತಕ್ಕ ಪರಿಸ್ಥಿತಿ.

CALLING ATTENTION TO A MATTER OF URGENT PUBLIC IMPORTANCE (*Contd.*)

(*ii*) *re*: Taking over of Playground for constructing Buildings for State Home, Hubli.

SRI K. YENKATAPPA (Shikaripur).—I beg to call the attention of the Hon. Minister for Community Development and Social Welfare to the taking over of the playground in Ward No. II of Hubli by Government for constructing buildings for the State Home, Hubli.

SRI S. M. MALLIKARJUNA SWAMY (Minister for Community Development and Social Welfare).—I beg to make the following statement in respect of Calling Attention notice by Sri K. Yenkatappa:

The plot mea uring 400′ × 300′ bearing C. T. S. Nos. 4518/2, 4519/2 and 3083 in Ward No. II of Hubli (Ex-Settlement Criminal Tribes area of Hubli), has been allotted to the Probation and After Care Services Department for the construction of buildings for the State Home for Men, Hubli. Hence the site bearing No. C. T. S. 3083/I-A in Ward No. II of Hubli and the buildings thereon belong to Government. This has not been given by the Government to anybody for use as a playground. The whole site of nearly 5 acres is quite essential for the construction of buildings of the State Home for Men, Hubli.

Approval is accorded in the G. O. No. SWD 166 SJD 71, dated 11-1-1972, to the revised Plans and Estimates for Rs. 6,70,000 for the construction of the buildings for Residential School and Workshop in the State Home for men, Hubli. Permission is also accorded in the Government letter No. SWD 36 SJD 72 dated 8-8-1972 to execute the said construction work in relaxation of the Economy Orders and restrictions in taking up the construction of works. Accordingly, the P.W.D. is taking action for the construction of the said buildings.

The Carpentary Workshop buildings which had been earlier allotted to the Shantiniketan Co-operative Industrial Settlement Society, Hubli and which had been taken possession of by the Department later and which was in a dilapidated condition, has been dismantled by the P.W.D. Authorities to facilitate the construction work of the buildings for the State Home, Hubli.

ಶ್ರೀ ಎಚ್. ಟಿ. ಕೃಷ್ಣಪ್ಪ (ನಾಗಮಂಗಲ).—ಮೊನ್ನೆ ನಾಗಮಂಗಲದಲ್ಲಿ ನಡೆದ ಘಟನೆಯು ಬಗ್ಗೆ ಸ್ಥಳಕ್ಕೆ ಹೋಗಿ ನಿಜಾಂಶವನ್ನು ತಿಳಿದುಕೊಂಡು ಬರೋಣ ಎಂದು ನಾನು ನನ್ನ ಕ್ಷೇತ್ರಕ್ಕೆ ಹೋಗಿದ್ದೆ. ಅಲ್ಲಿ ನಡೆದಂತಹ ಘಟನೆ ಏನು ಎನ್ನುವ ಬಗ್ಗೆ ವಿಷಯವನ್ನು ಸಂಗ್ರಹಿಸಿ ಅದನ್ನು ಈ ಸದನದಲ್ಲಿ ಇಡಬೇಕಾದ್ದು ನನ್ನ ಕರ್ತವ್ಯ. ಅದನ್ನು ಮಾಡದಿದ್ದರೆ ನಾನು ನನ್ನ ಕರ್ತವ್ಯ ಲೋಪ ಮಾಡಿದಂತಾಗುತ್ತದೆ. ಆದ್ದರಿಂದ ಈಗ ನಾನು ತಮ್ಮ ಅಪ್ಪಣೆಯನ್ನು ಪಡೆದು ಕೆಲವು ವಿಷಯುಗಳನ್ನು ಹೇಳಬಯಸುತ್ತೇನೆ.

ಅಧ್ಯಕ್ಷರು.—ನೋಟೀಸ್ ಕೊಡದೆ ಆ ರೀತಿ ಹೇಳುವುದಕ್ಕೆ ಬರುವುದಿಲ್ಲ.

ಶ್ರೀ ಎಚ್. ಟಿ. ಕೃಷ್ಣಪ್ಪ.—ನಾನು ಈ ಬಗ್ಗೆ ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇನೆ.

ಅಧ್ಯಕ್ಷರು.—ಅದು ನಿಲುವಳಿ ಸೂಚನೆಯಲ್ಲಿ ಬರುವುದಿಲ್ಲ.

ಶ್ರೀ ಎಚ್. ಟಿ. ಕೃಷ್ಣಪ್ಪ.—ನಾನು ತಮ್ಮಲ್ಲಿ ನಮ್ರತೆಯಿಂದ ಕೇಳಿಕೊಳ್ಳುತ್ತೇನೆ. ನನಗೆ 5 ನಿಮಿಷ ಅವಕಾಶವನ್ನು ಕೊಡಿ.

ಅಧ್ಯಕ್ಷರು.—ಈ ವಿಷಯ ನಿನ್ನೆ ಬೇಕಾದಷ್ಟು ಚರ್ಚೆಯಾಗಿ, ಈ ಬಗ್ಗೆ ಮುಖ್ಯ ಮಂತ್ರಿಗಳು ಮಾತು ಕೊಟ್ಟಿದ್ದಾರೆ.

ಶ್ರೀ ಬಿ. ಪುಟ್ಟಸ್ವಾಮಯ್ಯ (ರಾಮನಗರ).—ಇದು ಅವರ ಊರಿಗೆ ಸಂಬಂಧಪಟ್ಟ ವಿಷಯ. ಆದ್ದರಿಂದ ಅವರು ಅದನ್ನು ಹೇಳುವುದಕ್ಕೆ ಅವಕಾಶ ಕೊಡಿ.

ಶ್ರೀ ಎಚ್. ಟಿ. ಕೃಷ್ಣಪ್ಪ.—ನಾನು ಸ್ಥಳಕ್ಕೆ ಹೋಗಿ ವಿಚಾರ ಮಾಡಿ ನಿಜಾಂಶವನ್ನು ತಿಳಿದುಕೊಂಡು ಬಂದಿದ್ದೇನೆ. ಆದ್ದರಿಂದ ಅದನ್ನು ಹೇಳುವುದಕ್ಕೆ ನನಗೆ 5 ನಿಮಿಷ ಅವಕಾಶವನ್ನು ಕೊಡಿ. ಪೋಲೀಸಿನವರ ಮಧ್ಯದಲ್ಲಿ ಕರೀಗೌಡ ಇದ್ದಾಗ ಮೃತನಾಗಿದ್ದಾನೆ ಎಂದು ಗೊತ್ತಾಗಿದೆ. ಈ ಬಗ್ಗೆ ಪೋಲೀಸಿನವರನ್ನು ಬಿಟ್ಟು ಬೇರೆಯವರು ಸಾಕ್ಷಿ ಹೇಳುವುದು ಕಷ್ಟವಾಗುತ್ತದೆ. ಆದ್ದರಿಂದ ಈಗ ಆ ಪೋಲೀಸ್ ಸ್ಟೇಷನ್ನಿನಲ್ಲಿರತಕ್ಕ ಪೋಲೀಸ್ ಅಧಿಕಾರಿಗಳನ್ನು ಅದೇ ಜಾಗದಲ್ಲಿ ಮುಂದುವರಿಸಿಕೊಂಡು ಎನ್‌ಕ್ವೈರಿ ಮಾಡಿದರೆ ಅದರ ಫಲಿತಾಂಶ ಏನಾಗುತ್ತದೆ ಎಂಬುದು ಎಲ್ಲರಿಗೂ ಗೊತ್ತಿದೆ. ಆ ಹೆಣವನ್ನು ನೋಡಬೇಕು ಎಂದು ಸಾರ್ವಜನಿಕರು ಪೋಲೀಸ್ ಸ್ಟೇಷನ್ನಿಗೆ ಹೋದಾಗ ಸುತ್ತಲೂ ಭದ್ರತೆಯನ್ನು ಮಾಡಿ ಯಾರೂ ಬರಕೂಡದು ಎಂದು ಪೋಲೀಸಿನವರು ಆಜ್ಞೆ ಮಾಡಿದಾಗ ಜನಗಳು ಅದನ್ನು ನೋಡಲೇಬೇಕು ಎಂದು ಪ್ರತಿಭಟನೆ ಮಾಡಿ ಪೋಲೀಸ್ ಸ್ಟೇಷನ್ನಿನೊಳಕ್ಕೆ ನುಗ್ಗುವುದಕ್ಕೆ ಹೋದಾಗ ಪೋಲೀಸಿನವರು ಲಾಠಿ ಚಾರ್ಜ್ ಮಾಡಿದರು, ಟೀರ್‌ಗ್ಯಾಸ್ ಹೊಡೆದರು. ಈ ರೀತಿ ನಡೆಯಬೇಕಾದರೆ ಆ ಸಮಯದಲ್ಲಿ ಪೋಲೀಸಿನವರ ದೌರ್ಜನ್ಯ ಎಷ್ಟರಮಟ್ಟಿಗೆ ಇತ್ತು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ಈ ರೀತಿ ಅಲ್ಲಿ ಸಂಶಯಪಡತಕ್ಕ ಒಂದು ಘಟನೆ ನಡೆದಿದೆ ಅದರ ನಿಜಾಂಶವನ್ನು ತಿಳಿದುಕೊಳ್ಳಬೇಕು ಎಂದು ಸಾರ್ವಜನಿಕರು ಅಲ್ಲಿಗೆ ಹೋದರು.

ಅಧ್ಯಕ್ಷರು.—ನಿಜಾಂಶವನ್ನು ತಿಳಿದುಕೊಳ್ಳುವುದಕ್ಕೆ ಎನ್‌ಕ್ವೈರಿ ಮಾಡುತ್ತೇವೆ ಎಂದು ಹೇಳಿದ್ದಾರೆ. ಇನ್ನೇನು ಮಾಡಬೇಕು ಎಂಬುದನ್ನು ಹೇಳಿ ?

ಶ್ರೀ ಎಚ್. ಟಿ. ಕೃಷ್ಣಪ್ಪ.—ಎನ್‌ಕ್ವೈರಿ ಮಾಡುವುದು ಈ ಸಮಸ್ಯೆಗೆ ಪರಿಹಾರವಲ್ಲ. ನಿರಾಯುಧರಾಗಿರತಕ್ಕ ಜನ ಬಂದೂಕವನ್ನು ಹಿಡಿದುಕೊಂಡಿರತಕ್ಕವರ ಮೇಲೆ ನುಗ್ಗಿ ಆ ಹೆಣವನ್ನು ನೋಡುವುದಕ್ಕೆ ಹೋಗಬೇಕಾದರೆ ಅದು ಯಾವ ಮಟ್ಟಕ್ಕೆ ಹೋಗಿದೆ ಎಂಬುದನ್ನು ತಾವೇ ಊಹೆ ಮಾಡಿ. ಆ ಜನಗಳನ್ನು ಪೋಲೀಸಿನವರು ಕೆರಳಿಸಿ ಆ ಜನಗಳ ಮನಸ್ಸಿಗೆ ನೋವಾಗಿರುವುದರಿಂದ ಅವರು ಪೋಲೀಸಿನವರ ಮೇಲೆ ಪ್ರತಿಭಟನೆ ಮಾಡಿದ್ದಾರೆ. ಇದರಿಂದ ಪೋಲೀಸಿನವರಲ್ಲಿ ಒಂದು ಸೌಜನ್ಯ ಇಲ್ಲ ಎಂದು ತಿಳಿಯುತ್ತಿದೆ. ಆ ಪೋಲೀಸಿನವರು ರಿಜರ್ವ್ ಪೋಲೀಸ್ ಬೇರೆ ಕರೆಸಿ ಆ ಸಾರ್ವಜನಿಕರ ಮೇಲೆ ಗುಂಡು ಇಟ್ಟರು. ಇದರಿಂದ 5 ಜನಗಳಿಗೆ ಗಾಯವಾಗಿದೆ ಎಂದು ಮಾನ್ಯ ಮುಖ್ಯ ಮಂತ್ರಿಗಳೇ ಹೇಳಿಕೆಯನ್ನು ಕೊಟ್ಟಿದ್ದಾರೆ ಇಂಥಾ ಒಂದು ಪರಿಸ್ಥಿತಿ ಇರುವಾಗ ಆ ಪೋಲೀಸ್ ಅಧಿಕಾರಿಗಳನ್ನು ಅಯಾ ಸ್ಥಳದಲ್ಲಿ ಮುಂದುವರಿಸಿಕೊಂಡು ಹೋಗುವುದು ನ್ಯಾಯವೇ ! ಪೋಲೀಸಿನವರಿಗೆ ರಕ್ಷಣೆಯನ್ನು ಕೊಟ್ಟುಕೊಂಡು ಹೋಗತಕ್ಕಂಥಾದ್ದನ್ನು ಖಂಡಿತಾ ತ್ಯಾಜ್ಯ ಮಾಡಬೇಕು. ಇವೊತ್ತು ಅಲ್ಲಿ ನಡೆದಂತಹ ಒಂದು ಕೃತ್ಯಕ್ಕೋಸ್ಕರ ನಾಗಮಂಗಲದ ಜನ ಪೋಲೀಸ್ ಠಾಣೆಯನ್ನು ಧಾಳಿ ಮಾಡಿದರು. ಇಂಥಾ ಅನ್ಯಾಯಗಳು ನಡೆದರೆ ನಾಳೆ ಕರ್ನಾಟಕದ ಜನ

ವಿಧಾನಸೌಧವನ್ನು ಧಾಳಿ ಮಾಡುತ್ತಾರೆ. ಆದ್ದರಿಂದ ಈ ವಿಚಾರದಲ್ಲಿ ಸರ್ಕಾರದವರು ತೀವ್ರವಾಗಿ ತಮ್ಮ ಗಮನವನ್ನು ಹರಿಸಿ ಕೂಡಲೇ ಸಂಬಂಧಪಟ್ಟ ಪೋಲೀಸ್ ಅಧಿಕಾರಿಗಳನ್ನು ಸಸ್ಪೆನ್‌ಷನ್‌ನಲ್ಲಿ ಇಡಬೇಕು, ಕೆಲವರನ್ನು ವರ್ಗಾವಣೆ ಮಾಡಬೇಕು ಎಂದು ನಾನು ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಡಿ. ಹಲಗೇಗೌಡ (ಪಾಂಡವಪುರ).—ಸ್ವಾಮಿ ಈ ಘಟನೆಯಲ್ಲಿ ಸತ್ತ ವ್ಯಕ್ತಿ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟವನು. ಇದರಲ್ಲಿ ಯಾವ ಮುಚ್ಚು ಮರೆಯಿಲ್ಲ. ಪೋಲೀಸ್ ಇನ್‌ಸ್ಪೆಕ್ಟರು ಹೋದಂತಹ ಲಾರಿಯಲ್ಲಿ ಶ್ರೀ ಕರೀಗೌಡನನ್ನು ಕರೆದುಕೊಂಡು ಹೋಗುವಾಗ್ಯೆ ಅವನು ಲಾರಿಯಿಂದ ಕೆಳಗೆ ಬಿದ್ದು ಗಾಯವಾಗಿ ರಕ್ತಸಿಕ್ತವಾಗಿದ್ದ ಎನ್ನುವ ವರದಿ ನಿಜ. ಅದನ್ನು ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಈ ಹೆಣವನ್ನು ಲಾರಿಯಲ್ಲಿ ಪೋಲೀಸ್ ಸ್ಟೇಷನ್ನಿಗೆ ತೆಗೆದು ಕೊಂಡು ಹೋದಮೇಲೆ ಶಾಂತಿಪ್ರಿಯರಾದ ನಾಗಮಂಗಲದ ಜನ ಪೋಲೀಸ್ ಸ್ಟೇಷನ್ನಿನಲ್ಲಿದ್ದ ಹೆಣವನ್ನು ನೋಡುವುದಕ್ಕೆ ಹೋದಾಗ ಗೋಲಿಬಾರ್ ಮಾಡುವ ಮಟ್ಟಕ್ಕೆ ಈ ವಿಷಯ ಹೋಯಿತು ಎಂದರೆ ಅಲ್ಲಿದ್ದ ಅಧಿಕಾರಿಗಳು ಯಾವ ರೀತಿ ವರ್ತಿಸಿದ್ದಾರೆ ಎಂಬುದು ಗೊತ್ತಾಗುತ್ತದೆ. ಬಹುಶಃ ಆ ಕೊಲೆಯಲ್ಲಿ ಪೋಲೀಸಿನವರು ಭಾಗವಹಿಸಿಲ್ಲ ಎನ್ನುವ ವಿಷಯ ನನಗೆ ಗೊತ್ತಾಗಿದೆ. ನಾನು ಈ ವಿಷಯವನ್ನು ಆ ಪ್ರದೇಶದ ಜನಗಳಿಂದ ಸಂಗ್ರಹ ಮಾಡಿದ್ದೇನೆ. ಇದು ಪೋಲೀಸಿನವರಿಂದ ಆದಂತಹ ಕೊಲೆ ಅಲ್ಲ. ಅವನು ತಾನಾಗಿಯೇ ಲಾರಿಯಿಂದ ಬಿದ್ದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ನನಗೆ ಬಹುಮಂದಿ ತಿಳಿಸಿದ್ದಾರೆ. ಶ್ರೀ ಕರೀಗೌಡ ಲಾರಿಯಲ್ಲಿ ಹೋಗುವಾಗ ಪೋಲೀಸ್ ಅಧಿಕಾರಿ ಕರೀಗೌಡನನ್ನು ಕುರಿತು ನಾಗಮಂಗಲಕ್ಕೆ ಹೋದಮೇಲೆ ''ನೇಣು ಹಾಕುತ್ತೇನೆ'' ಎಂದು ಹೇಳಿದ, ನಂತರ 2 ಮೈಲಿ ದೂರ ಹೋದ ಮೇಲೆ ಅವನು ಲಾರಿಯಿಂದ ಕೆಳಕ್ಕೆ ಹಾರಿ ಆತ್ಮಹತ್ಯೆ ಮಾಡಿಕೊಂಡ ಎಂದು ಗೊತ್ತಾಗಿದೆ. ಆ ಪೋಲೀಸ್ ಅಧಿಕಾರಿ ಆ ರೀತಿ ಹೇಳಬೇಕಾದರೆ ಆ ಕರೀಗೌಡನ ಮೇಲೆ ಕಳೆದ ಒಂದೂವರೆ ತಿಂಗಳಿಂದ ಕೆಲವು ಆಪಾದನೆಗಳು ಇದ್ದುವು. ಆದ್ದರಿಂದ ಇನ್ನು ನಾಗಮಂಗಲಕ್ಕೆ ಹೋದಮೇಲೆ ನನ್ನನ್ನು ವಿಚಾರಣೆಗೆ ಗುರಿಪಡಿಸುತ್ತಾರೆ, ನನಗೆ ತೊಂದರೆಯಾಗುತ್ತದೆ ಎಂದು ಅವನು ತಿಳಿದು ಈ ರೀತಿ ಅವನು ಆತ್ಮಹತ್ಯ ಮಾಡಿಕೊಂಡಿದ್ದಾನೆ. ಆದರೆ ಪೋಲೀಸ್ ಅಧಿಕಾರಿ ಪಕ್ಕದಲ್ಲಿದ್ದು ಇದಕ್ಕೆ ಅವಕಾಶ ಮಾಡಿರುವುದು ಅಧಿಕಾರಿಯ ಅವಿವೇಕತನ. ಈತ ಬುದ್ಧಿವಂತಿಕೆ ಪ್ರದರ್ಶಿಸಿಲ್ಲ. ಆದ್ದರಿಂದ ಈ ಕೂಡಲೇ ಆ ಪೋಲೀಸ್ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿ ವಿಚಾರಣೆ ಮಾಡಬೇಕು. ಆದರೆ ಸರ್ಕಾರದವರು ಪೋಲೀಸ್ ಅಧಿಕಾರಿಗಳನ್ನು ವಹಿಸಿಕೊಂಡಿದ್ದಾರೆ ಎಂದು ಏನು ವಿರೋಧ ಪಕ್ಷದ ಸದಸ್ಯರು ಹೇಳಿದರು ಅದನ್ನು ಒಪ್ಪತಕ್ಕದ್ದಲ್ಲ. ಕೊನೆಯ ಪಕ್ಷ ಅವರ ತೃಪ್ತಿಗೋಸ್ಕರ ಆ ಘಟನೆ ನಡೆಯುವುದಕ್ಕೆ ಅವಕಾಶ ಕೊಟ್ಟಂತಹ ಪೋಲೀಸ್ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿ ಅವರನ್ನು ವಿಚಾರಣೆ ನಡೆಸಿದರೆ ಸಾಕು ಎಂದು ಅನಿಸುತ್ತದೆ.

ಶ್ರೀ ಎಸ್. ಬಂಗಾರಪ್ಪ (ಸೊರಬ).—ಫೇರ್ ಎನ್‌ಕ್ವೈರಿ ದೃಷ್ಟಿಯಿಂದ ಆ ಪೋಲೀಸ್ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಬೇಕು.

2–30 P.M.

† ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸಿಪುರ).—ಮಾನ್ಯ ಅಧ್ಯಕ್ಷರೇ, ನಾನು ನಿನ್ನೆಯ ದಿವಸ ನಾಗಮಂಗಲದಲ್ಲಿ ನಡೆದಂತಹ ಘಟನೆಯ ಬಗ್ಗೆ ಇಲ್ಲಿ ಚರ್ಚೆಯಾಗಿರುವುದನ್ನು ಪತ್ರಿಕೆಯಲ್ಲಿ ಓದಿದೆ. ನಿನ್ನೆ ಸಾಯಂಕಾಲ ಅಲ್ಲಿಗೆ ಹೋಗಿದ್ದೆ. ಈಗ ನಾನು ಅಲ್ಲಿ ನಡೆದಂತಹ ವಿಚಾರದ ಬಗ್ಗೆ ಪೂರ್ಣವಾದ ವಿವರಗಳನ್ನು ಹೊಂದುವುದಕ್ಕೆ ಮೊದಲು ಖಂಡಿತವಾಗಿ ಏನನ್ನೂ ಹೇಳುವುದಕ್ಕೆ ತಯಾರಿಲ್ಲ. ಒಂದೊಂದು ಸಾರಿ ಸರ್ಕಾರದಿಂದ ಬರತಕ್ಕ ಉತ್ತರ ಸಹ ಹಾಗೆ ಇದೆ. ನೀವು ವಿಷಯ ಸಂಗ್ರಹಣೆ ಮಾಡದೆ ಈ ರೀತಿ ಮಾತನಾಡುತ್ತಿದ್ದೀರಿ ಎಂದು ಹೇಳುತ್ತಿದ್ದಾರೆ. ಆದರೆ ಈ ಘಟನೆಯಲ್ಲಿ ಒಂದು ಸಂಶಯಾತ್ಮಕವಾದ ಪರಿಸ್ಥಿತಿ ಏನೆಂಬುದನ್ನು ನಾನು ತಿಳಿದುಕೊಂಡಿದ್ದೇನೆ. ಮಂಡ್ಯಕ್ಕೆ ಅಪರಾಧಿಯನ್ನು ಪೋಲೀಸ್ ಇನ್‌ಸ್ಪೆಕ್ಟರ್ ಕರಕೊಂಡು ಹೋದರು ಮತ್ತು ಸಂಜೆ ವಾಪಸ್ಸು ಲಾರಿಯಲ್ಲಿ ಕರಕೊಂಡು ಬಂದರು. ಇದರಲ್ಲಿ ಎರಡು ರೀತಿಯ ವರ್ಶನ್ಸ್ ಇವೆ. ಒಂದು ಲಾರಿಯಲ್ಲಿ ಕರಕೊಂಡು ಬರುವಾಗ ಅವನು ಹಾರಿ ಬಿದ್ದು ಜಕಂ ಆಗಿ ಸತ್ತು ಹೋದ. ಇನ್ನೊಂದು ಮಂಡ್ಯದಲ್ಲಿ ಅವನಿಗೆ ಚೆನ್ನಾಗಿ ಹೊಡೆದು ಬಿಟ್ಟು ಅವನ ಸ್ಥಿತಿ ಚಿಂತಾಜನಕವಾಗಿದ್ದರೂ, ಲಾರಿಯಲ್ಲಿ ಬರುವಾಗ ನೆಗೆದು ಬಿದ್ದು ಸತ್ತು ಹೋದ ಎಂದು ಹೇಳುವಂತಹ ಪೋಲೀಸ್ ಅಧಿಕಾರಿಗಳ ಮಾತು. ಈ ರೀತಿ ಎರಡು ತರಹ ಇದೆ. ಅವನಿಗೆ ಬಿದ್ದ ಮೇಲೆ ಟ್ರೀಟ್‌ಮೆಂಟ್ ಮಾಡಿದರೂ ಅತನು ಸತ್ತು ಹೋದ ಎಂದು ಹೇಳುತ್ತಿದ್ದಾರೆ. ಮಂಡ್ಯಕ್ಕೆ ಕೈದಿಯನ್ನು

ಶ್ರೀ ಎ. ಆರ್. ಬದರಿನಾರಾಯಣ.—ಈ ಯೋಜನೆಯ ಉದ್ದೇಶವೇನೆಂದರೆ ವಿದ್ಯಾರ್ಥಿಗಳು ಹಳ್ಳಿಯ ಜನರೊಡನೆ ಮತ್ತು ಹಳ್ಳಿಯ ಜೀವನದೊಂದಿಗೆ ಮಿಳಿತವಾಗಬೇಕು ಮತ್ತು ಆ ಒಂದು ಸನ್ನಿವೇಶವನ್ನು ಕಲ್ಪನೆ ಮಾಡಬೇಕೆಂಬ ದೃಷ್ಟಿಯಿಂದ ಕೇಂದ್ರ ಸರ್ಕಾರದವರು ಈ ಯೋಜನೆ ತಯಾರು ಮಾಡಿ ನಮಗೂ ಸಹ ಕಳುಹಿಸಿಕೊಟ್ಟಿದ್ದಾರೆ.

ಶ್ರೀ ಟಿ. ಆರ್. ಶಾಮಣ್ಣ.—ಈ ಹಣ ವ್ಯರ್ಥವಾಗಿ ಖರ್ಚಾಗದಂತೆ ನೋಡಿಕೊಳ್ಳಬೇಕಲ್ಲದೆ, ಅದು ಯಾವ ರೀತಿಯಿಂದ ಖರ್ಚಾಯಿತು ಎಂಬ ಬಗ್ಗೆ ಮುಂದಿನ ವರ್ಷ ಈ ಸಭೆಯಲ್ಲಿ ಒಂದು ವರದಿಯನ್ನು ಇಡುತ್ತೀರಾ ?

ಶ್ರೀ ಎ. ಆರ್. ಬದರಿನಾರಾಯಣ.—ಈ ಕೆಲಸವನ್ನು ನೋಡಿಕೊಳ್ಳಲು ಅರಿತಂತಹ ಮತ್ತು ನುರಿತಂತಹ ಜನರು ಇರುತ್ತಾರೆ. ಅವರ ಸುಪರ್ದಿಗೆ ಹಣ ಕೊಡಲಾಗುತ್ತದೆ. ಅವರು ಹಣ ಪೋಲಾಗದಂತೆ ನೋಡಿಕೊಳ್ಳುತ್ತಾರೆ. ಬೇಕಾದರೆ ಹಣದ ಖರ್ಚಿನ ಬಗ್ಗೆ ರಿಪೋರ್ಟ್ ಕೊಡೋಣ.

ಶ್ರೀ ಡಿ. ಹಲಗೇಗೌಡ.—ಬರಗಾಲ ಪ್ರದೇಶದಲ್ಲಿರುವ ಬಡತನವನ್ನು ವಿದ್ಯಾರ್ಥಿಗಳು ತಿಳಿದುಕೊಳ್ಳಲಿ ಎಂಬ ಕಾರಣದಿಂದ ಅವರನ್ನು ಅಲ್ಲಿಗೆ ಕಳುಹಿಸಲಾಗುತ್ತಿದೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಈಗ ಕೆಲವು ಕಡೆಗಳಲ್ಲಿ ಸೇವಾದಳದ ಕ್ಯಾಂಪ್ ಎಂದು ಮಾಡಿಸುತ್ತಾರೆ. ಅಲ್ಲಿ 500 ರೂಪಾಯಿಗಳ ಕೆಲಸವಾಗಿರುವುದಿಲ್ಲ ; ಆದರೆ 5 ಸಾವಿರ ರೂಪಾಯಿಗಳು ಖರ್ಚಾಗಿರುತ್ತದೆ. ಆ ರೀತಿ ಇಲ್ಲಿಯೂ ಆಗಬಾರದು. ವಿದ್ಯಾರ್ಥಿಗಳ ಮೂಲಕ ಇಷ್ಟೊಂದು ಹಣವನ್ನು ವ್ಯರ್ಥವಾಗಿ ಖರ್ಚು ಮಾಡಿಸುವ ಬದಲು ಅಲ್ಲಿರುವ ಜನರಿಗೆ ಕೆಲಸ ಒದಗಿಸುವುದು ಒಳ್ಳೆಯದಲ್ಲವೇ ?

ಶ್ರೀ ಎ. ಆರ್. ಬದರಿನಾರಾಯಣ.—ಅಲ್ಲಿ ಕೆಲಸ ಮಾಡುವ ಜನರಿಗೆ ತೊಂದರೆ ಇದರಿಂದ ಬರುವುದಿಲ್ಲ. ಅಲ್ಲಿ ಎಷ್ಟು ಜನರಿಗೆ ಬೇಕಾದರೂ ಕೆಲಸ ಕೊಡಲಾಗುತ್ತದೆ. ಅದಕ್ಕೂ ಇದಕ್ಕೂ ಸಂಬಂಧವಿಲ್ಲ. ಕಾಲೇಜಿನ ವಿದ್ಯಾರ್ಥಿಗಳು ರಜಾ ವೇಳೆಯಲ್ಲಿ ಹಳ್ಳಿಯಲ್ಲಿ ಇದ್ದುಕೊಂಡು ಅವರ ಜೀವನ, ಅವರ ಕಷ್ಟಸುಖಗಳನ್ನು ತಿಳಿದುಕೊಳ್ಳಲಿ, ಅವರೊಡನೆ ಮಿಳಿತವಾಗಲೀ ಎಂಬ ಉದ್ದೇಶದಿಂದ ಈ ಯೋಜನೆಯನ್ನು ಕೈಕೊಳ್ಳಲಾಗುತ್ತಿದೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಇಂದು ಗಂಡುಹುಡುಗರು ಮತ್ತು ಹೆಣ್ಣುಮಕ್ಕಳೆಲ್ಲರೂ ಟೈಟ್ ಪ್ಯಾಂಟ್ ಹಾಕಿಕೊಂಡು ಒಬ್ಬರ ಹಿಂದೆ ಒಬ್ಬರು ಓಡಾಡಿಕೊಂಡು ಇದ್ದಾರೆ. ಇಂತಹವರನ್ನು ಅಲ್ಲಿಗೆ ಕಳುಹಿಸುವುದರಿಂದ ಆ ಯೋಜನೆ ನಿಜವಾಗಿಯೂ ಕಾರ್ಯಗತವಾಗುತ್ತದೆಯೇ ?

ಶ್ರೀ ಎ. ಆರ್. ಬದರಿನಾರಾಯಣ.—ಪ್ರಯತ್ನ ಮಾಡಿರುವುದು ಒಳ್ಳೆಯ ಉದ್ದೇಶದಿಂದ. ಸಫಲವಾಗುವುದಿಲ್ಲ ಎಂದು ಏತಕ್ಕೆ ಹೇಳುತ್ತೀರಿ ? ನಿರಾಶವಾದಿ ಆಗಿ ನೀವು ಏಕೆ ಇದ್ದೀರಾ ?

Notice of adjournment Motion :

re : Statement of the Chief Minister in respect of death of one Sri Kari Gowda at Nagamangala

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ಪೇಟೆ).—ನೆನ್ನೆ ದಿವಸ ಮಾನ್ಯ ಮುಖ್ಯ ಮಂತ್ರಿಗಳು ನಾಗಮಂಗಲದ ಪ್ರಕರಣದ ಬಗ್ಗೆ ಏನು ಹೇಳಿಕೆ ಕೊಟ್ಟರು ಅದು ಸರಿಯಲ್ಲ. ಅಲ್ಲಿ ಈಗ ಪರಿಸ್ಥಿತಿ ಸಂಪೂರ್ಣವಾಗಿ ಹದಗೆಟ್ಟಿದೆ. ಮತ್ತು ಪೋಲೀಸ್ ಸ್ಟೇಷನ್ನಿನಲ್ಲಿಯೇ ಅತನನ್ನು ಕೊಂದಿರುವ ಬಗ್ಗೆ ಆಧಾರಗಳು ಸಹ ಇವೆ. ಮತ್ತು ಈ ಪ್ರಕರಣದಲ್ಲಿ ಅನೇಕ ಸಂಶಯಗಳು ಉದ್ಭವವಾಗಿವೆ.

ಅಧ್ಯಕ್ಷರು.—ನೆನ್ನೆ ದಿವಸ ಅದರ ಬಗ್ಗೆ ಪ್ರಸ್ತಾಪವಾಗಿ, ಮುಖ್ಯ ಮಂತ್ರಿಗಳು ತನಿಖೆ ಮಾಡಿಸುವುದಾಗಿ ಒಪ್ಪಿಕೊಂಡಿದ್ದಾರೆ. ತಾವು ಸಂಶಯ ಇಟ್ಟುಕೊಂಡು ನೋಡಿದರೆ ಅದು ಸಂಶಯವಾಗಿಯೇ ಕಾಣುತ್ತದೆ.

ಶ್ರೀ ವಾಟಾಳ್ ನಾಗರಾಜ್.—ಈ ಬಗ್ಗೆ ತಮ್ಮ ಗಮನಕ್ಕೆ ಒಂದು ಅಂಶವನ್ನು ತರುತ್ತೇನೆ. ಬಾಕಿ ವಿವರಗಳನ್ನು ಆ ಕ್ಷೇತ್ರದ ಸದಸ್ಯರಾದ ಶ್ರೀ ಕೃಷ್ಣಪ್ಪನವರು ಹೇಳುತ್ತಾರೆ. ಮುಖ್ಯವಾಗಿ ಆ ವಿಚಾರದಲ್ಲಿ ತನಿಖೆ ನಡೆಸುವುದಕ್ಕೆ ಮೊದಲು ಸರ್ಕಾರದವರು ಸಂಬಂಧಪಟ್ಟ ಪೋಲೀಸ್ ಇನ್ಸ್‌ಪೆಕ್ಟರನ್ನು ಸಸ್ಪೆಂಡ್ ಮಾಡಬೇಕು. ಹಿಂದೆ ಮಧುಗಿರಿ ಪ್ರಕರಣ ನಡೆದಾಗಲೂ ಸಹ ಇವರೇ ಇದ್ದರು. ಆದ್ದರಿಂದ ಇವರನ್ನು ಮೊದಲು ಸಸ್ಪೆಂಡ್ ಮಾಡಬೇಕು.

ಅಧ್ಯಕ್ಷರು.—ತನಿಖೆ ನಡೆಸಿದಾಗ ಅದೆಲ್ಲಾ ಹೊರಗೆ ಬಂದೇ ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್.—ತಪ್ಪಿತಸ್ಥರನ್ನು ಇಟ್ಟುಕೊಂಡು ತನಿಖೆ ಮಾಡಿಸಿದರೆ ನ್ಯಾಯ ಸಿಗುವುದಿಲ್ಲ. ಆದ್ದರಿಂದ ಆ ಪೋಲೀಸ್ ಇನ್ಸ್‌ಪೆಕ್ಟರನ್ನು ಸಸ್ಪೆಂಡ್ ಮಾಡಬೇಕು, ಇಲ್ಲವೇ ಜೈಲಿನಲ್ಲಿಡಬೇಕು. ಮಧುಗಿರಿ ಪ್ರಕರಣದಲ್ಲಿಯೇ ಆ ಅಧಿಕಾರಿಯನ್ನು ಮನೆಗೆ ಕಳಿಸಬೇಕಾಗಿತ್ತು. ಆದರೆ ಆ ರೀತಿ ಮಾಡದೆ ಅದೇ ಅಧಿಕಾರಿಗೆ ಪ್ರಮೋಷನ್ ಕೊಟ್ಟುಬಿಟ್ಟಿದ್ದಾರೆ. ಮುಖ್ಯಮಂತ್ರಿಗಳು ನೆನ್ನೆ ಕೊಟ್ಟ ವಿವರ ಈ ರೀತಿ ಇದೆ. ''ಮಂಡ್ಯದ ಸಕ್ಕರೆ ಕಾರ್ಖಾನೆಯ ನೌಕರ ಕರಿಗೌಡ ಎಂಬುವವರು ಒಂದು ಕ್ರಿಮಿನಲ್ ಕೇಸಿನಲ್ಲಿ ದೂರಿತ್ತವರಾಗಿದ್ದು ಮತ್ತೊಂದರಲ್ಲಿ ಸಾಕ್ಷಿಯಾಗಿದ್ದರು. ಮಾರ್ಚಿ 19 ರಂದು ಅದರ ಸಂಬಂಧದಲಿ ನಾಗಮಂಗಲ ಪೋಲೀಸು ಸರ್ಕಲ್ ಇನ್ಸ್‌ಪೆಕ್ಟರ್ ಅವರು ಮಂಡ್ಯದ ಪೋಲೀಸ್ ಠಾಣೆಗೆ ಹಲವು ಪ್ರಶ್ನೆಗಳನ್ನು ಕೇಳುವುದಕ್ಕಾಗಿ ಅವರನ್ನು ಕರೆಸಿದರು. ಅಪಾದಿತನ ವಿಚಾರದಲ್ಲಿ ಇನ್ನೂ ಕೆಲವು ಮಾಹಿತಿ ಸಂಗ್ರಹಿಸುವುದಾಗಿ ಕರಿಗೌಡ ಹೊರಟುಹೋದರು. ಬೇರೆ ವಾಹನ ದೊರಕದಿದ್ದುದರಿಂದ ಇನ್ಸ್‌ಪೆಕ್ಟರರು ಒಂದು ಲಾರಿಯಲ್ಲಿ ನಾಗಮಂಗಲಕ್ಕೆ ಹೊರಟರು ಎಂದು ಹೇಳಿದ್ದಾರೆ. ಅವರಿಗೆ ಜೀಪ್ ಇದ್ದರೂ ಸಹ ಲಾರಿಯಲ್ಲಿ ಏತಕ್ಕೆ ಹೋದರು ? ಲಾರಿ ಚಿಕ್ಕಮಂಡ್ಯದ ಹತ್ತಿರ ಹೋದಾಗ ಕರಿಗೌಡ ಆ ಲಾರಿಯನ್ನು ತಡೆದು ನಿಲ್ಲಿಸಿ ಹತ್ತಿದ. ಯಾವುದೋ ಕೆಲಸಕ್ಕಾಗಿ ಆತ ನಾಗಮಂಗಲಕ್ಕೆ ಹೊರಟಿದ್ದ ಒಬ್ಬ ಮನುಷ್ಯನನ್ನು ಮುಖ್ಯಮಂತ್ರಿಗಳು ಹೇಳಿಕೆ ಕೊಡುವಾಗ ಲಾರಿಯಿಂದ ಬಿದ್ದು ಸತ್ತ ಎಂದು ಹೇಳಿಕೆ ಕೊಟ್ಟರೆ ಅದು ಸಮಂಜಸವಾಗುತ್ತದೆಯೇ ?

ಅಧ್ಯಕ್ಷರು.—ಎಲ್ಲವನ್ನೂ ತನಿಖೆ ಮಾಡಿಸುವುದಾಗಿ ಮುಖ್ಯಮಂತ್ರಿಗಳು ಹೇಳಿದ್ದಾರೆ. ನಿಮ್ಮ ತೀರ್ಮಾನವನ್ನು ಈಗ ಯಾರು ಕೇಳಿದರು ? ತನಿಖೆಯಾದ ಮೇಲೆ ಏನು ನಿಷ್ಕರ್ಷೆ ಹೊರ ಬರುತ್ತದೋ ಆಗ ಬೇಕಾದರೆ ತಾವು ತಮ್ಮ ಅಭಿಪ್ರಾಯವನ್ನು ತಿಳಿಸಿ. ಈಗ ನಿಮ್ಮ ಅಭಿಪ್ರಾಯಗಳನ್ನೆಲ್ಲಾ ಹೇಳುವುದರಿಂದ ಏನು ಪ್ರಯೋಜನ ?

ಶ್ರೀ ವಾಟಾಳ್ ನಾಗರಾಜ್.—ನಾಗಮಂಗಲಕ್ಕೆ ಇನ್ನೂ ಎರಡು ಮೈಲಿ ದೂರ ಇರುವಾಗಲೇ ಆತ ಲಾರಿಯಿಂದ ಹಾರಿ ಸತ್ತಿದ್ದರೆ, ಸತ್ತ ಹೆಣವನ್ನು ಸ್ಟೇಷನ್ನಿಗೆ ಏತಕ್ಕೆ ತೆಗೆದುಕೊಂಡು ಹೋದರು ? ಇದು ನಿಜ ಸಂಗತಿಯಲ್ಲ. ಆತನನ್ನು ಪ್ರಶ್ನೆ ಮಾಡುವುದಕ್ಕೆ ಸ್ಟೇಷನ್ನಿಗೆ ಕರೆದುಕೊಂಡು ಹೋಗಿ ಅಲ್ಲಿ ಸಾಯುವವರೆಗೆ ಹೊಡೆದಿದ್ದಾರೆ. ಈ ರೀತಿಯ ಅನ್ಯಾಯವನ್ನು ಜನರು ನೋಡಲಾರದೆ ಪೋಲೀಸ್ ಸ್ಟೇಷನ್ ಮುಂದೆ ಸೇರಿದಾಗ ಅವರ ಮೇಲೆ ಮತ್ತೆ ಪೋಲೀಸಿನವರು ವಿನಾಕಾರಣ ಗೋಲೀಬಾರ್ ಮಾಡಿದ್ದಾರೆ. ಗೋಲೀಬಾರ್‌ನಿಂದ ಗಾಯಗೊಂಡ ಜನರಿಂದ ರಕ್ತದ ಬಟ್ಟೆಗಳನ್ನು ತರಿಸುವುದಕ್ಕೆ ಹೇಳಿದ್ದೇನೆ ಸರ್ಕಾರದವರು ಈ ಬಗ್ಗೆ ತನಿಖೆ ಮಾಡಿಸುವುದಕ್ಕೆ ಮೊದಲು ಸಂಬಂಧಪಟ್ಟ ಇನ್ಸ್‌ಪೆಕ್ಟರನ್ನು ಸಸ್ಪೆಂಡ್ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಇದನ್ನು ಆಳವಾಗಿ ಪರಿಶೀಲನೆ ಮಾಡಿದಾಗ ಏನು ಕಂಡುಬಂತು ಎಂದರೆ ಆ ಕರೀಗೌಡ ಎನ್ನುವ ಮನುಷ್ಯ ಯಾವ ಸ್ಥಳದಲ್ಲಿ ಸತ್ತು ಬಿದ್ದಿದ್ದನೋ ಅವನನ್ನು ಎಂದರೆ ಹೆಣವನ್ನು ನೇರವಾಗಿ ಪೋಲೀಸ್ ಸ್ಟೇಷನ್ನಿಗೆ ತೆಗೆದುಕೊಂಡು ಹೋಗತಕ್ಕಂಥ ಆವಶ್ಯಕತೆ ಇರಲಿಲ್ಲ. ಯಾವ ಜಾಗದಲ್ಲಿ ಹೆಣ ಬಿದ್ದಿರುತ್ತದೆ ಆ ಹೆಣವನ್ನು ಆ ಜಾಗದಿಂದ ಎತ್ತಬೇಕಾದರೆ ಸಾಮಾನ್ಯವಾಗಿ ಆ ಸ್ಥಳದಲ್ಲಿ ಒಂದು ಮಹಜರ್ ಬರೆದು, ಕ್ರಿಮಿನಲ್ ಪ್ರೊಸಿಜರ್ ಪ್ರಕಾರ ಪೋಲೀಸ್ ಆಕ್ಟ್ ಪ್ರಕಾರ ಮಾಡಬೇಕಾದ ಕೆಲಸವನ್ನು ಮಾಡಿ ಇನ್‌ಕ್ವೆಸ್ಟ್ ಮಾಡಬೇಕು. ಆದರೆ ಆ ಸ್ಥಳದಲ್ಲಿ ಮಹಜರ್ ಮಾಡಿಲ್ಲ, ಇನ್‌ಕ್ವೆಸ್ಟ್ ಮಾಡಿಲ್ಲ. ಪೋಲೀಸ್ ಅಧಿಕಾರಿಗಳು ಈ ಹೆಣವನ್ನು ಪೋಲೀಸ್‌ನವರು ತೆಗೆದುಕೊಂಡು ಹೋಗತಕ್ಕಂಥಾ ಸಂದರ್ಭದಲ್ಲಿ ಅವರು ನೇರವಾಗಿ ಪೋಸ್ಟ್‌ಮಾರ್ಟಂಗೆ ತೆಗೆದುಕೊಂಡು ಹೋಗಬೇಕಾಗಿತ್ತು. ಅವರು ಅದನ್ನು ಪೋಲೀಸ್ ಸ್ಟೇಷನ್ನಿಗೆ ತೆಗೆದುಕೊಂಡು ಹೋಗತಕ್ಕಂಥಾ ಆವಶ್ಯಕತೆ ಇರಲಿಲ್ಲ. ಇದರಲ್ಲಿ ಪೋಲೀಸಿನವರು ತಪ್ಪು ಮಾಡಿದ್ದಾರೆ ಎಂಬುದು ಸ್ಪಷ್ಟವಾಗಿ ಕಾಣುತ್ತದೆ. ಆದ್ದರಿಂದ ಇದರಲ್ಲಿ ಮೊದಲು ನ್ಯಾಯ ದೊರೆಯಬೇಕಾದರೆ ಮೊದಲು ಇದಕ್ಕೆ ಸಂಬಂಧಪಟ್ಟ ಇನ್ಸ್‌ಪೆಕ್ಟರನ್ನು ಸಸ್ಪೆನ್‌ಷನ್‌ನಲ್ಲಿಟ್ಟು ಈ ಬಗ್ಗೆ ವಿಚಾರಣೆ ನಡೆಸಿದರೆ ಆಗ ಸತ್ಯ ತಿಳಿಯುತ್ತದೆ. ಅವರು ನಿಜವಾದ ವಿಚಾರವನ್ನು ಬಚ್ಚಿಡುವ ದೃಷ್ಟಿಯಿಂದ ಇದನ್ನು ಮಾಡಿದ್ದಾರೆ ಎಂದು ಕಾಣುತ್ತದೆ.

ಶ್ರೀ ಕೆ. ಯಂಕಟಪ್ಪ.—ಇಲ್ಲಿ ಮಾನ್ಯ ಮಂತ್ರಿಗಳು ಕೊಟ್ಟಿರುವ ಸ್ಟೇಟ್‌ಮೆಂಟು ನೋಡಿದರೆ ಇದರ ಜಾಗವನ್ನು ಕ್ರಿಮಿನಲ್ ಟ್ರೈಬ್ಸ್‌ನವರಿಗೆ ಕೊಟ್ಟಿರಲಲ್ಲ ಎನ್ನುವ ಹಾಗೆ ಇದೆ, ಇದನ್ನು ಹುಬ್ಬಳ್ಳಿ ಕಾರ್ಪೊರೇಷ ನವರು ಪ್ಲೇ ಗ್ರೌಂಡಿಗಾಗಿ ಬಿಟ್ಟುಕೊಟ್ಟಿದ್ದರು, ಆದುದರಿಂದ ಈಗಲಾದರೂ ಮಾನ್ಯ ಮಂತ್ರಿಗಳು ಇದನ್ನು ಕೂಲಂಕುಷವಾಗಿ ಪರಿಶೀಲಿಸಿ ಅವರಿಗೆ ಈ ಜಾಗವನ್ನು ಬಿಟ್ಟುಕೊಡಲು ಸಹಾಯ ಮಾಡುತ್ತಾರೆಯೇ ?

ಶ್ರೀ ಎಂ ಮಲ್ಲಿಕಾರ್ಜುನಸ್ವಾಮಿ.—ಇದು ಸರಕಾರಕ್ಕೆ ಸೇರಿದಂತಹ ಸ್ಥಳ. ಇವರಿಗೆ ನಾವು ಕೊಟ್ಟಿರಲಿಲ್ಲ, ಸಾರ್ವಜನಿಕ ಹಿತದೃಷ್ಟಿಯಿಂದಲೇ ಇಂತಹ ಒಂದು ಸಂಸ್ಥೆಯ ಕಟ್ಟಡವನ್ನು ಇಲ್ಲಿ ಕಟ್ಟಬೇಕಾಗಿರುವುದರಿಂದ ಇದನ್ನು ವಾಪಸು ತೆಗೆದುಕೊಂಡು ಇಷ್ಟು ಹಣ ಇದಕ್ಕೆ ಖರ್ಚು ಮಾಡಬೇಕೆಂದು ಏರ್ಪಾಡು ಮಾಡಲಾಗುತ್ತಿದೆ.

ಶ್ರೀ ಕೆ. ಯಂಕಟಪ್ಪ.—ಹಿಂದೆ ಇದನ್ನು ವರ್ಕ್‌ಷಾಪಿಗಾಗಿ ಕೊಟ್ಟಿತ್ತು. ಆಮೇಲೆ ಇದನ್ನು ಡಿಪಾರ್ಟುಮೆಂಟಿನವರು ವಾಪಸು ತೆಗೆದುಕೊಂಡು ಇಲ್ಲಿ ಒಂದು ಸ್ಟೇಟು ಹೋಂನ್ನು ಕಟ್ಟಲು ಪ್ರಯತ್ನ ಮಾಡುತ್ತಿದ್ದಾರೆ. ಹುಬ್ಬಳ್ಳಿ ಕಾರ್ಪೊರೇಷನ್‌ನವರು ಈ ಜಾಗವನ್ನು ಪ್ಲೇ ಗ್ರೌಂಡಿಗಾಗಿ ಬಿಟ್ಟುಕೊಟ್ಟಿದ್ದರು ಮತ್ತು ಇಲ್ಲಿಂದ ಅನೇಕ ಅಭ್ಯರ್ಥಿಗಳು ಆಟಪಾಟಗಳಲ್ಲಿ ಗೆದ್ದು ಹಾಕಿ ಹಾಗೂ ಕಬಡ್ಡಿ ಆಟಗಳಲ್ಲಿ ಸ್ಟೇಟ್ ಚಾಂಪಿಯನ್‌ಷಿಪ್‌ಗಳನ್ನೂ ಪಡೆದಿದ್ದಾರೆ. ಇದನ್ನು ಕ್ರಿಮಿನಲ್ ಟ್ರೈಬ್ಸ್‌ಗಳಿ ಪ್ಲೇಗ್ರೌಂಡಿಗಾಗಿ ಕೊಡಬೇಕೆಂದು ಹೇಳಿದ್ದರೂ ಇದನ್ನು ಮಾಡದೆ ಸರಕಾರ ಇಲ್ಲಿ ಕಟ್ಟಡ ಕಟ್ಟಬೇಕೆಂದು ಮಾಡುತ್ತಿದ್ದಾರೆ. ಇದನ್ನು ತಪ್ಪಿಸಿ ಈಗಲಾದರೂ ಸರಕಾರದವರು ಈ ಪ್ಲೇಗ್ರೌಂಡನ್ನು ಬಿಟ್ಟುಕೊಡುತ್ತಾರೆಯೇ ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಮಾನ್ಯ ಸದಸ್ಯರು ಹೇಳುವಂತೆ ಇದನ್ನು ಆಟದ ಮೈದಾನಕ್ಕೆ ಕೊಟ್ಟಿರಲಿಲ್ಲ. ಜಾಗ ಖಾಲಿ ಇದ್ದಾಗ ಮಕ್ಕಳು ಆಟಗಳನ್ನು ಆಡಲು ಹೋಗುತ್ತಿರಬಹುದು, ಇದರಲ್ಲಿ ನಾನು ಆಗಲೇ ಹೇಳಿದ ಹಾಗೆ ಇರುವ ಸರ್ವೆ ನಂಬರಿನಲ್ಲಿ ಕಟ್ಟಡ ಕಟ್ಟಬೇಕೆಂದು ಸರಕಾರ ತೀರ್ಮಾನ ಮಾಡಿರುವುದು ಅಚಲವಾದುದು ಈ ನಿರ್ಧಾರವನ್ನು ತೆಗೆಯಲು ಸಾಧ್ಯವಿಲ್ಲ..

ಶ್ರೀ ಕೆ. ಯಂಕಟಪ್ಪ.—ಇದು ಸಿ ಟಿ ಎಸ್ ನವರ ಹೆಸರಿನಲ್ಲೇ ಇತ್ತು ಎನ್ನುವುದನ್ನು ಸರಕಾರಕ್ಕೆ ತೋರಿಸಿಕೊಟ್ಟರೆ ಆಗಲಾದರೂ ಈ ಜಾಗವನ್ನು ಬಿಟ್ಟುಕೊಡುತ್ತಾರೆಯೇ ?

Sri M. MALLIKARJUNA SWAMY.—I have already stated that the site bearing No.C.T.S.3083/I-A in Ward No. II of Hubli and the buildings thereon belong to Government. I reiterate the statement once again.

MADAM SPEAKER.—The Hon'ble Education Minister will now make an important statement.

Statement by the Minister for Education

re : Involvement of Youth in the National Development Programme

Sri A. R. BADARINARAYANA (Minister for Education).—I wish to make an important statement in regard to the involvement of youth in the National Development Programme.

The question of involving Youth in the programme of nation building and also to impart a social relevance to education has been engaging the attention of the Government of India and the State Government. It has now been held that an average college student should be brought into the main-stream of Indian society.

With a view to test the validities of these assumptions at the national level, a Conference was held and a scheme prepared for participation of one lakh youth in certain programmes mainly directed towards relief to famine-stricken areas.

The objectives of the scheme are to involve sizeable number of Indian youth in the struggle against famine and to prepare these youths for constructive national tasks besides giving them a training in positive and healthy attitude and also to initiate them to be active citizens of a meaningful society and a peaceful world. The entire programme will be divided into 1000 camps each involving roughly about 100 youth. The distribution of one lakh participants among the various States, indicates that Mysore gets a quota of 8000 participants, of which 6000 will be student and 2000 will be non-student. The work camps will be administered by the N.S.S. Co-ordinators and teachers of Universities and Colleges and each camp will be assisted by a Camp Organiser.

Construction of earthen dams for water conservation, digging water tanks, constructing very small earthen dams for soil conservation, kutcha contour bunding and helping in afforestation are some of the projects in which the youths will be involved besides taking up other social and recreational activities.

5. This is a programme fully financed by the Government of India and the project is estimated to cost Rs. 1,40,50,000 of which Government of Mysore will receive approximately Rs 11,24,000 towards this programme for the participation of 8000 colleges and non-college youths. The State Government have agreed to participate in the programme ; The Universities, the Gandhi Peace Foundation, the Department of Education and Youth Services along with the co-operation of voluntary agencies working for the youth in the State are finalising the details. In view of impending examinations, it is proposed that this project be initiated during May-June 1973 and each Camp will be for a duration of 21 days and these programmes will primarily be located in the drought affected areas.

ಶ್ರೀ ಕೋಣಂದೂರು ಲಿಂಗಪ್ಪ—ಮಾನ್ಯ ಮಂತ್ರಿಗಳು ಕೊಟ್ಟ ಹೇಳಿಕೆಯ ಪ್ರಕಾರ ವಿದ್ಯಾರ್ಥಿಗಳನ್ನು ಬರಗಾಲದ ಪ್ರದೇಶದ ಜನರ ಸೇವೆಗೆ ತೊಡಗಿಸುವುದು ಒಂದು ದೃಷ್ಟಿಯಿಂದ ಅಭಿನಂದನಾರ್ಹವಾದ ವಿಷಯವೇ ಆಗಿದೆ. ಆದರೆ ಸಣ್ಣ ಸಣ್ಣ ಡ್ಯಾಮ್‌ಗಳನ್ನು ಕಟ್ಟುವುದು, ಕಟ್ಟೆಗಳನ್ನು ಕಟ್ಟುವುದು, ಮನೆ ಕಟ್ಟುವುದು, ರಸ್ತೆ ಕೆಲಸ ಮುಂತಾದ ಕೆಲಸಗಳಿಗೆ ಅವರನ್ನು ಉಪಯೋಗ ಮಾಡಿಕೊಳ್ಳುವ ಯೋಜನೆ ಏನಿದೆ ಅದು ಒಂದು ದೃಷ್ಟಿಯಿಂದ ವಿಫಲವಾದ ಯೋಜನೆ ಎಂದು ಹೇಳಬಹುದು. ವಿದ್ಯಾರ್ಥಿಗಳನ್ನು ಶ್ರಮಜೀವಿಗಳನ್ನಾಗಿ ಮಾಡುವ ಬದಲು ಅವರಿಂದ ಬರಗಾಲ ಪ್ರದೇಶದಲ್ಲಿರುವ ಅನಕ್ಷರಸ್ಥ ಜನರಿಗೆ ಅಕ್ಷರಾಭ್ಯಾಸ ಮಾಡಿಸಿದರೆ ಆ ಜನರಿಗೆ ಒಂದು ದೊಡ್ಡ ಅಸ್ತ್ರವನ್ನು ಕೊಟ್ಟಂತಾಗುತ್ತದೆ. ಆ ಜನರಿಗೆ ನಾಲ್ಕು ಅಕ್ಷರ ಬರೆಯುವುದಕ್ಕೆ ಬಂದರೆ ಮುಂದೆ ಯಾರೂ ಸಹ ಅವರ ಮೇಲೆ ದಾಳಿ ಮಾಡುವುದಕ್ಕಾಗುವುದಿಲ್ಲ. ಈ ರೀತಿಯಾಗಿ ಹಣ ಖರ್ಚು ಮಾಡದೆ ಬೇರೆ ಬಾಬಗಾಗಿ 11 ಲಕ್ಷ 54 ಸಾವಿರ ರೂಪಾಯಿಗಳನ್ನು ಖರ್ಚು ಮಾಡುವುದು ವ್ಯರ್ಥ ಎಂದು ವಿಷಾದ ವ್ಯಕ್ತಪಡಿಸಬೇಕಾಗುತ್ತದೆ. ಈ ಹಣದಲ್ಲಿ ವಿದ್ಯಾರ್ಥಿಗಳಿಂದ ವಯಸ್ಕರಿಗೆ ವಿದ್ಯಾಭ್ಯಾಸ ಕೊಡಿಸುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ.

(ಶ್ರೀ ಎಚ್. ಡಿ. ದೇವೇಗೌಡ)

ಕರಕೊಂಡು ಹೋದರೆ ವಾಪಸ್ಸು ಬರುವಾಗ ಬಸ್ಸಿನಲ್ಲಿ ಕರಕೊಂಡು ಬರಬೇಕಾಗಿತ್ತು. ಅದು ಬಿಟ್ಟು ಎಂ ವೈ ಎಕ್ಸ್ 7272 ನಂಬರಿನ ಲಾರಿಯಲ್ಲಿ ಕರಕೊಂಡು ಬರುವ ಅವಶ್ಯಕತೆ ಏನಿತ್ತು ? ಈ ಪೋಲೀಸ್ ಅಧಿಕಾರಿಯಾದ ಗೋಪಾಲಮೂರ್ತಿಯ ಪೂರ್ವ ಚರಿತ್ರೆಯಿಂದ ಆ ಸ್ಥಳದ ಜನರ ಅಭಿಪ್ರಾಯವೇನೆಂದರೆ, ಈತನಿಗೆ ಮಂಡ್ಯದಲ್ಲಿ ಚೆನ್ನಾಗಿ ಹೊಡೆದು ತೆಗೆದುಕೊಂಡು ಬಂದಿದ್ದಾರೆ ಎಂದು. ಈತ ಮಧುಗಿರಿಯಲ್ಲಿ ಏನು ಪ್ರಕರಣ ನಡೆಯಿತು ಅದಕ್ಕೆ ಕೂಡ ಕಾರಣನಾದವನು. ಈತನ ಅಭ್ಯಾಸವೇನೆಂದರೆ ಸ್ಟೇಷನಿಗೆ ಯಾರಾದರೂ ಬಂದರೆ ಹೊಡೆಯುವುದು, ಉಗಿಯುವುದು, ಮತ್ತಿತರ ರೀತಿಯ ಕೆಟ್ಟ ವರ್ತನೆಯನ್ನು ತೋರಿಸುವುದು. ಅದು ಆತನ ಅಭ್ಯಾಸದಲ್ಲಿಯೇ ಬಂದು ಬಿಟ್ಟಿದೆ. ಆದ್ದರಿಂದ ಜನರಿಗೆ ಇವನೇ ಹೊಡೆದು ಸಾಯಿಸಿದ್ದಾನೆಂದು ಭಾವನೆ ಬಂದಿದೆ. ಅದಲ್ಲದೆ ಲಾರಿಯಿಂದ ಬಿದ್ದರೆ, ತಲೆ ಒಂದಕ್ಕೆ ಏಟು ಮಾತ್ರ ಬೀಳುವುದಿಲ್ಲ ; ಬೇರೆ ದೇಹದ ಭಾಗ ಗಳಿಗೂ ಏಟು ಬೀಳುತ್ತದೆ. ಅದರಲ್ಲಿ ಸ್ವಲ್ಪ ಸಂಶಯ ಬರುತ್ತದೆ. ಆ ಅಧಿಕಾರಿಯ ಪೂರ್ವ ಚರಿತ್ರೆ ಚೆನ್ನಾಗಿಲ್ಲದಿರುವುದರಿಂದ ಈ ರೀತಿಯ ಸಂಶಯಕ್ಕೆ ಕಾರಣವಾಗಿದೆ. ಆದರೆ ತಾವು ಎನ್‌ಕ್ವಯರಿ ಮಾಡಿಸುವಾಗ ಆ ಅಧಿಕಾರಿ ಅದೇ ಜಾಗದಲ್ಲಿ ಇದ್ದರೆ ನಿಷ್ಪಕ್ಷವಾದ ಎನ್‌ಕ್ವಯರಿ ಯಾಗುವುದಿಲ್ಲ. ಆದ್ದರಿಂದ ಈ ಪ್ರಕರಣ ಮುಗಿಯುವವರೆಗೆ ಆತನನ್ನು ಸಸ್‌ಪೆನ್ಸಿನಲ್ಲಿ ಇಡಬೇಕು. ಆ ಮೇಲೆ ಸ್ಥಳದಲ್ಲಿರತಕ್ಕಂತಹ ಇತರ ಸಣ್ಣ ಅಧಿಕಾರಿಗಳು ಏನಿದ್ದಾರೆ ಅವರು ಹಲವು ವರ್ಷ ಗಳಿಂದಲೇ ಅಲ್ಲಿ ಇದ್ದುಕೊಂಡು ಪೋಲೀಸ್ ಇಲಾಖೆಗೆ ಏನೊಂದು ಕೆಟ್ಟ ಹೆಸರನ್ನು ತರುವುದಕ್ಕೆ ಕಾರಣರಾಗಿದ್ದಾರೆ, ಅಂಥವರನ್ನು ಹೊರಗಡೆ ಹಾಕಿ ಅಲ್ಲಿಯ ಜನರಿಗೆ ನ್ಯಾಯ ದೊರಕುವ ಹಾಗೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ಡಿ. ದೇವರಾಜ ಅರಸ್ (ಮುಖ್ಯಮಂತ್ರಿಗಳು).—ಅಧ್ಯಕ್ಷರೆ, ನಿನ್ನೆಯೇ ಈ ವಿಷಯ ಚರ್ಚೆಗೆ ಬಂದು ನಾನು ಹೇಳಿಕೆ ಕೊಟ್ಟಿದ್ದೇನೆ. ನಂತರ ಇವತ್ತು ಅದೇ ವಿಚಾರ ಬಂದಿದೆ. ನಾನು ನಿನ್ನೆ ಹೇಳಿದ್ದಕ್ಕಿಂತ ಹೆಚ್ಚು ವಿವರಗಳನ್ನು ಇವತ್ತು ಹೇಳಬೇಕೆಂಬ ಭಾವನೆಯಿಂದ ಸದಸ್ಯರು ಮಾತನಾಡಿದ್ದಾರೆ. ಮತ್ತು ದೇವೇಗೌಡರು ಸಹ ಹೇಳಿದ ವಿಚಾರವನ್ನು ನಾನು ಕೇಳಿದ್ದೇನೆ. ಬಹುಶಃ ಅವರು ಹೇಳಿದ ಪ್ರಕಾರ ಖಚಿತವಾಗಿ ಇವರೇ ಮಾಡಿದ್ದಾರೆಂದು ಹೇಳುವುದು ಕಷ್ಟವಾಗು ತ್ತದೆ. ಅವರೂ ಅದನ್ನು ಒಪ್ಪಿಕೊಳ್ಳುತ್ತಾರೆಂದು ನಾನು ತಿಳಿದಿದ್ದೇನೆ. ಈಗ ಖಚಿತವಾಗಿ ಹೇಳುವುದಕ್ಕಾಗುವುದಿಲ್ಲ ಎಂದು ಹೇಳಿದರೆ, ಅದನ್ನು ಸದಸ್ಯರು ಒಪ್ಪದೆ ಇರಬಹುದು. ಅದಕ್ಕೋ ಸ್ಕರ ಪೂರ್ತಿಯಾಗಿ ಎನ್‌ಕ್ವಾಯರಿ ಮಾಡಿಸೋಣ. ನಾವು ಯಾರನ್ನೂ ಶೀಲ್ಡ್ ಮಾಡುವ ಅಗತ್ಯ ಇಲ್ಲ. ಅವರು ಯಾರೇ ಆಗಲಿ, ಪೋಲೀಸ್ ಅಧಿಕಾರಿಯೇ ಇರಲಿ ಅಥವಾ ಇನ್ನಿತರರೇ ಆಗಿರಲಿ— ಶೀಲ್ಡ್ ಮಾಡುವ ಅಗತ್ಯ ಇಲ್ಲ. ಆದರೂ ಮತ್ತೂ ಮತ್ತು ಕೆಲವು ವಿಚಾರಗಳನ್ನು ಸದಸ್ಯರು ಹೇಳಿ ಪರಿಸ್ಥಿತಿ ಹದಗೆಟ್ಟಿದೆ ಎಂದು ಹೇಳುತ್ತಿದ್ದಾರೆ. There are some assertations ; I have heard the opposition leader. He has not asserted. Whereas some other member assert ಇಲ್ಲ ಇಲ್ಲ, ಹೀಗಿಯೇ ಆಗಿಬಿಟ್ಟಿದೆ; ಅದರಲ್ಲಿ ಏನೋ ಆಗಿಬಿಟ್ಟಿದೆ ಎಂದು ಹೇಳುತ್ತಿದ್ದಾರೆ. ಅದು ನನಗೆ ಗೊತ್ತಿಲ್ಲ. ಅದಕ್ಕೋಸ್ಕರವಾಗಿ ವಿವರವಾದ ರಿಪೋರ್ಟ್ ಏನಿದೆ ಅದನ್ನು ತಮಗೆ ಓದುತ್ತೇನೆ.

Madam, on 1-2-1973 in the morning, information was received in Mandya Town Police Station that one Karigowda of Pandavapur (a retired Supervisor of Mysore Sugar Company) was admitted in the General Hospital, Mandya with bleeding injuries on his neck. On this information a case in Mandya Town Police Station Cr. No. 18/73 u/s 307 IPC was registered. During the investigation the following facts came to light :

Shri Karigowda had approached Shri Srinivasa Guptha, a merchant of Mandya Town with an offer that two persons Ramaiah and Ningaiah are prepared to sell 4000 one rupee silver coins for rupees 10,000-- He wanted Shri Guptha to buy this silver. Shri Guptha promised to buy the silver coins after making arrangements for money. On 31-1-1973 Shri Karigowda went to Mandya and told Shri Guptha that

the coins will be ready that day and that they will be available in a house near Javarnahalli in Nagamangala Taluk. Accordingly, Shri Guptha accompanied by his son and a goldsmith went along with Karigowda to Jawaranahalli in a car. Ningaiah and Ramaiah came to the appointed place and pointed to a small gunny bag which was placed under a tree as containing the silver coins. It was dust by then. They prevented Guptha or his son approaching and examining it, on the plea that unless they are shown the amount brought by Shri Guptha they would not allow them to touch the bag. Shri Karigowda asked Shri Guptha to show the currency. Accordingly, when Shri Guptha removed the bundle of currency notes amounting to Rs. 10,000 from inside his coat pocket, Ningaiah jumped at Shri Guptha, snatched the bundle of currency notes and ran away raising a loud cry. Ramaiah followed Ningaiah. Immediately stones started being thrown at Guptha and party. They immediately retreated for fear of injury and returned to Mandya in the car without lodging a complaint as Karigowda advised them that it would be a matter of shame and that he would see that the amount lost would be made good.

At Mandya, Shri Karigowda went to the house of his friend. It was about 23.30 hours. After having food there, he slept in the front room closing the door. In the dying declaration, recorded by the Sub-Divisional Magistrate, Mandya, Shri Karigowda has stated that in the middle of the night when he was fast asleep, two persons knocked at his door and when he opened it, they threw something on his face, dragged him to the road and threw him in the road-side drainage. He stated that he could not identify who these two persons were as he became unconscious as soon as they threw something on his face. The investigation of this case was taken up by the Mandya Town Police.

On 2-2-73 Shri Guptha lodged a complaint at Mandya Town Police Station for having been cheated Rs. 10,000. This case was transferred to Bellur Police Station on point of jurisdiction, where a case in Cr. No. 6/73 u/s 420 IPC was registered against Ramaiah and Ningaiah. As this case was fairlyan important one, the Superintendent of Police, Mandya, in this memo dated 23-2-73 directed the Circle Inspector of Police, Nagamangala Circle to take up further investigation himself. Accordingly, the C. I. took up investigation of this case on 7 3-73.

During the course of investigation of this case, the C. I. issued a notice dated 14-3-73 to to Shri Karigowda through P.C. 274 to appear before him. On 16-3-73 P. C. 274 Govindappa pruduced Shri Karigowda before the C. I. The C. I. recorded the statement of Shri Kari gowda. On 17-3-73 the C. I. secured the complainant Shri Guptha and his son from Mandya and confronted them with Shri Karigowda and enquired further about the transaction that took place on 31-1-1973. Shri Kar gowda requested the C. I. to give him the assistance of a Constable in mufty to assist him to trace the accused in the above case. On 18-3-73 Karigowda returned with P. C. 370 Aradhya and

(ಶ್ರೀ ಡಿ. ದೇವರಾಜ ಅರಸ್)

stated that they searched for the accused in Bellur, Dommanahalli, Javarahalli and Kadaballi shandy, but they were not traced. He requested the C. I. to continue to give him the assistance of a P. C. so that he can search for the accused at Chunchanagiri Jathra. Even there, their search was in vain and Shri Karigowda came to the C. I. and reported this on 19-3-73. Shri Karigowda took P. C. 370 Aradya to Mandya on 19-3-73 to trace the accused. The C. I. instructed the P. C. to keep the accused if traced in Mandya Town Police Station and that he would join them later on. Accordingly Shri Karigowda and P. C. 370 left for Mandya earlier and the Inspector also left for Mandya at 4 P. M. At Mandya, the C. I. produced Shri Karigowada before the Deputy Superintendent of Police of Mandya Sub-Division in his office. The Deputy Superintendent of Police advised Shri Karigowda to assist the C. I. in the investigation of the cheating case wholeheartedly as Shri Karigowda was the main witness in this case. For this Sri Karigowda stated before the Deputy Superintendent of Police that he would trace the accused, failing which he was prepared to make good the loss sustained by Shri Guptha. It is learnt that at that time Shri Govindaraju, Assistant Engineer, Mandya was present in the office of the Deputy Superintendent of Police. The Deputy Superintendent of Police told Sri Karigowda that the question of his paying money to Shri Guptha does not arise as the police is interested in the detection of the case by securing the accused. Then they left the D. S. P.' s office.

Sri Karigowda told the C. I. that he would go to Pandavapura, his native place to get the assistance of one of his relatives to trac the accused persons. The C. I. left him near the T. B. and came to the bus stand along with P. C. 70 Aradhya. As there was no bus available he caught a lorry MYX 7272 (loaded with arrack barrels from Mandya Distillery which was on its way to Mangalore via Nagamangala. The C. I. sat in the cabin, the cleaner Padma nabha and the P. C. Aradhya sat in the body of the lorry at the rear. When the lorry came near the Toll gate situated on Nagamangala Road, the driver stopped the lorry as the road was blocked by three bullock carts. When the lorry had stopped Sri Karigowda came from behind the lorry and wanted to board it but the cleaner objected saying that they would not carry any persons over the load. When Sri Karigowda prevailed upon saying that he has to go to Bellur on some urgent work, the P. C. Aradhya requested the cleaner to allow him to get into the lorry. Accordingly Sri Karigowda boarded the lorry and sat on the barrel. It was about 18-30 hours at that time. As the lorry was proceeding to Nagamangala, Karigowda requested the P. C. Aradhya not to inform the C. I. about his presence in the lorry. The driver of the lorry Narayana and the C. I. who was sitting in the cabin were unaware of Karigowda having boarded the lorry at the tollgate.

When the lorry was about two miles from Nagamangala Sri Karigowda suddenly jumped out of the lorry. The P. C. Aradhya tried to prevent him, but could not. In the attempt the P. C. was also about to fall off, but the cleaner caught hold of him. The cleaner signalled the lorry to be stopped by tapping over the cabin and the driver and the C I. enquired as to what the matter was. He informed them about the jumping out of Karigowda. They came down and walked back some distance and noticed Karigowda having sustained severe injury on his head and blood was flowing. He was unconscious. They removed him to the hospital at Nagamangala in the same lorry. The Medical Officer who examined Karigowda told them that he was already dead.

On the statement of Sri Padmanabha, Cleaner of the said lorry a case in Nagamangala Police Station Crime No. 22/73 u/s. 174 Cr. P. C. was registered. The S. I. held inquest and handed over the body to the Medical Officer for P. M. examination in the afternoon of 20-3-73. The Doctor conducted the P. M. examination on 20-3-73 and after wards handed over the body to the Police. The relatives of the deceased namely Lakshmegowda and others who came from Pandavapura refused to take over the body and demanded an enquiry. They moved in the town and spread rumours that Sri Karigowda was murdered by the Police. On these rumours a mob, 1000 strong collected in front of the Police Station at 6-30 P. M. demanding an immediate enquiry into the affair and wanted to assault the C. I. Persuasion by the local Police was in vain. The mob started pelting stones at the Police and at the Police Station. They surged forward towards the Police Station. The C. I. who was present in the Police Station ordered a lathi charge. The mob which retreated a little again pressed forward pelting more stones damaging the Police van which was stationed in the Police Station compound. Due to stone throwing 1 H. C. and 4 P Cs of the D. A. R. sustained injuries. The mob blocked the road in front of the Police Station by placing boulders. When the crowd was surging forward pelting stones heavily and demanding the C. I. to come out, the C. I. ordered the D. A. R. to open fire, in self defence as well as to protect the Police Station and the arms and ammunition therein. The Armed Reserve Police opened five rounds with 303 rifles.

Due to stone throwing, lathi charge, 5 persons amongst the crowd sustained injuries. On receipt of information the Deputy S. P. Mandya Sub-Division arrived at Nagamangala at about 20-00 hours and the Superintendent of Police, Mandya at about 20-45 hours. They pecified the crowd and assured them of an immediate enquiry. The injured wore subjected to medical examination. The Medical Officer opined that the injuries sustained by both the Police and the public are all simple in nature and treated them as out-patients. He also opined that the injuries sustained by the one Sri Hanumaiah of Nagamangala may be a gun shot injury, though it was also simple in nature.

(ಶ್ರೀ ಡಿ. ದೇವರಾಜ ಅರಸ್)

From the statements of the driver and cleaner of the lorry in which the deceased travelled, apart from the statement of the C. I. and P. C. Aradhya, Karigowda has died when he jumped out of the moving lorry. The opinion of the Medical Officer, Combined Dispensary, Nagamangala is as follows : "I am of opinion that death is due to shock and haemarrhage as a result of fracture of the skull."

Due to the stone throwing, damages to the tune of about Rs. 100/- is caused to the Police Station and the damages caused to the Police van is about Rs. 500/-. The crowd dispersed at about 01.30 hours after an assurance of an impartial enquiry by the Supdt. of Police. The relatives of the deceased then took the dead body of Karigowda to Pandavapura for purpose of burial.

The Dy. Supdt. of Police, Mandya has been directed to take up investigation of Cr. No. 22/73/ u/ s. 174 Cr. P. C relating to the death of Karigowda. A case is registered in Cr. No. 23/73 / u/s. 143-147-427-332 IPC against 14 and other rioters. The Supdt. of Police is instructed to round up the accused in this case without unnecessary delay and expedite the investigation. He is also instructed to send situation reports from time to time and further detailed report in continuation about the names of the persons injured, the names of the accused and the number of them arrested etc.

The situation in Nagamangala town is peaceful at present. However, vigilant patrolling in the town is continued. A contingent of DAR 2 HCs. and 20 PCs. is also stationed there.

ಇಷ್ಟನ್ನು ಹೇಳಿದ ಮೇಲೆ ನಾನು ಇದಕ್ಕಿಂತ ಹೆಚ್ಚಿಗೆ ಏನು ಹೇಳುವುದಕ್ಕೂ ತಯಾರಿಲ್ಲ. ಆದರೆ ಇದರಲ್ಲಿ ಒಂದು ವಿಚಾರ, ವಿರೋಧ ಪಕ್ಷದ ನಾಯಕರು ಅಲ್ಲಿನ ಆ ಒಂದು ಸನ್ನಿವೇಶ ಏನಿತ್ತು ಮತ್ತು ಅಲ್ಲಿದ್ದ ಸರ್ಕಲ್ ಇನ್‌ಸ್ಪೆಕ್ಟರ್ ಚಾರಿತ್ರ್ಯದ ಬಗ್ಗೆ ಅಲ್ಲಿಯ ಜನರ ಮನಸ್ಸಿನಲ್ಲಿ ಏನಿತ್ತು ಅನ್ನುವುದನ್ನೆಲ್ಲಾ ಅವರು ತಿಳಿಸಿದ್ದಾರೆ. ಅದನ್ನೂ ಕೂಡ ನಾನು ಗಮನದಲ್ಲಿಟ್ಟುಕೊಂಡಿದ್ದೇನೆ. ಆದರೆ ಅಲ್ಲಿ ಈಗಾಗಲೇ ಜಿಲ್ಲಾಧಿಕಾರಿಯವರಿಂದ ಒಂದು ಎನ್‌ಕ್ವೈರಿ ನಡೆಯುತ್ತಿದೆ ಎಂಬುದಾಗಿ ನನಗೆ ವರದಿ ಬಂದಿದೆ. ಅದು ಇನ್ನು ಒಂದೆರೆಡು ದಿನಗಳಲ್ಲೇ ಮುಗಿಯಬಹುದು. ಮಾನ್ಯ ವಿರೋಧ ಪಕ್ಷದ ನಾಯಕರೇನು ತಿಳಿಸಿದ್ದಾರೆ ಆ ಅಂಶಗಳನ್ನೆಲ್ಲಾ ನಾನು ಗಮನದಲ್ಲಿಟ್ಟುಕೊಂಡು ಇದರಲ್ಲಿ ಯಾರೂ ಕೈಹಾಕುವುದಕ್ಕೆ ಆಸ್ಪದ ಕೊಡದಂತೆ ಒಂದು ನಿರ್ದೋಷವಾದ ವಿಚಾರಣೆ ನಡೆಯುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕಾದುದು ನನ್ನ ಆದ್ಯ ಕರ್ತವ್ಯ. ನಾನು ಆ ನನ್ನ ಕರ್ತವ್ಯವನ್ನು ನಿಷ್ಪಕ್ಷಪಾತದಿಂದ ನಿರ್ವಹಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—19 ನೇ ತಾರೀಖು ಪ್ರಜ್ಞೆ ತಪ್ಪಿದ ಮನುಷ್ಯನನ್ನು ರಾತ್ರಿಯೆಲ್ಲ ಪೋಲೀಸ್ ಸ್ಟೇಷನ್ನಿನಲ್ಲಿ ಇಟ್ಟುಕೊಂಡಿದ್ದು ಅನಂತರ 20ನೇ ತಾರೀಖು ಸ್ಟೇಷನ್...

ಅಧ್ಯಕ್ಷರು.—ಎಲ್ಲಾ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ನಿಷ್ಪಕ್ಷಪಾತವಾದ ವಿಚಾರಣೆ ನಡೆಸುವುದಕ್ಕೆ ಪ್ರಯತ್ನ ಮಾಡುವುದಾಗಿ ಹೇಳಿದ್ದಾರೆ...

ಶ್ರೀ ವಾಟಾಳ್ ನಾಗರಾಜ್.—ಅವನು ಸತ್ತಿರುವುದೇ ಪೋಲೀಸ್ ಸ್ಟೇಷನ್ನಿನಲ್ಲಿ. ಇದು ಈಗ ಕೊಟ್ಟ ಹೇಳಿಕೆಯಿಂದಲೇ ಅನುಮಾನ ಹುಟ್ಟುತ್ತದೆ.

ಅಧ್ಯಕ್ಷರು.—ಯಾರಿಗೂ ಸಂಶಯಬಾರದ ರೀತಿಯಲ್ಲಿ ಎನ್‌ಕ್ವೈರಿ ಮಾಡಿಸುವುದಾಗಿ..

ಶ್ರೀ ವಾಟಾಳ್ ನಾಗರಾಜ್.—ಆ ಪೋಲೀಸ್ ಅಧಿಕಾರಿಯನ್ನು ಮೊದಲು ಸಸ್ಪೆಂಡ್ ಮಾಡಲಿ. 19ನೇ ತಾರೀಖು...

3-00 P.M.

ಶ್ರೀ ಎಚ್. ಟಿ. ಕೃಷ್ಣಪ್ಪ.—ಪಕ್ಷಪಾತ ರಹಿತವಾಗಿ ತನಿಖೆಯಾಗಬೇಕಾದರೆ ತನಿಖೆ ಮಾಡುವಾಗ ಪೋಲೀಸರ ಕೈವಾಡ ಇರಬಾರದು, ಅವರು ದೂರವಿರಬೇಕು ; ಪೋಲೀಸರ ಅಧಿಕಾರ ಅದರಲ್ಲಿರಬಾರದು. ಆ ರೀತಿ ಮಾಡಬೇಕೆಂದು ಕೇಳುತ್ತೇನೆ. ಮುಖ್ಯಮಂತ್ರಿಗಳು ಇದನ್ನು ಸ್ಪಷ್ಟವಾಗಿ ಹೇಳಿದರೆ ಮನಸ್ಸಿಗೆ ಸಮಾಧಾನವಾಗುವುದು.

ಶ್ರೀ ಎಚ್. ಡಿ. ದೇವೇಗೌಡ.—ನಿಷ್ಪಕ್ಷಪಾತವಾದ ವಿಚಾರಣೆಯಾಗಬೇಕಾದರೆ ಸಂಬಂಧಪಟ್ಟ ಪೋಲೀಸು ಅಧಿಕಾರಿಯನ್ನು ಸಸ್ಪೆಂಡ್ ಮಾಡಬೇಕು. ಆ ಅಧಿಕಾರಿ ಸಾರ್ವಜನಿಕರಲ್ಲಿ ಸಾಕಷ್ಟು ಭಯಭೀತಿಯನ್ನುಂಟು ಮಾಡುತ್ತಿದ್ದಾರೆ. The concerned Police Officer may be kept under suspension pending enquiry. Suspension is not a punishment. An impartial inquiry might be held keeping that Police Officer under suspension.

SRI D. DEVARAJ URS.—Madam Speaker, I have already said that I have borne in mind what all the Hon. Leader of the Opposition and the other hon. member from that constituency has said. That is why I might say in one word that you please allow me sometime, I will look into the matter. I have also stated that I might create an atmosphere which should also appear to the rest of the people that under such an atmosphere an impartial inquiry is possible. What is that I can say beyond that ?

ಶ್ರೀ ಎಸ್. ಬಂಗಾರಪ್ಪ.—ಸಸ್ಪೆಂಡ್ ಮಾಡಿ ಎನ್‌ಕ್ವೈರಿ ಮಾಡಿದರೆ ಅದು ಫೇರ್ ಆಗಿರುವುದು. ಹಾಗೆ ಮಾಡುವುದರಲ್ಲಿ ತಪ್ಪೇನು !

MADAM SPEAKER.—The matter is closed now.

(Sri Bangarappa continued to stand)

MADAM SPEAKER.—What more does the hon. member want ?

SRI S. BANGARAPPA.—Let the Chief Minister say that he would suspend the Police Officer.

Statement made by the Ministers Private Secretary in the incident at Haliyal

ಶ್ರೀ ವಾಟಾಳ್ ನಾಗರಾಜ್.—ಇನ್ನೊಂದು ವಿಷಯ ತಮ್ಮ ಗಮನಕ್ಕೆ ತರಬೇಕಾಗಿದೆ. ಮಂತ್ರಿಗಳ ಒಬ್ಬ ಆಪ್ತ ಕಾರ್ಯದರ್ಶಿಯವರು ಹಳಿಯಾಳದಲ್ಲಿ ಗಲಾಟೆಯಾಗಿರುವ ಬಗ್ಗೆ ಹೇಳಿಕೆ ನೀಡಿದ್ದಾರೆ. ಸಚಿವರು ಹೇಳಿಕೆ ಕೊಡಬೇಕೇ ವಿನಾ ಕಾರ್ಯದರ್ಶಿಯ ಮೂಲಕ ಹೇಳಿಕೆ ಕೊಡಿಸುವುದು ಸರಿಯಲ್ಲ. ಹಳಿಯಾಳದಲ್ಲಿ ಶ್ರೀ ಬಸವಲಿಂಗಪ್ಪನವರ ಕಾರಿನಮೇಲೆ ಕಲ್ಲು ಹೊಡೆದಿರುವ ಬಗ್ಗೆ ಅವರ ಆಪ್ತ ಕಾರ್ಯದರ್ಶಿ ಒಂದು ಹೇಳಿಕೆ ಕೊಟ್ಟಿದ್ದಾರೆ. ಶ್ರೀ ಬಸವಲಿಂಗಪ್ಪನವರು ಮೂರು ದಿವಸಗಳಿಗೊಂದು ಸಲ ಸಭೆಗೆ ಬರುವರು ; ಸಭೆಯಲ್ಲಿ ಬಹಳ ಹೊತ್ತು ಇರುವುದಿಲ್ಲ.

ಅಧ್ಯಕ್ಷರು.—ತಾವು ನಿಲುವಳಿ ಸೂಚನೆಗೆ ಅನುಮತಿ ಕೇಳಿದ್ದೀರಿ, ನಾನು ಕೊಟ್ಟಿಲ್ಲ. ಹಾಗಿರುವಾಗ ನೀವು ಮಾತನಾಡಲು ಅವಕಾಶವಿಲ್ಲದೆ !

ಶ್ರೀ ಎಚ್. ಡಿ. ದೇವೇಗೌಡ.—ಸಭೆ ನಿಯಮಗಳನ್ನು ಪಾಲಿಸಬೇಕು, ಅದಕ್ಕೆ ಒಪ್ಪುತ್ತೇನೆ. ಆದರೆ ವಾಟಾಳ್ ನಾಗರಾಜರವರು ಎತ್ತಿರುವುದು ಗಹನವಾದ ವಿಚಾರ. ಮೇಲ್ಮನೆಯಲ್ಲಿ ಇದರ ಬಗ್ಗೆ ಪ್ರಸ್ತಾಪವಾಗಿದೆ. ಹಾಗಿರುವಾಗ ಈ ಸಭೆಯಲ್ಲಿ ಈ ವಿಷಯ ಪ್ರಸ್ತಾಪಿಸಲು ಅವಕಾಶ

(ಶ್ರೀ ಎಚ್. ಡಿ. ದೇವೇಗೌಡ)

ಕೇಳಿದರೆ ನಿರಾಕರಣೆ ಮಾಡಿದರೆ ಬಹುಶಃ ಈ ಸಭೆಯು ಗೌರವಕ್ಕೆ ಚ್ಯುತಿ ಬರುವುದು. ಈ ಸಭೆ ತನ್ನ ಕರ್ತವ್ಯವನ್ನು ಸರಿಯಾಗಿ ನಿರ್ವಾಹ ಮಾಡುತ್ತಿಲ್ಲವೇನೋ ಎಂಬ ಭಾವನೆ ಬರಬಹುದು. ನಮ್ಮ ಕಷ್ಟ ಹೇಳುತ್ತೇನೆ. ನೀವು ಕೊಡುವ ರೂಲಿಂಗ ನಾವು ಕೇಳಬೇಕು.

ಅಧ್ಯಕ್ಷರು.—ರೂಲ್ 312 ರ ಕೆಳಗೆ ಶ್ರೀ ಬಂಗಾರಪ್ಪನವರು ಒಂದು ಸೂಚನೆ ಕಳುಹಿಸಿದ್ದಾರೆ, ಶ್ರೀ ವಾಟಾಳ್ ನಾಗರಾಜ್‌ರವರು ನಿಲುವಳಿ ಸೂಚನೆ ಕಳುಹಿಸಿದ್ದಾರೆ. ನಿಲುವಳಿ ಸೂಚನೆಯ ಬಗ್ಗೆ ಜವಾಬು ಹೋಗಿದೆಯೋ ಇಲ್ಲವೋ ಗೊತ್ತಿಲ್ಲ. ರೂಲ್ 312ರ ಪ್ರಕಾರ ಹೇಗೆ ತೆಗೆದುಕೊಳ್ಳಬೇಕೆಂಬುದರ ಬಗ್ಗೆ ರೂಲಿಂಗ್ ಕೊಟ್ಟಿದ್ದೇನೆ. ಅದರಂತೆ ವಾರದಲ್ಲಿ ಎರಡು ದಿವಸ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ಕಾಂಗ್ರೆಸ್ ಕಾರ್ಯಕರ್ತರು ಸಿದ್ಧಪಡಿಸಿದ್ದ ವೇದಿಕೆಯನ್ನು ಸಂಸ್ಥಾ ಕಾಂಗ್ರೆಸ್ಸಿನವರು ಮತ್ತು ಜನಸಂಘದವರು ಒಡೆದುಹಾಕಿದ್ದಾರೆ ಎಂದು ತಿಳಿಸಿದ್ದಾರೆ. ಇದಕ್ಕೆ ಮಂತ್ರಿಗಳ ಆಪ್ತ ಕಾರ್ಯದರ್ಶಿ ಸಹಿ ಹಾಕಿದ್ದಾರೆ.

ಶ್ರೀ ಕೆ. ಪುಟ್ಟಸ್ವಾಮಿ.—ಪಾಯಿಂಟ್ ಆಫ್ ಆರ್ಡರ್. ಶ್ರೀ ಬಂಗಾರಪ್ಪನವರ ಪ್ರಶ್ನೆ ಬೇರೆ, ಶ್ರೀ ನಾಗರಾಜ್‌ರವರ ಪ್ರಶ್ನೆ ಬೇರೆ. ಅಧ್ಯಕ್ಷರು ಎರಡಕ್ಕೂ ಅವಕಾಶ ಕೊಟ್ಟಿಲ್ಲವೆಂದು ಹೇಳಿದರು.

ಅಧ್ಯಕ್ಷರು.—ಬೇರೆ ಬೇರೆ ರೂಲ್ ಪ್ರಕಾರ ಇಬ್ಬರೂ ಒಂದೇ ಪ್ರಶ್ನೆ ಕಳಿಸಿದ್ದಾರೆ.

ಶ್ರೀ ಕೆ. ಪುಟ್ಟಸ್ವಾಮಿ.—ವಿಷಯ ಚರ್ಚೆಮಾಡಬಹುದು, ಅದಕ್ಕೆ ನಾನು ಅಡ್ಡ ಬರುವುದಿಲ್ಲ. ಇಂಥ ಚರ್ಚೆಗೆ ಅವಕಾಶ ಕೊಡದೆ ಕಂಟ್ರೋಲ್ ಮಾಡಿ ನಿಗದಿ ಮಾಡಿರುವ ಪ್ರಕಾರ ಪ್ರೊಸೀಡಿಂಗ್ಸ್ ನಡೆಸಲು ಅವಕಾಶ ಮಾಡಬೇಕು.

ಅಧ್ಯಕ್ಷರು.—ನನಗೂ ಆ ರೀತಿ ಮಾಡಬೇಕೆಂಬ ಆಸೆಯಿದೆ. ಎಲ್ಲಾ ಸದಸ್ಯರೂ ಸಹಕರಿಸಿದರೆ ರೂಲ್ಸ್‌ಗೆ ವಿರೋಧವಾಗಿ ಹೋಗುವುದಕ್ಕೆ ಅವಕಾಶವಿರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಒಬ್ಬ ಸಚಿವರು ಮಾಡಿರುವ ಕೆಲಸದ ಬಗ್ಗೆ ಇಲ್ಲಿ ನಾನು ಪ್ರಶ್ನೆ ಮಾಡುತ್ತಿದ್ದೇನೆ.

ಅಧ್ಯಕ್ಷರು.—ತಮಗೆ ಅನುಮತಿ ಕೊಟ್ಟಿಲ್ಲ, ಶ್ರೀ ಬಂಗಾರಪ್ಪನವರ ಪ್ರಶ್ನೆಯನ್ನು ತೆಗೆದುಕೊಳ್ಳಬೇಕಾಗುತ್ತದೆ, ವಿಧಾನಪರಿಷತ್ತಿನಲ್ಲಿ ಈ ವಿಷಯ ಬೇರೆ ತರಹ ಚರ್ಚೆಯಾಗಿದೆ. ಇವತ್ತು ಸಾಯಂಕಾಲ ಬೇಕಾದರೆ ರೂಲ್ 312ರ ಕೆಳಗೆ ಇದನ್ನು ತೆಗೆದುಕೊಳ್ಳೋಣ ಎಂದು ಹೇಳಿದ್ದೇನೆ ನೀವು ಆ ಸಮಯದಲ್ಲಿ ಇರುವುದಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ವಿಧಾನಪರಿಷತ್ತಿನಲ್ಲಿ ನಡೆದಿರತಕ್ಕ ಚರ್ಚೆ ಏನು ಇದೆ, ಅದು ಬೇರೆ ಯಾವುದೇ ಒಂದು ಕಾನೂನು ನಿಯಾಮವಳಿಯೊಳಗೆ ನಡೆದಿರಬಹುದು. ಅದರ ಬಗ್ಗೆ ನಾನು ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಲಿಕ್ಕೆ ತಯಾರು ಇಲ್ಲ. ನಾನು ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡುವುದು ಇಷ್ಟೆ, ನಿನ್ನೆ ಏನು ನೀವು ರೂಲಿಂಗ್ ಕೊಟ್ಟಿದ್ದೀರೋ ಅದನ್ನು ಪತ್ರಿಕೆಯಲ್ಲಿ ಓದಿದ್ದೇನೆ. 312ರ ಕೆಳಗೆ ಬರತಕ್ಕ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಕಾಲವನ್ನು ಗೊತ್ತುಮಾಡುತ್ತೇವೆಂದು ಹೇಳಿದ್ದೀರಿ. ಆದರೆ ಆ ಸಭೆಯಲ್ಲಾಗಲಿ, ಈ ಸಭೆಯಲ್ಲಾಗಲೀ...

ಅಧ್ಯಕ್ಷರು.—ಆ ಸದನದ ವಿಚಾರ ಬೇರೆ.

ಶ್ರೀ ಎಚ್. ಡಿ. ದೇವೇಗೌಡ.—ಒಂದು ವಾರದಲ್ಲಿ ಎರಡು ದಿವಸವನ್ನು ಗೊತ್ತುಮಾಡುತ್ತೇವೆ ಎಂದು ರೂಲಿಂಗ್ ಕೊಟ್ಟಿದ್ದೀರಿ. ಇದು ಏನಾಗುತ್ತದೆ ಎಂದರೆ, ಆ ಸದನದವರು ಯಾವುದೇ ವಿಷಯವನ್ನು ಪ್ರಸ್ತಾಪ ಮಾಡಲಿಕ್ಕೆ ಗೊತ್ತುವಳಿ ಮಾಡಿದ್ದಾರೋ ಅದೇ ರೀತಿ ತಾವು ಇಲ್ಲಿ ಅದೇ ಪದ್ಧತಿಯನ್ನು ಅನುಸರಿಸುತ್ತಾ ಹೋದರೆ, ಅವರು ಎಲ್ಲಾ ವಿಷಯಗಳನ್ನು ಪ್ರಸ್ತಾಪ ಮಾಡಿದ ಮೇಲೆ ಈ ಸದನದಲ್ಲಿ ಹಳಸಿ ಹೋದ ವರ್ತಮಾನವನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ನಾನು ತಯಾರು ಇಲ್ಲ. ಈ ಸಭೆಯಲ್ಲಿ ನಾವು ಏನು ಕೆಲಸ ಮಾಡಬೇಕು, ಅದಕ್ಕೆ ಕಷ್ಟವಾಗುತ್ತದೆ. ಈ ಸದನದ ಒಂದು ಗೌರವ ಘನತೆಗೆ ಧಕ್ಕೆ ಇದರಿಂದ ಬಂದರೆ ಬಂದೀತು. ಏಕೆಂದರೆ, 4–5 ದಿವಸದ ಹಿಂದಿನ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡುವುದರಲ್ಲಿ ಅರ್ಥವಿಲ್ಲ. ಈ ಬಗ್ಗೆ ಒಂದು ವೇಳೆ ಹೊಸ ಸಂಪ್ರದಾಯವನ್ನು ಹಾಕಲಿಕ್ಕೆ ಪ್ರಯತ್ನ ಮಾಡುವುದಾದರೆ, ಕಾನೂನು ನಿಯಮಾವಳಿಗಳನ್ನು

ಮಾರ್ಪಾಡು ಮಾಡುವುದಕ್ಕೆ ಇಚ್ಛೆ ಇದ್ದರೆ, ಎರಡು ಸದನದ ಅಧ್ಯಕ್ಷರು ಕೂತು ಒಂದು ತೀರ್ಮಾನಕ್ಕೆ ಬರಬಹುದು. ಹೊಸ ಸಂಪ್ರದಾಯವನ್ನು ಮಾಡಬೇಕಾದರೆ, ಹೊಸ ರೂಪ ರೇಷೆಯನ್ನು ಕೊಡಬೇಕಾಗುತ್ತದೆ. ಇದರ ಬಗ್ಗೆ ಒಂದು ಅಂತಿಮ ನಿರ್ಣಯವಾಗಬೇಕು. ಅರ್ಥಸಚಿವರ ಉತ್ತರ ಆದ ಮೇಲೆ ಈ ಒಂದು ಕಾರ್ಯರೂಪವನ್ನು ತೆಗೆದುಕೊಳ್ಳುತ್ತೇವೆಂದು ಆಶ್ವಾಸನೆ ಕೊಟ್ಟರೆ, ನಾವು ಒಪ್ಪುವುದಕ್ಕೆ ತಯಾರಿದ್ದೇವೆ.

ಅಧ್ಯಕ್ಷರು.—ಇವತ್ತು ಸಾಯಂಕಾಲ ತೆಗೆದು ಕೊಳ್ಳೋಣ.

Re : Satyagraha by College Lecturers

ಶ್ರೀ ಕೋಣಂದೂರು ಲಿಂಗಪ್ಪ.—ನಾನು ನಿನ್ನೆ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇನೆ. ರಾಜ್ಯದ ಕಾಲೇಜು ಅಧ್ಯಾಪಕರು ತಮ್ಮ ಬೇಡಿಕೆಗಳನ್ನು ಇಟ್ಟು ಸತ್ಯಾಗ್ರಹ ಆರಂಭ ಮಾಡಿದ್ದಾರೆ. ನಾಳೆ ಮಂತ್ರಿಗಳಿಂದ ಹೇಳಿಕೆ ಕೊಡಿಸಿದರೆ ಒಳ್ಳೆಯದು.

ಅಧ್ಯಕ್ಷರು.—ಮಂತ್ರಿಗಳು ಇಲ್ಲ, ಮಂತ್ರಿಗಳು ಬರಲಿ ನೋಡೋಣ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಎರಡು ದಿವಸದ ಹಿಂದೆ ನೋಟೀಸ್ ಕಳುಹಿಸಿದ್ದೆ, ಅರ್ಧ ಭಾಗಕ್ಕೆ ಅರ್ಥ ಸಚಿವರು ಉತ್ತರ ಕೊಟ್ಟರು, ಇನ್ನೊಂದು ಅರ್ಧ ಭಾಗಕ್ಕೆ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆಂದು ಹೇಳಿದರು. ಆದರೆ ಮುಖ್ಯಮಂತ್ರಿಗಳು ಇಲ್ಲ ಇಲ್ಲ. ಇದರ ಬಗ್ಗೆ ನಾಳೆ ಉತ್ತರ ಕೊಡಿಸುತ್ತೀರಾ ?

ಅಧ್ಯಕ್ಷರು.—ನೋಡೋಣ, ಮುಖ್ಯಮಂತ್ರಿಗಳು ಬರಲಿ.

Budget Estimates for 1973-74—General Discussion

(*Debate Continued*)

† ಶ್ರೀ ಎಂ. ವೈ. ಘೋರ್ಪಡೆ (ಹಣಕಾಸಿನ ಶಾಖೆಯ ಮಂತ್ರಿಗಳು).—ಮಾನ್ಯ ಸಭಾಧ್ಯಕ್ಷಣೀಯವರೇ, ನಮ್ಮ ರಾಜ್ಯದಲ್ಲಿ ಬರಗಾಲದ ದೃಷ್ಟಿಯಿಂದ ಕಷ್ಟ ಪರಿಸ್ಥಿತಿ ಇದ್ದಾಗ ಈ ವರ್ಷದ ಬಡ್ಜೆಟ್ಟನ್ನು ಮಂಡಿಸುವ ಜವಾಬ್ದಾರಿ ನನ್ನ ಪಾಲಿಗೆ ಬಂತು. ಬಡ್ಜೆಟ್ ಮಂಡಿಸುವಾಗ ನಾನು ಬಹಳ ಸ್ಪಷ್ಟವಾದ ಮಾತನ್ನು ಹೇಳಿದೆ. ಬರಗಾಲ ಪರಿಸ್ಥಿತಿ ಎಷ್ಟೇ ಕಷ್ಟಕರವಾಗಿದ್ದಾಗ್ಯೂ, ಈ ಸರ್ಕಾರ ಕೆಲಸ ಕೊಡುವ ದೃಷ್ಟಿಯಿಂದ, ಕುಡಿಯುವ ನೀರಿನ ಸೌಕರ್ಯದ ದೃಷ್ಟಿಯಿಂದ, ಕಾಳು ಮತ್ತು ಮೇವಿನ ದೃಷ್ಟಿಯಿಂದ ಸರ್ವ ಪ್ರಯತ್ನವನ್ನು ಮಾಡುತ್ತಿದ್ದಾರೆ, ಇದು ಬರೀ ಭಾಷಣವಲ್ಲ, ಆ ಪ್ರಯತ್ನವನ್ನು ನಿರ್ದಿಷ್ಟವಾದ ಕಾರ್ಯಕ್ರಮದ ರೂಪದಲ್ಲಿ ಈ ಸಭೆಯ ಮುಂದೆ ಇಟ್ಟಿದ್ದೇನೆ. ಬರಗಾಲದ ಕಾರ್ಯಕ್ರಮದ ಒಂದು ವೈಶಿಷ್ಟ್ಯ ಏನೆಂದರೆ, ಇದು ಬರೀ ತಾತ್ಕಾಲಿಕವಾಗಿ ಆ ಜನಕ್ಕೆ ಅನುಕೂಲ ಮಾಡಿಕೊಡುವುದು ಅಷ್ಟೇ ಅಲ್ಲ, ಶಾಶ್ವತವಾದ ರೀತಿಯಿಂದ ಆ ಪ್ರದೇಶದ ಆರ್ಥಿಕ ಶಕ್ತಿಯನ್ನು ಬೆಳೆಸುವ ದೃಷ್ಟಿಯಿಂದ ಈ ಕಾರ್ಯಕ್ರಮವನ್ನು ನಾವು ಹಾಕಿಕೊಂಡಿದ್ದೇವೆ. ವಿಶೇಷವಾಗಿ ಸಾಯಿಲ್ ಕನ್ಸರ್ವೇಷನ್, ಸಣ್ಣ ನೀರಾವರಿ ಯೋಜನೆಗಳು. ಯಾವ ಕಾಲಕ್ಕೂ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಅಲ್ಲಿ ನಡೆದಿರಲ್ಲಿಲ್ಲ. ಅಂಥ ಪ್ರಮಾಣದಲ್ಲ ಕೆಲಸಗಳನ್ನು ನಾವು ಪ್ರಾರಂಭ ಮಾಡಿದ್ದೇವೇ. ಅದಕ್ಕೆ ಒಂದೇ ವಾಕ್ಯದಲ್ಲಿ ನಾನು ಹೇಳಿದೆ ಇದು ಡ್ರಾಟ್ ಕಂ ಡೆವೆಲಪ್‌ಮೆಂಟ್ ಬಡ್ಜೆಟ್ ಎಂದು. ಈ ಡ್ರಾಟ್ ಸಮಸ್ಯೆಯನ್ನು ಎದುರಿಸುವಾಗ, ವಿಶೇಷವಾಗಿ ನಮ್ಮ ರಾಜ್ಯದಲ್ಲಿ ಹಿಂದುಳಿದಿರತಕ್ಕಂಥ ಜಿಲ್ಲೆಗಳ ಬೆಳವಣಿಗೆಯನ್ನು ಸಂಪೂರ್ಣವಾಗಿ ದೃಷ್ಟಿಯಲ್ಲಿಟ್ಟುಕೊಂಡು ಬೃಹತ್ ಕಾರ್ಯಕ್ರಮಗಳನ್ನು ಸರ್ಕಾರ ಹಾಕಿಕೊಂಡಿದೆ. ನನಗೆ ತಿಳಿದಮಟ್ಟಿಗೆ, ಈ ಕಾರ್ಯಕ್ರಮಕ್ಕೆ ಸಾಕಷ್ಟು ಸ್ವಾಗತ ಸಾಮಾನ್ಯ ಜನ ಸಂಬಂಧಪಟ್ಟ ಜಿಲ್ಲೆಯಲ್ಲಿ ಅಷ್ಟೇಅಲ್ಲ, ಇಡೀ ರಾಜ್ಯದಲ್ಲ ನೀಡಿ ದೆಎಂದರೆ ಅದು ಅತಿಶಯೋಕ್ತಿಯಾಗಲಾರದು.

ಶ್ರೀ ಎಚ್. ಡಿ. ದೇವೇಗೌಡ.—ನಿಮ್ಮ ಬೆನ್ನನ್ನು ನೀವೇ ತಟ್ಟಿಕೊಳ್ಳುವುದಕ್ಕೆ ಹೋದಿರಲ್ಲ.

ಶ್ರೀ ಎಂ. ವೈ. ಘೋರ್ಪಡೆ.—ಮಾನ್ಯ ವಿರೋಧ ಪಕ್ಷದ ನಾಯಕರು ಕೂಡ ಹೇಳಿದರು, ಬರಗಾಲದ ಕಾರ್ಯಕ್ರಮದಲ್ಲಿ ನಾವು ಸಂಪೂರ್ಣವಾಗಿ ಸಹಕಾರವನ್ನು ಸರ್ಕಾರಕ್ಕೆ ಕೊಡುತ್ತೇವೆ ಎಂದು. ಅವರ ಬಹಳ ಜವಾಬ್ದಾರಿಯಿಂದ ಈ ಮಾತನ್ನು ಹೇಳಿದರು, ನಾನು ಅಷ್ಟೆ ಜವಾಬ್ದಾರಿಯಿಂದ ಸರ್ಕಾರದ ಪರವಾಗಿಯಿಂದ ಅವರ ಸಹಕಾರವನ್ನು ಸ್ವಾಗತಮಾಡುತ್ತೇನೆ. ಏಕೆಂದರೆ, ನಾನು ಬಹಳ ಪ್ರಾಮಾಣಿಕತೆಯಿಂದ ಬಡ್ಜೆಟ್ ಭಾಷಣದಲ್ಲಿ ಹೇಳಿದೆ, ಬರಗಾಲ ಪರಿಸ್ಥಿತಿ ಏನು ಇದೆ ಅದು ಯಾರೊಬ್ಬರೂ ಮಾಡಿರತಕ್ಕದ್ದಲ್ಲ, ಅದು ನೈಸರ್ಗಿಕವಾಗಿ ಬಂದಿರತಕ್ಕಂಥ ಅನಾಹುತ ಎಂದು. ಇದನ್ನು ಎದುರಿಸುವಾಗ, ರಾಜಕೀಯಕ್ಕೆ ಗುರಿ ಮಾಡದೆ, ಇದು ಎಲ್ಲರ ಜವಾಬ್ದಾರಿ, ಯಾರೇ ಆಗಲಿ, ಯಾವ ಪಕ್ಷಕ್ಕೆ ಸೇರಿರಲಿ, ಎಂದು ಇದನ್ನು ಎದುರಿಸಬೇಕು. ಈ ವಿಷಯವನ್ನು ರಾಜಕೀಯದಿಂದ ಸ್ಪಷ್ಟವಾಗಿ ತೆಗೆದಿಟ್ಟು ನಾವು ಹೆಜ್ಜೆ ಇಟ್ಟರೆ, ಈ ಪರಿಸ್ಥಿತಿಯನ್ನು ಶಾಶ್ವತವಾಗಿ, ಎಲ್ಲಾ ಜನಕ್ಕೆ ತೃಪ್ತಿಯಾಗುವ ರೀತಿಯಲ್ಲಿ ಎದುರಿಸಲಿಕ್ಕೆ ಸಾಧ್ಯ. ಇಂಥ ಒಂದು ವಾತಾವರಣ ನಮ್ಮ ರಾಜ್ಯದಲ್ಲಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ವಿಶೇಷವಾಗಿ ವಿರೋಧಪಕ್ಷದ ನಾಯಕರು ಆ ಮಾತನ್ನು ಏನು ಹೇಳಿದರು ಅದನ್ನು ಪುನಃ ಸರ್ಕಾರದ ಪರವಾಗಿಯಿಂದ ಸ್ವಾಗತ ಮಾಡುತ್ತೇನೆ. ಇಂಥ ಒಂದು ಪರಿಸ್ಥಿತಿಯಲ್ಲೂ ಕೂಡ ಮಾನ್ಯ ಸದಸ್ಯರು ಗಮನಕೊಡಬೇಕು, ಯಾವ ಒಂದು ಬೆಳವಣಿಗೆ ಕೆಲಸಗಳಿಗೆ ಅಡ್ಡಿಯಾಗದೆ ನಾವು ಬರಗಾಲದ ಕೆಲಸವನ್ನು ಮಾಡುತ್ತಿದ್ದೇವೆ. ಆ ಬಗ್ಗೆ ಡೆವಲಪ್‌ಮೆಂಟ್ ಏನು ಇದೆ ಅದರ ವೇಗ ಏನು ಇದೆ ಅದನ್ನು ಕಡಿಮೆ ಮಾಡಿಲ್ಲ. ಇನ್ನೂ ಒಂದು ಹೆಜ್ಜೆ ಮುಂದೆ ಹೇಳುವುದಾದರೆ, ಡೆವಲಪ್‌ಮೆಂಟ್ ಟೆಂಪೋ ಅನ್ನು ಜಾಸ್ತಿ ಮಾಡಿದ್ದೇವೆ. ಬರಗಾಲದಲ್ಲಿ ಖರ್ಚು ಮಾಡಿರುವ ದುಡ್ಡು ಕೇಂದ್ರದಿಂದ ಬರುತ್ತದೆ ಎಂದು ನಿರೀಕ್ಷೆ ಮಾಡುತ್ತೇವೆ. ಬಡ್ಜೆಟ್‌ನಲ್ಲಿ ಸ್ಪಷ್ಟವಾಗಿ 1972-73ನೇ ವರ್ಷಕ್ಕೆ 25ಕೋಟಿ ರೂಪಾಯಿಗಳು ಕೇಂದ್ರದಿಂದ ಬರುತ್ತವೆ ಎಂದು ನಿರೀಕ್ಷೆ ಮಾಡಿದ್ದೇವೆ. ಆಗಲೇ 16ಕೋಟಿ ರೂಪಾಯಿಗಳು ಬಂದಿರುವುದು ಎಲ್ಲರಿಗೂ ಗೊತ್ತಿದೆ. ಬರುವ ವರ್ಷದಲ್ಲಿ, 1973-74ರಲ್ಲಿ ಬರಗಾಲದ ಎಂಟು ಜಿಲ್ಲೆಗಳಲ್ಲಿ 10-11 ಲಕ್ಷ ಜನಕ್ಕೆ ಕೆಲಸಕೊಡುವ ದೃಷ್ಟಿಯಿಂದ ಒಂದು ಕಾರ್ಯಕ್ರಮವನ್ನು ನಾವು ಹಾಕಿಕೊಂಡಿದ್ದೇವೆ. ಅದಕ್ಕೆ 54 ಕೋಟಿ ರೂಪಾಯಿಗಳು ಬೇಕಾಗುತ್ತದೆ. ಅಂದರೆ ಮುಂದೆ ಬರುವ ಹಾರ್‌ವೆಸ್ಟ್‌ನವರೆಗೆ ಜನರಿಗೆ ಕೆಲಸ ಕೊಡುವುದಕ್ಕೆ ನಾವು ಹೆದರಬೇಕಾಗಿಲ್ಲ. ಇದಕ್ಕಿಂತ ಹೆಚ್ಚು ಹಣಬೇಕಾದರೂ ಸರ್ಕಾರ ಖರ್ಚು ಮಾಡುವುದರಲ್ಲಿ ಹಿಂಜರಿಯುವುದಿಲ್ಲ. ನಮಗೆ ಗೊತ್ತಿದೆ, ಇಂಥ ಪರಿಸ್ಥಿತಿಯಲ್ಲಿ ದುಡ್ಡು ಮುಖ್ಯವಲ್ಲ, ಕಾರ್ಯಕ್ರಮ ಮುಖ್ಯವಾದದು. ಮೊದಲೆ ಜನಕ್ಕೆ ಕೆಲಸಬೇಕು, ಅದನ್ನು ಕೊಡಬೇಕಾದದು ನಮ್ಮ ಆದ್ಯ ಕರ್ತವ್ಯ. 10 ಲಕ್ಷ ಜನರಿಗೆ ಅಷ್ಟೇ ಅಲ್ಲ, ಬರಗಾಲ ಪೀಡಿತ ಪ್ರದೇಶದಿಂದ ಯಾರೇ ಆಗಲೀ ಕೆಲಸ ಇಲ್ಲ ಎಂದು ಬಂದರೆ ಪ್ರತಿಯೊಬ್ಬರಿಗೂ ಕೆಲಸ ಕೊಡುವ ಜವಾಬ್ದಾರಿ ಸರ್ಕಾರದ್ದು. ದಯಮಾಡಿಟ್ಟು ಮಾನ್ಯ ಸದಸ್ಯರು, ಬರಗಾಲದ ಪರಿಸ್ಥಿತಿಯಿಂದ ಬಂದವರು 10 ಅಲ್ಲ 100 ಅಲ್ಲ, ಸಾವಿರ ಜನ ಇರಲಿ, ಇಂಥ ಕಡೆ ಕೆಲಸ ಇಲ್ಲ ಎಂದು ತಿಳಿಸಿದರೆ, ತಕ್ಷಣ ಕೆಲಸಕೊಡುವ ಜವಾಬ್ದಾರಿ ಸರ್ಕಾರದ ಮೇಲಿದೆ. ಇದಕ್ಕಿಂತ ಸ್ಪಷ್ಟವಾದ ಪದಗಳಲ್ಲಿ ಸರ್ಕಾರದ ಜವಾಬ್ದಾರಿ ನಾನು ಹೇಳುವುದಕ್ಕೆ ಸಾಧ್ಯವಿಲ್ಲ. ಇಷ್ಟೊಂದು ಪರಿಸ್ಥಿತಿ ಇದ್ದರೂ ಇವೊತ್ತು ಡಿ. ಎ. ವಿಷಯದಲ್ಲಿ ಕೂಡ ವರ್ಷಕ್ಕೆ 5 ಕೋಟಿ ರೂಪಾಯಿ ಖರ್ಚಾಗುವ ತೀರ್ಮಾನ ನಾವು ಕೈಕೊಂಡಿದ್ದೇವೆ. ಅಷ್ಟೇ ಅಲ ಗೃಹನಿರ್ಮಾಣ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಅದಕ್ಕೆ 25 ಸಾವಿರ ಮನೆಗಳು ಕಟ್ಟುವ ಕಾರ್ಯಕ್ರಮಕ್ಕೆ 5 ಕೋಟಿ ರೂಪಾಯಿ ಬೇಕಾಗುತ್ತದೆ. ಸಾಧ್ಯವಾದರೆ 50 ಸಾವಿರ ಮನೆಗಳನ್ನು ಕಟ್ಟಿ 10 ಕೋಟಿ ರೂಪಾಯಿ ಪಂಚವಾರ್ಷಿಕ ಯೋಜನೆಯಲ್ಲಿ 10-20 ಕೋಟಿ ರೂಪಾಯಿಯವರೆಗೂ ನಾವು ಏರಿಸುತ್ತಾ ಹೋಗಬೇಕು ಎಂದು ಸ್ಪಷ್ಟವಾದ ಧೋರಣೆ ಹಾಕಿಕೊಂಡಿದ್ದೇವೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಹೌಸಿಂಗ್ ಬಗ್ಗೆ ಗೃಹನಿರ್ಮಾಣಕ್ಕೆ 5 ಕೋಟಿ ರೂಪಾಯಿ ಸಾಲದು- ಸ್ವಲ್ಪ ಜಾಸ್ತಿಮಾಡಿ.

ಶ್ರೀ ಎಂ. ವೈ. ಘೋರ್ಪಡೆ.—ನೀವು ಭಾಷಣ ಮಾಡುವಾಗ ನಾನು ಶಾಂತವಾಗಿ ಕೇಳಿದ್ದೇನೆ. ನಾನು ಹೇಳುವುದು ಶಾಂತವಾಗಿ ಕೇಳಿ. ವಿವರಗಳು ಬೇಕಾದರೆ ಪ್ರಶ್ನೆಗಳಿದ್ದರೆ ಕೇಳಿ, ಸಂತೋಷ, ಉತ್ತರ ಕೊಡುತ್ತೇನೆ. ಆದಕಾರಣ ಹೌಸಿಂಗ್ ಪ್ರೋಗ್ರಾಂ ಏನು ಇದೆ ಅದಕ್ಕೆ ಹೆಚ್ಚಿನ ಮಹತ್ವ ಸರ್ಕಾರ ಕೊಡುತ್ತದೆ. ಈ ಕೆಲಸದಲ್ಲಿ ಕೆಲವು ಸದಸ್ಯರು ಅನುಮಾನ ವ್ಯಕ್ತಮಾಡಿದರು. ದುಡ್ಡು ಏನು ಕೊಟ್ಟಿದ್ದಾರೆ ಅದು ದಕ್ಷತೆಯಿಂದ, ವೇಗದಿಂದ ಖರ್ಚುಮಾಡಿ ಈ ಕೆಲಸ ಮಾಡುವ ಮನಸ್ಸು ಸರ್ಕಾರಕ್ಕೆ ಇದೆ. We will give highst-Importance ಆ ದೃಷ್ಟಿಯಿಂದ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಕ್ಯಾಬಿನೆಟ್ ಸಬ್ ಕಮಿಟಿ ಅದಕ್ಕೋಸ್ಕರ ಮಾಡಬೇಕೆಂಬ ತೀರ್ಮಾನಕ್ಕೆ ಕೂಡ ಸರ್ಕಾರ ಬಂದಿದೆ. ಆದಕಾರಣ ಡ್ರಾಟ್ ಕಂಡೀಷನ್‌ಗೆ

ಯಾವರೀತಿ ಬಹಳ ಹೈಯೆಸ್ಟ್ ಇಂಪಾರ್ಟೆನ್ಸ್ ಕೊಡುತ್ತಿದ್ದೇವೆ ಅಷ್ಟೇ ಮಟ್ಟದಲ್ಲಿ ಕೆಲಸ ಕೂಡ ನಡೆಯಬೇಕು ಎಂದು ಸರ್ಕಾರಂದ ವಿಚಾರ ಇದೆ. ಇಂಥ ಒಂದು ಪರಿಸ್ಥಿತಿಯಲ್ಲಿ ರಾಜ್ಯ ಇದ್ದಾಗ ಕೂಡ ನಮ್ಮ ಯೋಜನೆಗಳಿಗೆ ಯಾವ ಒಂದು ಧಕ್ಕೆ ಬರಲಿಲ್ಲ. ಸಂತೋಷದಿಂದ ಹೇಳಬೇಕು ಎಂದರೆ ಯೋಜನೆ ಮಟ್ಟ ಜಾಸ್ತಿಯಾಗಿದೆ ಹೊರತು ಕಡಿಮೆಯಾಗಿಲ್ಲ, ಇದು ಸಮಾಧಾನದ ಮಾತು ಇದೆ. ಹೆಚ್ಚು ಭಯ ಇತ್ತು, ಇಂಥ ಪರಿಸ್ಥಿತಿಯಲ್ಲಿ ನಾಲ್ಕನೇ ಪಂಚವಾರ್ಷಿಕ ಯೋಜನೆ ಏನಾಗುತ್ತದೆ ಎಂದು ಸುದೈವದಿಂದ ನಾಲ್ಕನೇ ಪಂಚವಾರ್ಷಿಕ ಯೋಜನೆ ಯಾವ ಮಟ್ಟದಲ್ಲಿ ನಡೆಯಬೇಕು ಆ ಮಟ್ಟದಲ್ಲಿ ನಡೆಯುತ್ತಿದೆ. ತಮಗಾದರೂ ಈ ವರ್ಷದ ಅನ್ಯುಯಲ್ ಪ್ಲಾನ್ 1973-74ಕ್ಕೆ 84 ಕೋಟಿ ರೂಪಾಯಿ ಸಾಕು ಎಂದು ಹೇಳಿದರೂ ಸಹ ನಾವು 91 ಕೋಟಿ ರೂಪಾಯಿ ಪ್ಲಾನ್ ಹಾಕಿಕೊಂಡಿದ್ದೇವೆ. ಅದರ ಪರಿಣಾಮವಾಗಿ ನಾಲ್ಕನೇ ಪಂಚವಾರ್ಷಿಕಯೋಜನೆ ಏನು ಇದೆ ಅದರಲ್ಲಿ 5 ವರ್ಷದಲ್ಲಿ ಒಟ್ಟು 386 ಕೋಟಿ ರೂಪಾಯಿ ಆಗುತ್ತದೆ. 350 ಕೋಟಿ ರೂಪಾಯಿ ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಆಗುತ್ತದೆಯೋ ಇಲ್ಲವೋ ಎನ್ನುವ ಅನುಮಾನ ಕೆಲವು ದಿವಸಗಳ ಹಿಂದೆ ಇತ್ತು. ಇವೊತ್ತು ಆ 350 ಕೋಟಿ ರೂಪಾಯಿ ಇದ್ದದ್ದು 380 ಕೋಟಿ ರೂಪಾಯಿ ಯೋಜನೆ ನಾಲ್ಕನೇ ಪಂಚವಾರ್ಷಿಕ ಯೋಜನೆಗೆ ಆಗಿದೆ ಎಂದು ಹೇಳಿದರೆ ತಪ್ಪಾಗಲಿಕ್ಕೆ ಇಲ್ಲ. ಕಾಳಿನದಿ ಪ್ರಾಜೆಕ್ಟಿನ 3 ಕೋಟಿ ರೂಪಾಯಿ ಸೇರಿಸಿದರೆ ಇನ್ನೂ ಜಾಸ್ತಿಯಾಗುತ್ತದೆ ಎಂದು ನನ್ನ ಭಾಷಣದಲ್ಲಿ ಹೇಳಿದೆ. ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್ ಲೆಕ್ಕ ಹಾಕಿಕೊಂಡಿದ್ದೇವೆ. ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ 500 ಕೋಟಿ ರೂಪಾಯಿ ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್ ಮಾಡಿದ್ದೇವೆ, ಅದರಲ್ಲಿ ಅರ್ಧ ಭಾಗ ಎರಡನೇ ವರ್ಷದಲ್ಲಿ 1972-73, 1973-74 ಆದಕಾರಣ ಡೆವಲಪ್‌ಮೆಂಟ್ ದೃಷ್ಟಿಯಿಂದ ಬಹಳ ತೃಪ್ತಿಕರವಾಗಿವೆ. ಇಂಥ ಹಣಕಾಸಿನ ಕಷ್ಟಪರಿಸ್ಥಿತಿ ಇದ್ದರೂ ಕೂಡ ನಮ್ಮ ಯೋಜನೆಗಳು ಏನು ಇವೆ ಅವು ಬಹಳ ತೃಪ್ತಿಕರವಾಗಿ ನಡೆದಿವೆ ಎಂದು ನಾನು ಹೇಳಬಯಸುತ್ತೇನೆ. ಅಷ್ಟೇ ಅಲ್ಲ 5ನೇ ಪಂಚವಾರ್ಷಿಕ ಯೋಜನೆಯ ಬಗ್ಗೆ ಕೂಡ ಈ ಸಂದರ್ಭದಲ್ಲಿ ಇಷ್ಟು ಹೇಳಲಿಕ್ಕೆ ಸಾಧ್ಯ, ಅಷ್ಟು ಹೇಳಿದ್ದೇನೆ. ಉದಾಹರಣೆಗಾಗಿ ನೀರಾವರಿ ನಮ್ಮ ರಾಜ್ಯದಲ್ಲಿ ಇರತಕ್ಕ ಮತ್ತು ವಿದ್ಯುಚ್ಛಕ್ತಿ ಇದು ಡಬ್ಬಲ್ ಅಲ್ಲ ತ್ರಿಬ್ಬಲ್ ಮಾಡಬೇಕೆಂದು ಹೇಳಿದೆ. ಇದನ್ನು ನಾವು ಮಾಡಬೇಕಾದರೆ ಸುಮಾರು 500 ಕೋಟಿ 600 ಕೋಟಿ ರೂಪಾಯಿ ಖರ್ಚಾಗುತ್ತದೆ. ವಿದ್ಯುಚ್ಛಕ್ತಿ ಮತ್ತು ನೀರಾವರಿ 5ನೇ ಪಂಚವಾರ್ಷಿಕ ಯೋಜನೆಯಾಗಿದೆ. ನಾನು ಮೊನ್ನೇ ಹೇಳಿವೆ 1000 ಕೋಟಿ ರೂಪಾಯಿ, 1200 ಕೋಟಿ ರೂಪಾಯಿ ಆದರೂ ಅದರಲ್ಲಿ 600 ಕೋಟಿ ರೂಪಾಯಿ ವಿದ್ಯುಚ್ಛಕ್ತಿ ಮತ್ತು ನೀರಾವರಿಗೋಸ್ಕರ ಬೇಕೇ ಬೇಕು. ಆ ರೀತಿಯಲ್ಲಿ ಪಂಚವಾರ್ಷಿಕಯೋಜನೆ ಬಗ್ಗೆ ಯೋಚನೆ ಮಾಡುತ್ತಿದ್ದೇವೆ. ಬಹಳ ಧೈರ್ಯವಾಗಿ ಯೋಜನೆ ಮಾಡುತ್ತಿದ್ದೇವೆ 5ನೇ ಪಂಚವಾರ್ಷಿಕ ಯೋಜನೆ ಏನಿದೆ ಅದನ್ನು ಆದಷ್ಟು ಮಟ್ಟಿಗೂ ಜಾಸ್ತಿ ಮಾಡುವ ಪ್ರಯತ್ನ ನಾವು ಮಾಡುತ್ತಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಎಷ್ಟು ಕೋಟಿ ರೂಪಾಯಿಗಳು ?

ಶ್ರೀ ಎಂ. ವೈ. ಘೋರ್ಪಡೆ.—ಇಷ್ಟೇ ಎನ್ನುವುದನ್ನು ತೀರ್ಮಾನ ಮಾಡಿಲ್ಲ. ಆದರೂ ಕೂಡ ಮೈಸೂರು ರಾಜ್ಯದಲ್ಲಿ ಇರಿಗೇಷನ್ ಮತ್ತು ಪವರ್ 5ನೇ ಪಂಚವಾರ್ಷಿಕ ಯೋಜನೆಯಲ್ಲಿ ಈಗ ಏನು ಇದೆ ಅವಕ್ಕೆ ಮೂರರಷ್ಟು ಮಾಡಬೇಕಾದರೆ ಇರಿಗೇಷನ್ ಬಗ್ಗೆ 500-600 ಕೋಟಿ ರೂಪಾಯಿ ಖರ್ಚು ಮಾಡಬೇಕು ಎಂದು ಹೇಳಿದೆ.

[MR DEPUTY SPEAKER in the Chair]

ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಹೇಳಿದರು. ಹಳ್ಳಿಗಾಡುಗಳಲ್ಲಿ ಏನು ಮಾಡುತ್ತೀರಿ ಎಂದು ಹಳ್ಳಿಗಳು ಮತ್ತು ತಾಲ್ಲೂಕು ತಾಲ್ಲೂಕುಗಳಲ್ಲಿ ಏನು ವ್ಯತ್ಯಾಸ ಇದೆ, ಒಂದೇ ಜಿಲ್ಲೆಯಲ್ಲಿ ಏನು ವ್ಯತ್ಯಾಸ ಇದೆ ಎಂಬುದು ತಮಗೆ ಗೊತ್ತು. ಒಂದು ತಾಲ್ಲೂಕು ಅಭಿವೃದ್ಧಿಯಾಗಿದೆ, ಇನ್ನೊಂದು ತಾಲ್ಲೂಕು ಅಭಿವೃದ್ಧಿಯಾಗಿಲ್ಲ ಇದು ಕೂಡ ಗೊತ್ತಿದೆ. ಇದನ್ನು ನೇರವಾಗಿ ತಿಳಿದುಕೊಂಡು ಅದಕ್ಕೆ ಅನುಗುಣವಾಗಿ 5ನೇ ಪಂಚವಾರ್ಷಿಕ ಯೋಜನೆ ಮಾಡಬೇಕೆಂಬ ಸ್ಪಷ್ಟವಾದ ಅಭಿಪ್ರಾಯ ಇದೆ. ಬೇಸಿಕ್ ಅಮೆನಿಟೀಸ್ ಏನು ಆಗಬೇಕು ಎಂಬುದನ್ನು ಸರಿಯಾಗಿ ತಿಳಿದುಕೊಳ್ಳಬೇಕು. ಯಾವ ಯಾವ ತಾಲ್ಲೂಕಿನಲ್ಲಿ ಯಾವ ದೃಷ್ಟಿಯಲ್ಲಿ ತಾಲ್ಲೂಕುಗಳು ಮುಂದೆ ಬಂದಿವೆ, ಯಾವ ದೃಷ್ಟಿಯಲ್ಲಿ ಹಿಂದುಳಿದಿವೆ ಎಂಬುದನ್ನು ಸ್ಪಷ್ಟವಾಗಿ ವಿಚಾರ ಮಾಡಬೇಕಾಗುತ್ತದೆ, ಒಂದು ಪ್ರೋ ಫಾರ್ಮ ಮಾಡುತ್ತಿದ್ದೇವೆ. ಅದನ್ನು ಪ್ರತಿಯೊಂದು ತಾಲ್ಲೂಕುಗಳಿಗೂ

(ಶ್ರೀ ಎಂ. ವೈ. ಘೋರ್ಪಡೆ)

ಕಳುಹಿಸಿಕೊಡುತ್ತಿದ್ದೇವೆ. ಇದರ ಉದ್ದೇಶ್ಯ ಇಷ್ಟೇ, ಯಾವುದು ಹಿಂದುಳಿದಿದೆ, ಯಾವುದು ಹಿಂದುಳಿದಿಲ್ಲ ಎಂಬ ಸ್ಪಷ್ಟವಾದ ಚಿತ್ರ ನಮಗೆ ಬರಬೇಕು. ಸುಲಭವಾಗಿ ಹೇಳುತ್ತೇನೆ. ಜಿಲ್ಲೆಯಲ್ಲಿ ಎಲ್ಲಾ ಹಿಂದುಳಿದಿಲ್ಲ, ಜಿಲ್ಲೆಯಲ್ಲಿ ಎಲ್ಲಾ ಮುಂದುವರಿದಿಲ್ಲ. ಕೆಲವು ಜಿಲ್ಲೆಗಳಲ್ಲಿ ನೀರಾವರಿ ಇದೆ, ಕೆಲವು ಭಾಗಗಳಲ್ಲಿ ಬಹಳ ಮುಂದೆ ಬಂದಿದೆ, ಹಿಂದುಳಿದ ಭಾಗ ಯಾವುದಿದೆ ಅಲ್ಲಿ ಹೆಚ್ಚು ಡ್ರಾಟ್ ಇರಬಹುದು. ಪ್ರತಿ ತಾಲ್ಲೋಕು ಮಟ್ಟದಲ್ಲಿ ಬೇಸಿಕ್ ಅಮೆನಿಟೀಸ್ ಪರಿಸ್ಥಿತಿ ಏನು ಇದೆ, ಎಜುಕೇಷನ್ ಹೆಲ್ತ್, ಬೇಸಿಕ್ ಡೆವಲಪ್‌ಮೆಂಟ್, ಕುಡಿಯುವ ನೀರಿನ ಪರಿಸ್ಥಿತಿ ಏನು ಇದೆ, ಇದನ್ನೆಲ್ಲಾ ಸ್ಪಷ್ಟವಾಗಿ ಈಗಲೇ ತಿಳಿದುಕೊಳ್ಳುವುದು ಅಗತ್ಯ. ಅಷ್ಟೇ ಅಲ್ಲ ಎಂಪ್ಲಾಯ್‌ಮೆಂಟ್ ಪೊಸಿಷನ್ ಕೂಡ ತಿಳಿದುಕೊಳ್ಳಬೇಕಾಗುತ್ತದೆ. ಅದರ ಸ್ವರೂಪ ಬಹಳ ವಿವರವಾಗಿ ತಿಳಿದುಕೊಳ್ಳಬೇಕು. ಎಂಪ್ಲಾಯ್‌ಮೆಂಟಿನ ಕಷ್ಟ ಆ ಕಡೆ ನೋಡಿ, ಜನರಲ್ ಸ್ಟೇಟ್‌ಮೆಂಟ್ ಮಾಡಿದರೆ ಸಾಲದು. ನಮ್ಮ ದೇಶದಲ್ಲಿ ಎಷ್ಟು ಅನ್ ಎಂಪ್ಲಾಯ್‌ಮೆಂಟ್ ಇದೆ; ಗ್ರಾಜ್ಯುಯೆಟ್ ಅನ್ ಎಂಪ್ಲಾಯ್‌ಮೆಂಟ್ ಎಷ್ಟು ಇದೆ; ಅನ್ ಎಂಪ್ಲಾಯ್‌ಮೆಂಟ್ ಯಾವ ಯಾವ ತಾಲ್ಲೋಕಿನಲ್ಲಿ ಇದೆ; ಎಂತಹ ಅನ್ ಎಂಪ್ಲಾಯ್‌ಮೆಂಟ್ ಇದೆ ಎಂಬುದನ್ನೆಲ್ಲಾ ಅಭ್ಯಾಸಮಾಡಬೇಕು, ಹೊಸ ರೀತಿಯಲ್ಲಿ ಅಂಕಿಅಂಶ ಸಂಗ್ರಹಿಸಬೇಕು. ಹಾಗೆ ಮಾಡಿದರೆ ವಾಸ್ತವಿಕ ಸ್ಥಿತಿ ಗೊತ್ತಾಗುತ್ತದೆ. ಕೆಲವು ತಾಲ್ಲೋಕಿನಲ್ಲಿ ಜನರಿಗೆ ಸೀಸನಲ್ ಅನ್ ಎಂಪ್ಲಾಯ್‌ಮೆಂಟ್ ಇರುತ್ತದೆ, ನಾಲ್ಕು ತಿಂಗಳು ಮಾತ್ರ ತೊಂದರೆ ಇರುತ್ತದೆ. ಇನ್ನೊಂದು, ಕೆಲವು ತಾಲ್ಲೋಕುಗಳಲ್ಲಿ 8 ತಿಂಗಳು ತೊಂದರೆ ಇರಬಹುದು. ಅನ್‌ಸ್ಕಿಲ್ಡ್ ಅನ್ ಎಂಪ್ಲಾಯ್‌ಮೆಂಟ್ ಇರಲಿಕ್ಕೆ ಇಲ್ಲ; ಟೆಕ್ನಿಕಲ್ ಅನ್‌ಎಂಪ್ಲಾಯ್‌ಮೆಂಟ್ ಇರಬಹುದು, ಬೀದರ್‌ನಲ್ಲಿ ಇರತಕ್ಕ ಅನ್ ಎಂಪ್ಲಾಯ್‌ಮೆಂಟ್ ಎಂತಹದು ; ಮಲೆನಾಡು ಪ್ರದೇಶದಲ್ಲಿ ಇರತಕ್ಕ ಅನ ಎಂಪ್ಲಾಯ್‌ಮೆಂಟ್ ಎಂತಹದು ; ಬಳ್ಳಾರಿಯಲ್ಲಿ ಇರತಕ್ಕ ಅನ್ ಎಂಪ್ಲಾಯ್‌ಮೆಂಟ್ ಎಂತಹದು ಎಂದು ಸ್ಪಷ್ಟವಾಗಿ ತಿಳಿದುಕೊಳ್ಳಬೇಕಾಗುತ್ತದೆ. ತಿಳಿದುಕೊಂಡು ಅನ್‌ಸ್ಕಿಲ್ಡ್, ಎಜುಕೇಟೆಡ್ ಅನ್ ಎಂಪ್ಲಾಯ್ಡ್ ಅಂಥ ಬೇರೆಬೇರೆ ರೀತಿ ಅನ್, ಎಂಪ್ಲಾಯ್‌ಮೆಂಟ್ ಪ್ರಶ್ನೆ ಬಿಡಿಸುವುದಕ್ಕೋಸ್ಕರ ನೇರವಾಗಿ ಯೋಜನೆಗಳನ್ನು ಹಾಕಿಕೊಂಡು ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಬಹುದು, ಆಗ ಏನಾಗುತ್ತದೆ, ಖರ್ಚು ಏನು ಮಾಡಬೇಕು ಎಂಬುದು ಗೊತ್ತಾಗುತ್ತದೆ. ಆದರಿಂದ ಅನ್ ಎಂಪ್ಲಾಯ್‌ಮೆಂಟ್ ಪರಿಸ್ಥಿತಿಯನ್ನು ನೇರವಾಗಿ ನಾವು ಎದುರಿಸುವುದಕ್ಕೆ ಆಗುತ್ತದೆ. ಇಲ್ಲದೆ ಹೋದರೆ ಎಲ್ಲಿ ಖರ್ಚುಮಾಡಬೇಕು ಅಲ್ಲಿ ಖರ್ಚಾಗುವುದಿಲ್ಲ, ಎಲ್ಲಿ ಖರ್ಚು ಮಾಡಬಾರದು ಅಂಥ ಕಡೆ ಖರ್ಚಾಗುತ್ತದೆ. ನಮ್ಮ ದೇಶದಲ್ಲಿ, ರಾಜ್ಯದಲ್ಲಿ ಲಿಮಿಟೆಡ್ ರಿಸೋರ್ಸ್‌ಸ್ ಇರುವುದರಿಂದ ನಾವು ಏನು ಖರ್ಚುಮಾಡುತ್ತೇವೆ ಅದನ್ನು ಹೆಚ್ಚು ತಿಳುವಳಿಕೆಯಿಂದ ಅಭ್ಯಾಸಮಾಡಿ, ಬೇಸಿಕ್ ಅಮೆನಿಟೀಸ್ ದೃಷ್ಟಿಯಿಂದ, ಅನ್ ಎಂಪ್ಲಾಯ್‌ಮೆಂಟ್ ಸಮಸ್ಯೆಯನ್ನು ಪರಿಹರಿಸುವ ದೃಷ್ಟಿಯಿಂದ, ಒಂದು ಸರ್ವಸಾಮಾನ್ಯವಾದ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಉಂಟುಮಾಡುವ ದೃಷ್ಟಿಯಿಂದ, ತಾಲ್ಲೋಕು ಮಟ್ಟದಲ್ಲಿ ವ್ಯತ್ಯಾಸವನ್ನು ಕಡಿಮೆ ಮಾಡುವ ದೃಷ್ಟಿಯಿಂದ ಮಾಡಬೇಕು. ಆ ರೀತಿ ಮಾಡುವ ಪ್ರಯತ್ನ 5ನೇ ಪಂಚವಾರ್ಷಿಕ ಯೋಜನೆಯಲ್ಲಿ ನಾವು ಖಂಡಿತ ಮಾಡುತ್ತೇವೆ, ಇಂಥ ಪ್ರಯತ್ನ ಮಾಡಿ ಅಂಕಿಅಂಶಗಳನ್ನು ಸಂಗ್ರಹಿಸಿ ಅದರ ಬಗ್ಗೆ ನಾವು ಚರ್ಚೆಮಾಡೋಣ. ಒಂದು ಪಂಚವಾರ್ಷಿಕ ಯೋಜನೆ ತಯಾರು ಮಾಡುವ ಧಾಟಿ ಸರಿಯೋ ತಪ್ಪೋ ಅದರ ಬಗ್ಗೆ ಅಭಿಪ್ರಾಯವನ್ನು ವ್ಯಕ್ತಪಡಿಸಲು ಮಾನ್ಯಸದಸ್ಯರಿಗೆ ಅವಕಾಶ ಇದ್ದೇ ಇರುತ್ತದೆ. 5ನೇ ಪಂಚವಾರ್ಷಿಕ ಯೋಜನೆ ಅದು ಪೀಪಲ್ಸ್ ಪ್ಲಾನ್ ಆಗಬೇಕು. ವಿಧಾನಸೌಧದಲ್ಲಿ ಅಥವಾ ಡೆಲ್ಲಿಯಲ್ಲಿ ಕೂತು ಮಾಡುವುದು ಅಲ್ಲ. ಹಳ್ಳಿ ಪರಿಸ್ಥಿತಿ ಸರಿಯಾಗಿ ತಿಳಿದುಕೊಂಡು ಮಾಡತಕ್ಕ ಜನತಾಪ್ಲಾನ್ ಮಾಡಬೇಕಾಗುತ್ತದೆ. ಈ ಒಂದು ದಿಶೆಯಲ್ಲಿ ನಾವು ಸಾಕಷ್ಟು ಪ್ರಯತ್ನ ಮಾಡಬೇಕಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ನಿಮ್ಮ ಪ್ಲಾನಿಂಗ್ ಬೋರ್ಡ್ ಎಲ್ಲಾ ಪಟ್ಟಣದಲ್ಲಿರುವುದು, ಹಳ್ಳಿಯಲಲ್ಲ.

3-30 P.M.

ಶ್ರೀ ಎಂ. ವೈ. ಘೋರ್ಪಡೆ.—ಒಂದು ಪ್ರೊಫಾರ್ಮ ತಯಾರು ಮಾಡಿ ಅಂಕಿ ಸಂಖ್ಯೆಗಳನ್ನು ಸಂಗ್ರಹಿಸಿ ನಾನು ಪ್ರತಿಯೊಂದು ಜಿಲ್ಲೆಗೆ ಹೋಗಿ ಅಲ್ಲಿರತಕ್ಕಂಥ ಪ್ರತಿನಿಧಿಗಳ ಜೊತೆಗೆ ಚರ್ಚೆ ಮಾಡಿ ಈ ಪ್ರಶ್ನೆಗಳನ್ನು ನೇರವಾಗಿ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈ 5ನೇ ಪಂಚವಾರ್ಷಿಕ ಯೋಜನೆಯಲ್ಲಿ ನಮ್ಮ ರಾಜ್ಯವನ್ನು ರೂಪಿಸುವ ಪ್ರಯತ್ನ ಸಾಕಷ್ಟು ಪ್ರಮಾಣದಲ್ಲಿ ಆಗುತ್ತದೆ ಎಂದು ನಾನು ಆಶ್ವಾಸನ ಕೊಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—5ನೇ ಪಂಚವಾರ್ಷಿಕ ಯೋಜನೆ ರೂಪಿಸುವ ದೃಷ್ಟಿಯಿಂದ ಫೇಸ್ಡ್ ಪ್ಲಾನ್ ಮಾಡುವ ದೃಷ್ಟಿಯಿಂದ ಯೂನಿವರ್ಸಿಟಿ ಮತ್ತು ಸ್ಥಳೀಯ ಶಾಲೆಗಳಲ್ಲಿರತಕ್ಕಂಥ ಇನ್‌ಟೆಲಿಜೆನ್ಸ್ ಕ್ಲಾಸ್ ಏನು ಇದೆ ಅದಕ್ಕೂ ಕೂಡ ಸ್ವಲ್ಪ ಕೆಲಸ ಹಚ್ಚತಕ್ಕ ಪ್ರಯತ್ನ ಮಾಡಬೇಕು. ಆ ಬಗ್ಗೆ ನಾನು ಹೇಳುತ್ತೇನೆ. ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ವಿಚಾರಗೋಷ್ಠಿ ಮಾಡಿ ಅವರಿಂದ ಏನು ಬರುತ್ತಾರೆ ಅದನ್ನು ಸ್ವಲ್ಪ ತೆಗೆದುಕೊಂಡು ಇದಕ್ಕೆ ಸೇರಿಸಬೇಕು ಎಂದು ಹೇಳುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ.—ಇದು ಏನಾಗುತ್ತದೆ ಎಂದರೆ ನಾವು ಇದನ್ನು ಬಹಳ ದೊಡ್ಡದಾಗಿ ಮಾಡಿದರೆ ಏನೂ ಆಗುವುದಿಲ್ಲ. ನಾವು ಪ್ರೋಗ್ರಾಂ ಹಾಕಿಕೊಂಡಿದ್ದೇವೆ. ಸಾಯಿಲ್ ಕನ್‌ಸರ್ವೇಷನ್ ಸ್ಪಷ್ಟವಾಗಿದೆ, ಸುಲಭವಾಗಿಯೂ ಇದೆ, ಹಳ್ಳಿಗಳ ಜನಕ್ಕೆ ಗೊತ್ತಾಗುವ ರೀತಿಯಲ್ಲಿ ಮಾಡಿದೆ. ಬೇಸಿಕ್ ಅಮಿನಿಟೀಸ್ ಮತ್ತು ಅನ್‌ಎಂಪ್ಲಾಯ್‌ಮೆಂಟ್ ಇಷ್ಟು ಮಾತ್ರ ತೆಗೆದುಕೊಂಡು ಇದರ ಬಗ್ಗೆ ಚರ್ಚೆ ಬೇಕಾದರೆ ಮಾಡೋಣ. ಈ ವಿಷಯದಲ್ಲಿ ಯಾರು ಯಾರಿಗೆ ಆಸಕ್ತಿ ಇದೆಯೋ ಅವರ ಜೊತೆಗೆ ಚರ್ಚೆ ಮಾಡುವುದರಲ್ಲಿ ತೊಂದರೆ ಇಲ್ಲ. Issue is a very simple one. ಇದು ಹಳ್ಳಿ ಜನಗಳಿಗೆ ಗೊತ್ತಾಗುತ್ತದೆ. ಇದರಲ್ಲಿ ಏನೂ ತೊಡಕು ಇಲ್ಲ.

ಇನ್ನು 5ನೇ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟು ಪ್ರಾಮುಖ್ಯತೆ ಕೊಡಬೇಕೋ ಅಷ್ಟು ಕೊಡುವುದಕ್ಕೆ ಪ್ರಯತ್ನ ಮಾಡೋಣ. Let us not complicate it. ಇಲ್ಲದೇ ಹೋದರೆ ಬಹಳ ಚರ್ಚೆ ಆಗುತ್ತದೆ. Basic issues are forgotten. The basic issues are simple. ಈ ದೃಷ್ಟಿಯಿಂದ ಫೈನಾನ್ಸ್ ಕಮೀಷನ್ ಮುಂದೆ ನಮ್ಮ ರಾಜ್ಯದ ವತಿಯಿಂದ ಏನು ಮೆಮೋರ್ಯಾಂಡಂ ಕೊಟ್ಟಿದ್ದೇವೆ ಅದು ಸ್ಪಷ್ಟವಾಗಿದೆ. ಧೈರ್ಯವಾಗಿ ಹೇಳಲಿಕ್ಕೆ ಏನೇನು ಸಾಧ್ಯ ಅಷ್ಟೂ ಅದರಲ್ಲಿ ಹೇಳಿದ್ದೇನೆ ಎಂದು ನನಗೆ ಅನಿಸುತ್ತದೆ. ಅದಕ್ಕಿಂತ ಹೆಚ್ಚಿಗೆ ಯಾವ ರಾಜ್ಯದಲ್ಲೂ ಕೂಡ ಕೇಳಲಿಲ್ಲ. ಪತ್ರಿಕೆಯಲ್ಲಿ ಕಾಮೆಂಟ್ ಬಂದಿರುವುದನ್ನು ನೋಡಿದರೆ ತಮಿಳುನಾಡಿನವರು ಮಾಡಿರತಕ್ಕಂಥ ವಾದಕ್ಕೂ, ಮೈಸೂರಿನವರು ಮಾಡಿರತಕ್ಕಂಥ ವಾದಕ್ಕೂ ಹೋಲಿಸಿದರೆ ಮೈಸೂರಿನವರು ಮಾಡಿರತಕ್ಕಂಥ ವಾದ ಸೌಮ್ಯ ಇದೆ. ಈ ವಾದ ಏನು ಇದೆ ಅದು ಕೇಂದ್ರಕ್ಕೆ ಹೆದರಿ ಮಾಡಿರತಕ್ಕಂಥಾದ್ದಲ್ಲ. ಕರ್ನಾಟಕದ ಹಿತ ದೃಷ್ಟಿಯಿಂದ ಏನೇನು ಕೇಂದ್ರಕ್ಕೆ ಹೇಳಬೇಕಾಗಿತ್ತೋ ಅವನ್ನೆಲ್ಲಾ ನಿರ್ದಿಷ್ಟವಾಗಿ, ಸ್ಪಷ್ಟವಾಗಿ ಹೇಳಿದ್ದೇನೆ. ಇನ್ನು ಮುಂದೂ ಕೂಡ ಹೇಳುತ್ತೇನೆ. ಹಾಗೆ ಹೇಳಿದಾಗ ನೀವು ಬೆಂಬಲ ಕೊಡಬೇಕು, ಸಹಕಾರ ಕೊಡಬೇಕು. ಶ್ರೀಮಾನ್ ದೇವೇಗೌಡರು Demands one sky high ಎಂದು ಹೇಳಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ನಿಮ್ಮ ಬೆನ್ನನ್ನು ನೀವೇ ಚಪ್ಪರಿಸುತ್ತಿದ್ದೀರಿ. ಏನೇನು ಕೇಳಬೇಕೋ ಅದನ್ನು ಕೇಳಿದರೆ ಅದು ಅನ್‌ರಿಯಾಲಿಸ್ಟಿಕ್ ಎಂದು ಹೇಳುತ್ತೀರಿ. I have noted down your own words, our demands should not go sky high ಎಂದು ಹೇಳಿದ್ದೀರಿ. I have made my remarks according to the assurances of the Finance Minister. According to his ex-pectation, if the award is in our favour it is well and good.

Sri M.Y.GHORPADE.—The award is not in our hands. We have made a full and proper representation. I expect the Leader of the opposition and members of all political parties to strongly support. ನೀವು ಬಜೆಟ್‌ಮೇಲೆ ಟೀಕೆ ಮಾಡುವಾಗ ಯಾವ ಯಾವ ಅಂಕಿ ಅಂಶಗಳನ್ನು ನಮ್ಮ ರಾಜ್ಯದ ಹಿತದೃಷ್ಟಿಯಿಂದ ಒಳ್ಳೆಯದು ಇದೆ ಎಂದು ಅದನ್ನು ಬಾಯಿಬಿಟ್ಟು ಹೇಳಬೇಕು. ಅದು ನಿಮ್ಮ ಜವಾಬ್ದಾರಿ. ಒಬ್ಬರೂ ಆ ಮಾತನ್ನು ಹೇಳದೇ ಹೋದರೆ ನಮ್ಮ ರಾಜ್ಯದ ಹಿತವನ್ನು ಕಾಪಾಡುವುದಕ್ಕಾಗುವುದಿಲ್ಲ. ನಾವೂ ನೀವೂ ಒಂದೇ. ರಾಜ್ಯದ ಹಿತದೃಷ್ಟಿಯಿಂದ ಮಾಡುವ ಕೆಲಸಕ್ಕೆ ಸಂಪೂರ್ಣ ಬೆಂಬಲವನ್ನು ಎಲ್ಲರೂ ಕೊಡಬೇಕು ಎಂದು ಈ ಸನ್ನಿವೇಶದಲ್ಲಿ ಹೇಳುತ್ತೇನೆ.

ಇನ್ನು ನಾನು ಇಷ್ಟು ಮಾತ್ರ ಹೇಳುತ್ತೇನೆ. ಫೈನಾನ್ಸ್ ಕಮೀಷನ್ ಮುಂದೆ ನಾವು ಮೆಮೋರ್ಯಾಂಡಂ ಇಟ್ಟಾಗ ಅವರೂ ಕೂಡ ಇದನ್ನು ಮೆಚ್ಚಿ ಹೇಳಿದರು. ಈ ವಾದ ಏನು ಇದೆ ಇದನ್ನು ಪ್ರತ್ಯೇಕವಾಗಿ ಬುಕ್‌ಲೆಟ್ ಮಾಡಿ ಕಳುಹಿಸಿ ಎಂದು. ಹಾಗೆ ಇದನ್ನು ಬುಕ್‌ಲೆಟ್ ಮಾಡಿ ಕಳುಹಿಸಿದ್ದೇನೆ. ಮಾನ್ಯ ಸದಸ್ಯರಿಗೂ ಹಂಚಿದ್ದೇನೆ. ಫೈನಾನ್ಸ್ ಕಮೀಷನ್‌ಗೆ ಏನೇನು ಹೇಳಿದ್ದೇವೆ ಅದು ಬರೀ ಆಫಿಷಿಯಲ್ ಮೆಮೋರ್ಯಾಂಡ ಅಷ್ಟೇ ಅಲ್ಲ, ಏನೇನು ವಾದ ಮಾಡಿದ್ದೇವೆ ಅದನ್ನು ಬುಕ್‌ಲೆಟ್ ಮಾಡಿ ಎಲ್ಲರಿಗೂ ಹಂಚಿದ್ದೇವೆ. ಆ ವಾದವನ್ನು ಏನಾದರೂ ಕೇಂದ್ರ ಸರ್ಕಾರ

(SRI M. Y. GHORPADE)

ದವರು ಒಪ್ಪುತ್ತಾರೆ ಎಂದು ನಾನು ನಂಬಿದ್ದೇನೆ. ಅವರು ಸಾಕಷ್ಟು ಪ್ರಮಾಣದಲ್ಲಿ ಒಪ್ಪುತ್ತಾರೆ. ಆ ಕೇಂದ್ರಕ್ಕೂ ಮತ್ತು ರಾಜ್ಯ ಸರ್ಕಾರಕ್ಕೂ ಹಣಕಾಸಿನ ಸಂಬಂಧ ಏನು ಇದೆ ಅದು ಒಂದು ಹೊಸ ಅಧ್ಯಾಯ ಇದರಲ್ಲಿ ಪ್ರಾರಂಭವಾಗುತ್ತದೆ ಎಂದು ನನಗೆ ಅನಿಸುತ್ತದೆ. ಅದನ್ನು ಮಾಡದೇ ಹೋದರೆ ಹಣಕಾಸಿನ ಪರಿಸ್ಥಿತಿ ಹಲವಾರು ರಾಜ್ಯಗಳಲ್ಲಿ ಏನು ಕೆಟ್ಟಿದೆ ಅದನ್ನು ಸುಧಾರಿಸುವುದಕ್ಕೆ ಆಗುವುದಿಲ್ಲ. ಸಾಕಷ್ಟು ಪ್ರಮಾಣದಲ್ಲಿ ಫೈನಾನ್ಸ್ ಕಮೀಷನ್ ಒಪ್ಪ ಬೇಕಾಗುತ್ತದೆ. ಒಪ್ಪಿದರೆ ಸೆಂಟ್ರಲ್ ಸ್ಟೇಟ್ ರಿಲೇಷನ್‌ಗೆ ಒಂದು ಹೊಸ ಛಾಪ್ಟರ್ ತೆಗೆದಂತಾಗುತ್ತದೆ. ಈ ಒಂದು ಸೆಂಟ್ರಲ್ ರಿಲೇಷನ್ಸ್ ಬಗ್ಗೆ ಈ ಒಂದು ಪರಿಸ್ಥಿತಿ ಇರುವಾಗ ಮೈಸೂರಿನ ಒಂದು ಕಾಂಟ್ರಿ-ಬ್ಯೂಷನ್ ಏನು ಇದೆಯೋ ಅದನ್ನು ನಾವು ಮಾಡಬೇಕಾಯಿತು. ಅದನ್ನು ಸ್ಪಷ್ಟವಾಗಿ, ಧೈರ್ಯ ವಾಗಿ ಮಾಡಿದ್ದೇವೆ. ನಿಮ್ಮೆಲ್ಲರ ಪತಿಯಿಂದ ಮಾಡಿದ್ದೇವೆ ಎಂದು ಹೇಳಿದರೆ ಅತಿಶಯೋಕ್ತಿಯಾದ ಮಾತು ಆಗುವುದಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಟ್ಯಾಕ್ಸ್ ಹಾಕುವ ವಿಷಯದಲ್ಲಿ ನಾನು ಆಗಲೇ ಹೇಳಿದ್ದೇನೆ. ಬರಗಾಲ ಪರಿಸ್ಥಿತಿ ಇರುವುದರಿಂದ ಫೈನಾನ್ಸ್ ಕಮೀಷನ್ ದೃಷ್ಟಿಯಿಂದ, ಎಲ್ಲ ದೃಷ್ಟಿಯಿಂದಲೂ ಇದು ಟ್ಯಾಕ್ಸ್ ಹಾಕುವ ಕಾಲವಲ್ಲ. ಟ್ಯಾಕ್ಸ್ ಹಾಕುವ ಕಾಲ ಬಂದಾಗ ಆ ಮೇರೆ ಸಮಾಜವಾದಿ ಪಕ್ಷಕ್ಕೆ ಸೇರಿದವರು ಹೇಳಿದ ಪ್ರಕಾರ ಟ್ಯಾಕ್ಸ್ ಹಾಕುವ ಕಾಲ ಬರುತ್ತದೆ. ಟ್ಯಾಕ್ಸ್ ಹಾಕದೇ ಯಾವ ಪ್ರಗತಿಯನ್ನೂ ಕೂಡ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅಂತಹ ಟ್ಯಾಕ್ಸ್ ಕಾಲ ಬಂದಾಗ ಆ ಪ್ರಪೋಸಲ್ಸ್‌ನ್ನು ಎಷ್ಟರಮಟ್ಟಿಗೆ ಬೆಂಬಲಿಸಲಿಕ್ಕೆ ಸಾಧ್ಯವೋ, ವಿರೋಧಪಕ್ಷದವರು ಎಲ್ಲಾ ಬೆಂಬಲ ಕೊಡುತ್ತಾರೆ ಎಂದು ನಾನು ನಂಬಿದ್ದೇನೆ. ಬಾಂಗ್ಲಾ ದೇಶದ ವಿಷಯದಲ್ಲಿ ಒಂದು ಪಾಯಿಂಟ್ ಎತ್ತಿ ಕ್ರಿಟಿಸೈಸ್ ಮಾಡಿದ್ದಾರೆ. ಕೆಲವರಿಗೆ ಏನಾಗಿದೆ ಎಂದರೆ ಸರ್ಕಾರವನ್ನು ಟೀಕಿಸಲಿಕ್ಕೆ ಆಸ್ಪದ ಕೊಡಲಿಲ್ಲ ಎಂದು ಒಂದು ಸಿಟ್ಟು ಬಂದಿದೆ. ಬಾಂಗ್ಲಾ ದೇಶದ ಟ್ಯಾಕ್ಸ್ ಒಂದು ವರ್ಷ ಅಂತ ಇತ್ತು. ಎಲ್ಲರೂ ಇದರ ಬಗ್ಗೆ ಪಾಸು ಮಾಡಿದ್ದಾರೆ. ಇದರ ಬಗ್ಗೆ ಎಷ್ಟು ಹೇಳಬೇಕೋ ಅಷ್ಟನ್ನು ಹೇಳಿದ್ದೇನೆ. ನಮ್ಮ ರಾಜ್ಯದಲ್ಲಿ ಒಂದರಲ್ಲೇ ಮುಂದುವರಿಸುತ್ತೇವೆ ಅಂತಲ್ಲ ನಮ್ಮ ದೇಶದ 8 ರಾಜ್ಯಗಳಲ್ಲಿ ಬಾಂಗ್ಲಾ ದೇಶದ ಲೆವಿಯನ್ನು ಮುಂದುವರಿಸಿದ್ದಾರೆ. 3 ರಾಜ್ಯದಲ್ಲಿ ತೆಗೆದಿದ್ದಾರೆ. ಆದರೆ ಮೈಸೂರು ರಾಜ್ಯದಲ್ಲಿ ಯಾವ ಒಂದು ವರ್ಷಕ್ಕೋಸ್ಕರ ಎಕ್ಸ್‌ಟೆಂಡ್ ಮಾಡಿದ್ದೇವೆ ಎಂದು ಗೊತ್ತಿದೆ. ನಾವು ಈ ಸಂದರ್ಭದಲ್ಲಿ ಅದು ಬಿಟ್ಟು ಏನೂ ಮಾಡಲಿಕ್ಕೂ ಆಗುತ್ತಿರಲಿಲ್ಲ. ಏತಕ್ಕೆಂದರೆ 4 ನೇ ಅನ್ಯೂಯಲ್ ಪ್ಲಾನ್ 1973-74 ಕ್ಕೆ 91 ಕೋಟಿ ರೂಪಾಯಿಗೆ ಪ್ಲಾನಿಂಗ್ ಕಮೀಷನ್‌ನವರನ್ನು ಕೇಳದೆ ಏರಿಸಿದ್ದೇವೆ.

ಬಾಂಗ್ಲಾ ದೇಶದ ಅಡಿಷನಲ್ ಲೆವಿಯಿಂದ ಬರುವುದು ಎರಡು ಕೋಟಿ ರೂಪಾಯಿ ಮಾತ್ರ. 80 ಕೋಟಿ ರೂಪಾಯಿ ಟ್ಯಾಕ್ಸ್ ಬರುವುದರಲ್ಲಿ ಎರಡು ಕೋಟಿ ರೂಪಾಯಿ ಮಾತ್ರ ಇದರಿಂದ ಬರುತ್ತದೆ ಅಲ್ಲದೆ ಇದನ್ನು ಒಂದು ವರ್ಷಕ್ಕೆ ಮಾತ್ರ ಮುಂದುವರಿಸುತ್ತಿದ್ದೇವೆ. ಮುಂದೆ ಬೇಕಾದರೆ ಇದನ್ನು ಮುಂದುವರಿಸಬೇಕೋ ಬೇಡವೋ ಎನ್ನುವುದರ ಬಗ್ಗೆ ಸುದೀರ್ಘವಾಗಿ ನಾವು ಯೋಚನೆ ಮಾಡಲಿಕ್ಕೆ ಆಸ್ಪದವಿರುತ್ತದೆ. ಈಗಂತೂ ಇದನ್ನು ತೆಗೆಯಲಿಕ್ಕೆ ಸಾಧ್ಯವಿಲ್ಲ.

ಮಾನ್ಯ ದೇವೇಗೌಡರು ಮಾತನಾಡುವಾಗ ಎಷ್ಟರಮಟ್ಟಿಗೆ ಮಾಡುತ್ತಾರೆ ನೋಡೋಣ ಎನ್ನುವ ರೀತಿಯಲ್ಲಿ ಹೇಳಿದರು. ಹಾಗೆ ಅನ್ನಬಾರದು ಎಂದು ಮಾತ್ರ ಹೇಳುತ್ತೇನೆ. ನಾನು ಕೊಟ್ಟಿರುವ ಬುಕ್‌ಲೆಟ್‌ನಲ್ಲಿ ಪ್ರತಿಯೊಂದು ವಿಷಯವನ್ನೂ ತಿಳಿಸಿದ್ದೇನೆ, ನಮ್ಮಲ್ಲಿ ಯಾವ ಯಾವ ಕೆಲಸವಾಗಬೇಕು ಎಂದೂ ಬರೆದಿದೆ. ಎಸ್ಟಿಮೇಟ್ಸ್ ಮತ್ತು ಫೈನಾನ್‌ಷಿಯಲ್ ಪ್ರಾವಿಷನ್ ಮಾಡುವಾಗ ರಿಯಲಿಸ್ಟಿಕ್ಕಾಗಿ ಮಾಡಿದ್ದೇವೆ. ಉದಾಹರಣೆಗೆ ಮೈನರ್ ಇರಿಗೇಶನ್ ತೆಗೆದು ಕೊಂಡರೆ ಅದರಲ್ಲಿ ಇನ್‌ಕಂಪ್ಲೀಟ್ ವರ್ಕ್ಸ್ ಪೂರ್ತಿ ಮಾಡುವುದಕ್ಕೆ ಎಷ್ಟು ದುಡ್ಡು ಬೇಕೋ ಅದನ್ನು ಪ್ರೊವೈಡ್ ಮಾಡಿದ್ದೇವೆ. ಹೊಸ ಮೈನರ್ ಇರಿಗೇಷನ್ ಕೆಲಸಗಳಿದ್ದರೆ, ಸಾಮಾನ್ಯ ವಾಗಿ ಎರಡು ವರ್ಷದಲ್ಲಿ ಅದನ್ನು ಪೂರೈಸುವುದಕ್ಕೆ ಆಗುವ ಹಾಗೆ ಇದ್ದರೆ ಅದಕ್ಕೆ ಅರ್ಧ ಭಾಗದಷ್ಟು ಹಣವನ್ನು ಒದಗಿಸಿದ್ದೇವೆ. ಹಾಗೆಯೇ ಲಿಫ್ಟ್ ಇರಿಗೇಷನ್ ಒಂದು ವರ್ಷದಲ್ಲಿ ಪೂರೈಸಬಹುದು ಎಂದು ಅದಕ್ಕೆ ಪೂರ್ತಿ ಹಣವನ್ನು ಒದಗಿಸಿದ್ದೇವೆ. ಅದೇ ರೀತಿಯಾಗಿ ರಸ್ತೆ ಕೆಲಸ, ಸಾಯಿಲ್ ಕನ್ಸರ್ವೇಷನ್ ಕೆಲಸ ಇವುಗಳಿಗೆ ಸಂಪೂರ್ಣವಾಗಿ ಹಣವನ್ನು ಒದಗಿಸಿದ್ದೇವೆ. ಕಾರ್ಯಕ್ರಮ ದೊಡ್ಡದು ಹಾಕಿಕೊಂಡು ಟೋಕನ್ ಗ್ರಾಂಟ್ ತೆಗೆದುಕೊಂಡಿದ್ದರೆ ಆ ಮಾತು ಹೇಳಬಹುದಾಗಿತ್ತು. ಕಾರ್ಯಕ್ರಮ ಎಷ್ಟು ದೊಡ್ಡದಿದೆ ಅಷ್ಟೇ ಪ್ರಮಾಣದಲ್ಲಿ ರಿಯಲಿಸ್ಟಿಕ್ಕಾಗಿ

ಫೈನಾನ್ಷಿಯಲ್ ಪ್ರಾವಿಷನ್ ಮಾಡಿದ್ದೇವೆ, ಫಿಸಿಕಲ್ ಅಚೀವ್‌ಮೆಂಟ್ ಕಡಿಮೆಯಾಗುವುದಿಲ್ಲ. ಸ್ವಲ್ಪ ಹೆಚ್ಚು ಕಡಿಮೆಯಾದರೂ ಕೂಡ ಸಾಕಷ್ಟು ಪ್ರಮಾಣದಲ್ಲಿ ಫಿಸಿಕಲ್ ಅಚೀವ್‌ಮೆಂಟ್ ಮಾಡು ವುದಕ್ಕೆ ಸಾಧ್ಯವಾಗುತ್ತದೆ. ಇದರಲ್ಲಿ ಯಾರಿಗೂ ಅನುಮಾನ ಇರಬೇಕಾಗಿಲ್ಲ.

ಮೈನರ್ ಇರಿಗೇಷನ್ ಒಂದೇ ಬಾಬಿನಲ್ಲಿ ಗುಲ್ಬರ್ಗ ಜಿಲ್ಲೆಯಲ್ಲಿ ಮೊದಲಿನಿಂದ ಇಲ್ಲಿಯ ವರೆಗೂ ನೋಡಿದರೆ ಮೈನರ್ ಇರಿಗೇಷನ್ ಪೊಟೆನ್ಷಿಯಲ್ 53 ಸಾವಿರ ಎಕರೆ ಎಂದು ಲೆಕ್ಕಕ್ಕೆ ಹಾಕಿದ್ದಾರೆ. ಆದರೆ ನಿಜವಾಗಿ ನೀರಾವರಿಯಾಗಿರತಕ್ಕ ಪ್ರದೇಶ 14 ಸಾವಿರ ಎಕರೆ ಮಾತ್ರ; ಬಿದರೆ ಜಿಲ್ಲೆಯಲ್ಲಿ ಇರಿಗೇಷನ್ ಪೊಟೆನ್ಷಿಯಲ್ ಮಾರ್ಚಿ 1972 ರಲ್ಲಿ 16 ಸಾವಿರ ಎಕರೆ ಇತ್ತು, ಆಕ್ಚುಯಲ್ ಇರಿಗೇಷನ್ 2400 ಎಕರೆ ಮಾತ್ರ. ನಾವು ಹೊಸದಾಗಿ ಹಾಕಿಕೊಂಡಿರುವ ಕಾರ್ಯ ಕ್ರಮದಂತೆ 44 ಸಾವಿರ ಎಕರೆ ನೀರಾವರಿ ಮಾಡುವ ಉದ್ದೇಶವಿದೆ. ಅದೇ ರೀತಿ ಬಿಜಾಪುರದಲ್ಲಿ 48 ಸಾವಿರ ಎಕರೆ ನೀರಾವರಿ ಮಾಡುವ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಸಾಯಿಲ್ ಕನ್‌ಸರ್ವೇಷನ್ ನೋಡಿದರೆ, ಇನ್ನೂ ಬಹಳ ಆಶ್ಚರ್ಯವಾಗುತ್ತದೆ. ಮೊದಲಿನಿಂದ ಇಲ್ಲಿಯ ವರೆಗೂ ಎಂದರೆ ಮಾರ್ಚಿ 1972ರ ವರೆಗೂ ನಡೆದಿರುವಷ್ಟು ಕೆಲಸ ಒಂದೇ ವರ್ಷದಲ್ಲಿ ನಡೆದಿದೆ. ಅದಕ್ಕಿಂತ ಹೆಚ್ಚು ಪ್ರಮಾಣದಲ್ಲಿ 1973–74 ರಲ್ಲಿ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಬಿದರ್‌ನಲ್ಲಿ ಮಾರ್ಚಿ 197_ರ ವರೆಗೂ 31 ಸಾವಿರ ಎಕರೆಯಲ್ಲಿ ಮಾತ್ರ ಸಾಯಿಲ್ ಕನ್‌ಸರ್ವೇಷನ್ ಆಗಿತ್ತು; ನಾವು 1972–73 ಒಂದು ವರ್ಷದಲ್ಲೇ 41 ಸಾವಿರ ಎಕರೆಯಲ್ಲಿ ಸಾಯಿಲ್ ಕನ್‌ಸರ್ವೇಷನ್ ಮಾಡಿದ್ದೇವೆ. 1973-74ಕ್ಕೆ 3 ಲಕ್ಷ 24 ಸಾವಿರ ಎಕರೆ ಸಾಯಿಲ್ ಕನ್‌ಸರ್ವೇಷನ್ ಮಾಡುವ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಅದೇ ರೀತಿಯಾಗಿ ಗುಲ್ಬರ್ಗ ಮತ್ತು ಬಿಜಾಪುರ ಜಿಲ್ಲೆ ಗಳಲ್ಲಿಯೂ ಹಾಕಿಕೊಂಡಿದ್ದೇವೆ. ಗುಲ್ಬರ್ಗದಲ್ಲಿ 1972ರ ವರೆಗೂ 1 ಲಕ್ಷ 26 ಸಾವಿರ ಎಕರೆ ಮಾತ್ರ ಸಾಯಿಲ್ ಕನ್‌ಸರ್ವೇಷನ್ ನಡೆದಿದ್ದರೆ, 1972-73 ಒಂದು ವರ್ಷದಲ್ಲೇ 1 ಲಕ್ಷ 36 ಸಾವಿರ ಎಕರೆಯಲ್ಲಿ ಮಾಡಿದ್ದೇವೆ. ಮುಂದಿನ ವರ್ಷದಲ್ಲಿ ಅದಕ್ಕಿಂತ ಬಹಳ ದೊಡ್ಡ ಪ್ರಮಾಣದಲ್ಲಿ ಎಂದರೆ 8 ಲಕ್ಷ ಎಕರೆಯಲ್ಲಿ ಸಾಯಿಲ್ ಕನ್‌ಸರ್ವೇಷನ್ ಮಾಡುವ ಕಾರ್ಯಕ್ರಮವನ್ನು ಹಾಕಿ ಕೊಂಡಿದ್ದೇವೆ. ಆದಕಾರಣ ಇದು ಸರ್ಕಾರದ ದೃಷ್ಟಿಯಿಂದ ಮಾತ್ರ ಸಮಾಧಾನದ ಮಾತಲ್ಲ. ಕಳೆದ ಹತ್ತಿಪ್ಪತ್ತು ವರ್ಷಗಳಲ್ಲಿ ಸಾಯಿಲ್ ಕನ್‌ಸರ್ವೇಷನ್ ಮತ್ತು ಸಣ್ಣ ನೀರಾವರಿ ಯೋಜನೆ ಗಳಿಗೆ ಯಾವರೀತಿಯ ಪ್ರಾಮುಖ್ಯತೆ ಸಿಕ್ಕಬೇಕಾಗಿತ್ತೋ ಅದು ಸಿಕ್ಕಿದ್ದರೆ ಈಗಿನ ಬರಗಾಲ ಪರಿಸ್ಥಿತಿಯಲ್ಲಿ ಇಷ್ಟು ಕಷ್ಟಕ್ಕೆ ಜನ ಗುರಿಯಾಗುತ್ತಿರಲಿಲ್ಲ. ಅಷ್ಟು ಮಾತ್ರ ನಿಜ.

ಡಿಫಿಸಿಟ್ ಬಗ್ಗೆ ಶ್ರೀ ದೇವೇಗೌಡರು ಹೇಳಿದ್ದಾರೆ. ಫೈನಾನ್ಷಿಯಲ್ ಡಿಸಿಪ್ಲಿನ್ ಎಲ್ಲಿ ಉಳಿಯಿತು, ಇಷ್ಟೊಂದು ಡಿಫಿಸಿಟ್ ಆಗಿದೆ ಎಂದು ಹೇಳಿದ್ದಾರೆ. ಇದರ ಬಗ್ಗೆ ನನ್ನ ಭಾಷಣದಲ್ಲಿ ಬಹಳ ಸ್ಪಷ್ಟವಾಗಿ ಹೇಳಿದ್ದೇನೆ, ಡಿಫಿಸಿಟ್ ಆಗಲಿಕ್ಕೆ ಕಾರಣವೇನು, ಯಾವ ಯಾವ ಬಾಬಿನಲ್ಲಿ ರೆವೆನ್ಯೂ ಕಡಿಮೆಯಾಗಿದೆ, ಯಾವ ಯಾವ ಬಾಬಿನಲ್ಲಿ ನಾವು ಬಜೆಟ್ಟಿಗಿಂತ ಹೆಚ್ಚು ಹಣ ಖರ್ಚು ಮಾಡಬೇಕಾಯಿತು ಎಂಬುದನ್ನು ನನ್ನ ಭಾಷಣದ 15ನೇ ಪ್ಯಾರಾ, (1) ಮತ್ತು (2) ರಲ್ಲಿ ಸ್ಪಷ್ಟವಾಗಿ ಹೇಳಿದ್ದೇನೆ. ಲ್ಯಾಂಡ್ ರೆವೆನ್ಯೂನಲ್ಲಿ ಒಂದೂವರೆ ಕೋಟಿ ರೂಪಾಯಿ ಕಡಿಮೆ ಯಾಯಿತು. ಅದೇ ರೀತಿಯಾಗಿ ಸೇಲ್ಸ್‌ಟ್ಯಾಕ್ಸ್‌ನಲ್ಲಿ ನಾವು 60 ಕೋಟಿ ರೂಪಾಯಿ ನಿರೀಕ್ಷೆ ಮಾಡಿದ್ದೆವು. 57 ಕೋಟಿ ರೂಪಾಯಿ ಬಂದಿದೆ. ಕಳೆದ ವರ್ಷ 51 ಕೋಟಿ ರೂಪಾಯಿ ಮಾತ್ರ ಬಂದಿತ್ತು. ಆದ್ದರಿಂದ 1971-72 ಕ್ಕಿಂತ 6 ಕೋಟಿ ರೂಪಾಯಿ ಜಾಸ್ತಿ ಬಂದಿದೆ. ನಾವು ನಿರೀಕ್ಷೆಗಿಂತ ಮೂರು ಕೋಟಿ ರೂಪಾಯಿ ಕಡಿಮೆ ಬಂದಿದೆ. ಅದಕ್ಕೂ ಕಾರಣವಿದೆ. ಡಿಫಿಸಿಟ್ ಆಗಲಿಕ್ಕೂ ಕಾರಣ ಯಾವ ಒಂದು ಫೈನಾನ್ಷಿಯಲ್ ಇನ್‌ಡಿಸಿಪ್ಲಿನ್‌ನಿಂದ ಅಥವಾ ಹತೋಟಿ ಇಲ್ಲದೆ ಖರ್ಚು ಮಾಡಿರುವುದರಿಂದ ಆಗಿರತಕ್ಕದ್ದಲ್ಲ. ನಮ್ಮ ಡೆವಲಪ್‌ಮೆಂಟ್ ಟೆಂಪೊ ಮೇಂಟೇನ್ ಮಾಡಿಕೊಂಡು ಹೋಗಬೇಕು. ಬಜೆಟ್ ಮಾಡಿದ ನಂತರ ಅತ್ಯಗತ್ಯ ಕೆಲಸ ಮಾಡಬೇಕಾಗಿ ಬಂದರೆ, ಡೆವಲಪ್‌ಮೆಂಟ್ ಕೆಲಸ ಬಂದರೆ ಅದಕ್ಕೆ ಹಿಂಜರಿಯಬಾರದು. ಡೆವಲಪ್‌ಮೆಂಟ್ ಟೆಂಪೂ ಸಾಕಷ್ಟು ಪ್ರಮಾಣದಲ್ಲಿ ಕಾಪಾಡುವ ದೃಷ್ಟಿಯಿಂದ ಮಾಡಿದ್ದೇವೆ. ಡಿಫಿಸಿಟ್‌ಗೆ ಹೆದರಿಕೊಂಡು ಬಜೆಟ್ ಮಾಡಿದರೆ ಅದು ಆರ್ಟಿಫಿಷಿಯಲ್ ಬಜೆಟ್ ಆಗುತ್ತದೆ ಮತ್ತು ನಮ್ಮ ರಾಜ್ಯಕ್ಕೆ ಒಳ್ಳೆಯದಾಗು ವುದಿಲ್ಲ. ಆದಕಾರಣ ಫೈನಾನ್ಸ್ ಕಮಿಷನ್ ನಮ್ಮ ಬೆಳವಣಿಗೆಯ ದೃಷ್ಟಿಯಿಂದ ಯಾವ ರೀತಿಯಲ್ಲಿ ನಾವು ಬಜೆಟ್ ತಯಾರು ಮಾಡಬೇಕೋ ಆ ರೀತಿಯಲ್ಲಿ ಮಾಡಿದ್ದೇವೆ.

ಶ್ರೀ ಎಚ್. ಡಿ. ದೇವೇಗೌಡ.—ಆಕ್ಚುಯಲ್ಸ್ ಪ್ರಕಾರ ಡಿಫಿಸಿಟ್ ಎಷ್ಟಾಗುತ್ತದೆ.

ಶ್ರೀ ಎಂ. ವೈ. ಘೋರ್ಪಡೆ.—27 ಕೋಟಿ ರೂಪಾಯಿಗಳಿಗಿಂತ ಜಾಸ್ತಿ ಆಗಲಾರದು,

ಶ್ರೀ ಎಚ್. ಡಿ. ದೇವೇಗೌಡ.—ಕಂಟ್ರಾಕ್ಟರುಗಳಿಗೆ ಕೊಡಬೇಕಾದ ಬಿಲ್ಲುಗಳನ್ನು ನಿಲ್ಲಿಸ ಲಾಗಿದೆಯಲ್ಲವೇ ?

ಶ್ರೀ ಎಂ. ವೈ. ಘೋರ್ಪಡೆ.—ದೊಡ್ಡ ದೊಡ್ಡ ಕಂಟ್ರಾಕ್ಟರುಗಳಿಗೆ ಒಂದು ತಿಂಗಳು ಕೊಡ ಬೇಡಿ ಎಂದು ಹೇಳಿದ್ದೇವೆ. ಒಂದು ಕಡೆ ಫೈನಾನ್ಷಿಯಲ್ ಡಿಸಿಪ್ಲಿನ್ ಇರಬೇಕು ಎಂದು ಹೇಳುತ್ತೀರಿ, ಇನ್ನೊಂದು ಕಡೆ ಬಜೆಟ್ಟಿಗಿಂತ ಜಾಸ್ತಿ ಆದರೂ ದೊಡ್ಡ ದೊಡ್ಡ ಕಂಟ್ರಾಕ್ಟರುಗಳಿಗೆ ಬಿಲ್ಲುಗಳು ಕೊಡುವುದನ್ನು ನಿಲ್ಲಿಸಬೇಡಿ ಎಂದು ಹೇಳುತ್ತೀರಿ. ಹೀಗಾದರೆ ನಾವು ಏನು ಮಾಡು ವುದಕ್ಕಾಗುತ್ತದೆ ?

ಪುಟ 42ರಲ್ಲಿ Budget at a glance ಎನ್ನುವ ಸ್ಟೇಟ್‌ಮೆಂಟು ನೋಡಿದರೆ ನಿಮಗೆ ಇದರ ಎಲ್ಲ ವಿವರಗಳೂ ಗೊತ್ತಾಗುತ್ತದೆ. ಇದ ರಲ್ಲಿ ಎಕ್ಸ್‌ಪೆಂಡಿಚರಿನಲ್ಲಿ ಸೋಷಿಯಲ್ ಅಂಡ್ ಡೆವಲಪ್ ಮೆಂಟ್ ಎಕ್ಸ್‌ಪೆಂಡಿಚರಿನ ಐಟಂಗಾಗಿ 165 ಕೋಟಿ ರೂಪಾಯಿ ಇದರ ಜೊತೆಗೆ ಡ್ರಾಟ್ ರಿಲೀಫ್ ಗಾಗಿ ಮೂರು ಕೋಟಿ ರೂಪಾಯಿ ಮತ್ತು ಇತರ ಖರ್ಚುಗಳಿಗಾಗಿ ಎಂದು 62 ಕೋಟಿ ರೂಪಾಯಿ ಖರ್ಚು ತೋರಿಸಲಾಗಿದೆ. ಎಂದರೆ ಒಟ್ಟು ಇದು 230 ಕೋಟಿ ರೂಪಾಯಿಯವರೆಗೆ ಬರುತ್ತದೆ, ಇದು 1971-72ರಲ್ಲಿ ಖರ್ಚಾಗಿರುವುದು. 1972-73ರಲ್ಲಿ ಇದೇ ಸೋಷಿಯಲ್ ಅಂಡ್ ಡೆವಲಪ್‌ಮೆಂಟ್ ಖರ್ಚಿಗಾಗಿ 194 ಕೋಟಿ ರೂಪಾಯಿ ಡ್ರಾಟ್‌ಗಾಗಿ 25 ಕೋಟಿ ರೂಪಾಯಿ ಇತರ ಖರ್ಚು 71 ಕೋಟಿ ರೂಪಾಯಿ ಹೀಗೆ ಮೂರು ಬಾಬುಗಳಿಗೆ ಒಟ್ಟು 291 ಕೋಟಿ ರೂಪಾಯಿ ಖರ್ಚು ಬರುತ್ತದೆ. 1973–74ರಲ್ಲಿ ಇವು ಮೂರು ಬಾಬುಗಳಿಗೂ 344 ಕೋಟಿ ರೂಪಾಯಿಯಷ್ಟು ಹೋಗುತ್ತದೆ. ಇದನ್ನು ನೋಡಿದರೆ 1971-72 ರಲ್ಲಿ 50–60 ಕೋಟಿ ರೂಪಾಯಿ ಡೆವಲಪ್‌ಮೆಂಟಿಗಾಗಿ ಜಾಸ್ತಿ ಖರ್ಚಾಗಿದೆ, 972–73ರಲ್ಲಿ 50 ಕೋಟಿ ರೂಪಾಯಿ ಜಾಸ್ತಿ ಖರ್ಚಾಗಿದೆ ಮತ್ತು ಇದು 1973–74 ರಲ್ಲಿ ಇದಕ್ಕಿಂತ ಹೆಚ್ಚು ಖರ್ಚಾಗಿರುವುದು ನಮಗೆ ಕಂಡುಬರುತ್ತದೆ, ಈ ದೃಷ್ಟಿಯಿಂದ tempo of development ವರ್ಷ ವರ್ಷಕ್ಕೂ ಸುಮಾರು 50 ಕೋಟಿ ರೂಪಾಯಿಯಷ್ಟು ಜಾಸ್ತಿಯಾಗುತ್ತಲೇ ಬರುತ್ತಿದೆ, ಕಡಿಮೆಯಾಗುತ್ತಿಲ್ಲ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳು ನಡೆಯುತ್ತಿವೆ. ಮತ್ತು ಇದಕ್ಕೆ ಯಾವ ಧಕ್ಕೆಯೂ ಆಗಿಲ್ಲ. ಹೀಗೆ ಇದನ್ನು ಇನ್ನೂ ಜಾಸ್ತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ ಮತ್ತು ನಮಗಿರುವ ಡೆಫಿಸಿ ಟ್‌ನ್ನು ಆದಷ್ಟು ಸರಿ ಮಾಡಿಕೊಳ್ಳುತ್ತೇವೆ, ಇದರ ಬಗ್ಗೆ ವಿವರವಾಗಿ ನನ್ನ ಬಜೆಟ್ಟು ಭಾಷಣ ದಲ್ಲಿ ವಿವರವಾಗಿ ಹೇಳಿದ್ದೇನೆ. ಇದರಲ್ಲಿ repayment ಬಗ್ಗೆ ಹಾಗೂ Postpone ಮಾಡುವು ದರ ಬಗ್ಗೆ ನಾವು ಕೇಂದ್ರದವರೊಡನೆ ಚರ್ಚೆ ಮಾಡಿದ್ದೇನೆ, ಅವರೂ ಕೂಡ ನಮ್ಮ ರಾಜ್ಯದಲ್ಲಿ ಕೈಗಾರಿಕೆಗಳನು ಡೆವಲಪ್ ಮಾಡಬೇಕೆಂದು ಹೇಳುತ್ತಿದ್ದಾರೆ, ಆದುದರಿಂದ ನಮ್ಮ ರಾಜ್ಯದ ಯಾವ ಕೈಗಾರಿಕೆಗಳಿಗೂ ಪೆಟ್ಟು ಬೀಳುವಂತಹ ಕಾರ್ಯಕ್ರಮಗಳನ್ನು ನಾವು ಮಾಡುತ್ತಿಲ್ಲ. ಮತ್ತು ಕ್ಷಾಮ ಪರಿಹಾರ ಕಾರ್ಯಕ್ರಮಗಳನ್ನು ಮಾಡುವಾಗ ಇದರ ಖರ್ಚನ್ನು ಪೂರ್ತಿಯಾಗಿ ಕೇಂದ್ರ ದವರು ಕೊಡಬೇಕೆಂದು ಅವರಲ್ಲಿ ಒತ್ತಾಯ ಮಾಡಿದ್ದೇವೆ. ಹೀಗೆ ವಾದ ಮಾಡಿರುವುದೂ ಶ್ರೀ ದೇವೇಗೌಡರಿಗೂ ತಿಳಿದಿದ್ದರೂ ಅವರು ಇಲ್ಲಿ ಹೇಳುವಾಗ ಪ್ರಾಮಾಣಿಕತೆಯಿಂದ ಯಾವುದನ್ನೂ ಮಾಡಿಲ್ಲ ಎಂದು ಹೇಳಿರುವುದನ್ನು ನೋಡಿ ವಿಷಾದವಾಗಿದೆ. ನಾವು ಪ್ರಾಮಾಣಿಕತೆಯಿಂದ ಮಾಡುತ್ತಿದ್ದರೂ ಇದರ ಬಗ್ಗೆ ಟೀಕೆ ಮಾಡುವಾಗ ಈ ರೀತಿ ಮಾಡುವುದು ಸರಿಯಲ್ಲ ಮತ್ತು ಈ ಸಭೆಯ ಎಲ್ಲ ಮಾನ್ಯ ಸದಸ್ಯರೂ ಇದನ್ನು ಒಪ್ಪುತ್ತಾರೆಂದು ನಮ್ಮ ಭಾವನೆ.

ಇನ್ನು ಪ್ಲಾನ್ ಔಟ್ ಲೇ ಇದರ ಬಗ್ಗೆ ಕೆಲವರು ಹೇಳುತ್ತಾ ಇದರ ಟೆಂಪೋ ಕಡಿಮೆಯಾಗಿದೆ ಎಂದರು. ನಮ್ಮ ರಾಜ್ಯದ ಪ್ಲಾನಿಗೆ ಎಷ್ಟು ಹಣ ಕೊಡಬೇಕೋ ಅಷ್ಟನ್ನೂ ಕೊಡುತ್ತಿಲ್ಲ ಎಂದು ಹೇಳಿದರು, ಇದರ ಬಗ್ಗೆ ನಾನು ನನ್ನ ಭಾಷಣದಲ್ಲೇ ಎಲ್ಲ ವಿವರಗಳನ್ನೂ ಹೇಳಿರುವುದರಿಂದ ಇದರ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡಲು ಇಲ್ಲಿ ಹೋಗಬಾರದು ಎಂದು ಇದ್ದೆ. ಆದರೆ ಇಲ್ಲಿ ಟೀಕೆ ಬಂದ ಮೇಲೆ ಉತ್ತರ ಕೊಡಬೇಕಾಗಿದೆ. ಮಾನ್ಯ ಸದಸ್ಯರು ಇದರ ಬಗ್ಗೆ ಹೇಳುವ ವಾದ ಸರಿಯಲ್ಲ. ನಾಲ್ಕನೇ ಯೋಜನೆಗೆ ಕೇಂದ್ರ ಸರಕಾರದಿಂದ 173 ಕೋಟಿ ರೂಪಾಯಿಯವರೆಗೆ ಪ್ಲಾನ್ ಅಸಿ ಸ್ಟೆನ್ಸ್ ಬಂದಿದೆ, ಇದರ ಜೊತೆಗೆ 60 ಕೋಟಿ ರೂಪಾಯಿಯಷ್ಟು ಸ್ಪೆಷಲ್ ಅಸಿಸ್ಟೆನ್ಸ್ ಬಂದಿದೆ. ಮತ್ತು ಕಾಳಿ ನದಿ ಯೋಜನೆಗಾಗಿ 38 ಕೋಟಿ ರೂಪಾಯಿಯವರೆಗೆ ಬಂದಿದೆ, ಇವು ಮೂರು ನಾನ್ ಪ್ಲಾನ್ ಎಕ್ಸ್‌ಪೆಂಡಿಚರಿಗಾಗಿ ಬಂದಿರುವುದು. ಒಟ್ಟು 270 ಕೋಟಿ ರೂಪಾಯಿಯವರೆಗೆ ಬರುತ್ತದೆ, ಇದರ ಸರಾಸರಿಯನ್ನು ವರ್ಕ್ ಔಟ್ ಮಾಡಿದರೆ ಪರ್ ಹೆಡ್ 92 ರೂಪಾಯಿಗಳಷ್ಟು ಆಗುತ್ತದೆ.

This is more than the National Average.

ಇದರಿಂದ ಪ್ಲಾನ್ ಅಸಿಸ್ಟೆನ್ಸ್ ಸರಿಯಾಗಿ ಬರಲಿಲ್ಲ ಎಂದು ಯಾರೂ ಅಸಮಾಧಾನ ಪಡಬೇಕಾಗಿಲ್ಲ. ಕಾಳೀ ನದಿ ಯೋಜನೆ ನಾನ್ ಪ್ಲಾನ್ ಎಕ್ಸ್‌ಪೆಂಡಿಚರು, ಇದಕ್ಕೆ ಒಂದು ರೀತಿಯಾದ ಹಿಸ್ಟಾರಿಕಲ್ ಬ್ಯಾಂಕ್‌ಗ್ರೌಂಡು ಇದೆ. ಇದರ ಹಿಂದೆ ಐತಿಹಾಸಿಕವಾದ ಅನೇಕ ವಿಚಾರಗಳೂ ಇವೆ. ಇದಲ್ಲದೆ ಮೈಸೂರು ರಾಜ್ಯದಲ್ಲಿರುವ ನೌಕರರುಗಳಿಗೆ ಡಿ. ಎ. ಕೊಟ್ಟಿರುವುದರಿಂದ ಇದೂ ಕೂಡ ನಾನ್ ಪ್ಲಾನ್ ಎಕ್ಸ್‌ಪೆಂಡಿಚರು. ಹೀಗೆ ನನ್ನ ಭಾಷಣದಲ್ಲಿ ನಾನ್ ಪ್ಲಾನ್ ಗ್ಯಾಪ್‌ಗಳ ಬಗ್ಗೆ ಸಾಕಷ್ಟು ಯೋಚನೆ ಮಾಡಿದ್ದೇವೆ ಎನ್ನುವುದರ ಬಗೆಗೆ ಕೂಡ ಹೇಳಿದ್ದೇನೆ. ಸರಕಾರವೂ ಸಾಕಷ್ಟು ಪ್ರಯತ್ನ ಮಾಡಿ ಕೆಲಸ ಮಾಡುತ್ತಿದೆ ಎಂದು ಇಲ್ಲಿ ಸ್ಪಷ್ಟವಾಗಿ ಹೇಳುತ್ತೇನೆ. ನಾನ್ ಪ್ಲಾನ್ ಎಕ್ಸ್‌ಪೆಂಡಿಚರಿನಿಂದಾಗಿ ನಮ್ಮ ರಾಜ್ಯದ ಯೋಜನೆಗಳಿಗೆ ಯಾವ ವಿಧವಾದ ಧಕ್ಕೆಯೂ ಬಾರದಂತೆ ನೋಡಿಕೊಳ್ಳುತ್ತಿದ್ದೇವೆ. ಇದರ ಬಗ್ಗೆ ನಾವು ಸಮಾಧಾನಪಡಬೇಕಾಗಿದೆ. ಇನ್ನು ಆರನೇ ಫೈನಾನ್ಸ್ ಕಮಿಷನ್ ಬಗ್ಗೆ ಪದೇ ಪದೇ ಇಲ್ಲಿ ಇದಕ್ಕೆ ಒಂದು ರೀತಿಯಾದ ಕಾನ್‌ಸ್ಟಿಟ್ಯೂಷನ್ ಅಮೆಂಡುಮೆಂಟು ಮಾಡಬೇಕು ಎಂದು ಇಲ್ಲಿ ಹೇಳುತ್ತಿದ್ದಾರೆ. ಇನ್‌ಕಂಟ್ಯಾಕ್ಸ್ ಜಾಸ್ತಿ ಮಾಡಬೇಕು ಶೇಕಡಾ 75ರಷ್ಟು ಕೇಂದ್ರ ಕೊಡುತ್ತಿರುವುದನ್ನು ಶೇಕಡಾ 90ರ ವರೆಗೆ ಹೆಚ್ಚು ಮಾಡಬೇಕು ಎಂದು, ಎಕ್ಸೈಜು ಬಾಬಿನಲ್ಲಿ ಶೇಕಡಾ 20 ಕೊಡುವುದನ್ನು 40 ರವರೆಗೆ ಕೊಡಲು ಹೇಳಬೇಕು ಎಂದು ಹೇಳುವಾಗ ಇದಕ್ಕೆ ಕಾನ್‌ಸ್ಟಿಟ್ಯೂಷನ್ ಅಮೆಂಡುಮೆಂಟು ಮಾಡುವ ಅವಶ್ಯಕತೆ ಇಲ್ಲ. ಕಾರ್ಪೋರೇಷನ್ ಟ್ಯಾಕ್ಸ್ ಒಂದಕ್ಕೆ ಮಾತ್ರ ಕಾನ್‌ಸ್ಟಿಟ್ಯೂಷನ್ ಅಮೆಂಡುಮೆಂಡು ಮಾಡಬೇಕೇ ವಿನಾ ಇತರ ಯಾವ ಬಾಬುಗಳಿಗೂ ಮಾಡಲು ಬರುವುದಿಲ್ಲ. ಡಿವಿಜನಲ್ ಪೂಲ್‌ನಲ್ಲಿ ಇದನ್ನು ಸೇರಿಸಬೇಕು ಎಂದು ಹೇಳಬಹುದು, ಇದಕ್ಕಾಗಿ ಕಾನ್‌ಸ್ಟಿಟ್ಯೂ ಅಮೆಂಡ ಮೆಂಟುಗಳನ್ನು ಮಾಡಬೇಕೆಂದು ಹೇಳುವುದೊಳ್ಳೆಯದಲ್ಲ. ಜಾಸ್ತಿ ಕೊಡಬೇಕು ಎಂದು ಹೇಳುವ ಒಂದು ಪ್ರಶ್ನೆ ಇದೆ, ಇವನ್ನು ಯಾವ ರೀತಿ ಡಿವಿಜನಲ್ ಪೂಲಿನೊಳಗೆ ಹಂಚಬೇಕು ಎನ್ನುವುದು ಒಂದು ದೊಡ್ಡ ಪ್ರಶ್ನೆ. ಇದರಲ್ಲಿ ಎರಡು ಮುಖ್ಯ ವಿಚಾರಗಳಿವೆ. ಒಂದು ಡಿವಿಜನಲ್ ಪೂಲಿನಲ್ಲಿ ಹಂಚಿಕೆ ಮಾಡುವುದನ್ನು ಜಾಸ್ತಿ ಮಾಡಬೇಕು, ಇದನ್ನು ಮಾಡುವಾಗ ಎಲ್ಲ ರಾಜ್ಯಗಳ ಫೈನಾನ್ಸ್‌ಗಳ ಪರಿಮಿತಿ ಯಾವ ರೀತಿ ಹೋಗುತ್ತದೆ ಅದನ್ನು ತಿಳಿದುಕೊಳ್ಳಬೇಕಾಗುತ್ತದೆ, ಎಲ್ಲ ರಾಜ್ಯಗಳಲ್ಲೂ ಸರ್‌ಪ್ಲಸ್ ಬಡ್ಜೆಟು ಬರಬೇಕಾದರೆ ಫೈನಾನ್ಸ್ ಕಮಿಷನ್‌ನವರು ಸರಿಯಾದ ಅವಾರ್ಡನ್ನು ಕೊಟ್ಟರೆ ಅದರಿಂದ ಎಲ್ಲ ರಾಜ್ಯಕ್ಕೂ ಬೇಕಾದಷ್ಟು ದುಡ್ಡು ಬರುತ್ತದೆ ಮತ್ತು ಅದರಿಂದ ಹಣವೂ ಉಳಿಯುತ್ತದೆ. ನಮ್ಮ ರಾಜ್ಯದ ಬಗ್ಗೆ ಫೈನಾನ್ಸ್ ಕಮಿಷನ್ ಮುಂದೆ ಹೇಳುವಾಗ ರೀಪೇಮೆಂಟು ಯಾವ ರೀತಿ ಮಾಡಬೇಕು ಎನ್ನುವುದರ ಬಗ್ಗೆ ಕೂಡ ಹೇಳಲಾಗಿದೆ, ಇದನ್ನು ಸರಿಪಡಿಸಬೇಕು. ಪ್ರತಿಯೊಂದು ರಾಜ್ಯದಲ್ಲೂ ಓವರು ಡ್ರಾಫ್ಟ್‌ಗಳಿಲ್ಲದೆ ಸರ್‌ಪ್ಲಸ್ ಬರುವಂತೆ ಮಾಡಬೇಕಾದರೆ ಫೈನಾನ್ಸ್ ಕಮಿಷನ್‌ನವರು ಹೆಚ್ಚು ಸಹಾಯ ಮಾಡಬೇಕಾಗುತ್ತದೆ, ಆದರಂತೆ ಜಾಸ್ತಿ ಹಣ ಬಂದಾಗ ಯಾವ ರೀತಿ ಹಂಚಬೇಕು ಎನ್ನುವುದನ್ನು ಶಾಸ್ತ್ರೀಯವಾಗಿ ಹಾಗೂ ಸರಿಸಮವಾಗಿ ಹಂಚಿಕೆ ಮಾಡಿದರೆ ಆಗ ಸರ್‌ಪ್ಲಸ್ ಬರಲು ಅವಕಾಶವಾಗುತ್ತದೆ. ಆ ರೀತಿ ಹೆಚ್ಚು ಮಾಡಲು ಪ್ರಯತ್ನ ಮಾಡುತ್ತಿದ್ದೇವೆ. ಇದಿಲ್ಲದಿದ್ದರೆ ಇನ್ ಈಕ್ವಾಲಟಿ ಜಾಸ್ತಿಯಾಗುತ್ತದೆ, ಇದಕ್ಕೋಸ್ಕರ ಕಾನ್‌ಸ್ಟಿಟ್ಯೂಷನ್ ಅಮೆಂಡ್‌ಮೆಂಟ ಮಾಡಬೇಕು ಎಂದು ಹೇಳುವುದು ಸರಿಯಲ್ಲ. ಇದರ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡು ಫೈನಾನ್ಸ್ ಕಮಿಷನ್ ಮುಂದೆ ಅವರೂ ಇದರ ಕಡೆಗೆ ಗಮನಕೊಡಬೇಕೆಂದು ಹೇಳಿದ್ದೇವೆ ಎಂದು ಇಷ್ಟು ಮಾತ್ರ ಈ ಸಂದರ್ಭದಲ್ಲಿ ಹೇಳುತ್ತೇನೆ. ಡಿಫಿಸಿಟ್ ಇಲ್ಲದಂತೆ ಜಾಸ್ತಿ ಮಾಡುವುದರ ಬಗ್ಗೆ ಯೋಜನೆ ಮಾಡುವಾಗ ಇವೆಲ್ಲವನ್ನೂ ಪೂರ್ಣವಾಗಿ ಯೋಚನೆ ಮಾಡಿ ನಮ್ಮ ರಾಜ್ಯಕ್ಕೆ 275 ಕೋಟಿ ರೂಪಾಯಿಯಷ್ಟು ಉಪಯೋಗ ಮಾಡಬೇಕೆಂದು ಹೇಳಿದ್ದಾರೆ, ಇದರಲ್ಲಿ ನಮ್ಮ ಕೇಸು ಏನಿದೆ ಅದನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಬೇಕು, ಇದು ಅವಶ್ಯ, ಇನ್ನು ಇದರ ಬಗ್ಗೆ ಹೆಚ್ಚು ಹೇಳಬೇಕಾದ ಅವಶ್ಯಕತೆಯಿಲ್ಲ ಎಂದು ಹೇಳುತ್ತೇನೆ.

ಇನ್ನು ಬೆಲೆ ಏರಿಕೆ ಬಗ್ಗೆ ಅನೇಕ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ದಿನೇ ದಿನೇ ಬೆಲೆಗಳು ಹೆಚ್ಚುತ್ತಿದ್ದರೆ ಇದು ಒಳ್ಳೆಯದೆಂದು ಯಾರೂ ಅನ್ನುವುದಕ್ಕೆ ಸಾಧ್ಯವಿಲ್ಲ. ಇದು ಒಂದು ಘೋರವಾದ ಪರಿಸ್ಥಿತಿ ಇದೆ. ಆಹಾರಧಾನ್ಯಗಳ ಬೆಲೆಗಳು ಹೆಚ್ಚುತ್ತಿರುವುದಕ್ಕೆ ಕಾರಣ, ಇಂಡಿಯಾ-ಪಾಕಿಸ್ತಾನದ ಯುದ್ಧವಾಗಿದ್ದು, ಬಾಂಗ್ಲಾದೇಶದಿಂದ ನಿರಾಶ್ರಿತರು ನಮ್ಮ ದೇಶಕ್ಕೆ ಬಂದಿದ್ದು, ಇಂದು ದೇಶದಲ್ಲಿರುವ ಮತ್ತು ರಾಜ್ಯದಲ್ಲಿರುವ ಬರಗಾಲ ಪ್ರದೇಶಗಳ ಜನರಿಗೆ ಆಹಾರ ಹಂಚಬೇಕಾಗಿರುವುದು, ಬೆಳೆ ಸರಿಯಾಗಿ ಆಗದಿರುವುದು, ಇದೆಲ್ಲಾ ಕಾರಣ. ರಾಜ್ಯಸರ್ಕಾರ ಮಾಡಿರ್ ತಕ್ಕಂಥ ಪರಿಸ್ಥಿತಿಯಿಂದ ಬೆಲೆಗಳು ಹೆಚ್ಚಿಲ್ಲ. ಇಡೀ ದೇಶದಲ್ಲಿ ಸಮಗ್ರವಾದ ಆರ್ಥಿಕ ಪರಿಸ್ಥಿತಿ

(ಶ್ರೀ ಎಂ. ವೈ. ಘೋರ್ಪಡೆ)

increased the rate takiog into account that if a man also has agricultural income they have increased the incometax rate. So the Central Government will get a little more from incometax as a result of partial integration. As it is, the bulk of it is given to the States. ಆದ್ದರಿಂದ ಈ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ. ಬಜೆಟ್ಟಿನಲ್ಲಿ ವಾದ ಮಾಡುವುದಕ್ಕೆ ಸಾಕಷ್ಟು ಆಸ್ಪದ ಇರಬೇಕು ಮುಚ್ಚು ಮರೆ ಇಲ್ಲದೆ ಎಲ್ಲವನ್ನು ಹೇಳಿದ್ದೇವೆ. ಮುಚ್ಚು ಮರೆ ಮಾಡತಕ್ಕ ಯಾವ ಕೆಲಸವೂ ನಡೆದಿಲ್ಲ. ಸ್ಪಷ್ಟವಾಗಿ ಸರಳವಾಗಿ ಬಜೆಟ್ಟನ್ನು ಮಂಡಿಸಿದ್ದೇನೆ. ಯಾವ ಕನ್‌ಸೀಲ್ ಮಾಡುವ ಪ್ರಶ್ನೆ ಇಲ್ಲ ಆ ಕಾಲ ಕೂಡ ಇದು ಅಲ್ಲ. ನಾವು ಕೇಂದ್ರ ಸರ್ಕಾರದವರನ್ನು ಹೆಚ್ಚು ಕೇಳುವ ಕಾಲದಲ್ಲಿದ್ದೇವೆ.

ಸರ್ಕಾರಿ ನೌಕರರಿಗೆ ಡಿ. ಎ. ಅನ್ನು ನವಂಬರ್ ತಿಂಗಳಿನಲ್ಲೇ ಕೊಡಬಹುದಾಗಿತ್ತು ಎಂದು ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ. ಈ ವಾದದಲ್ಲಿ ಅರ್ಥ ಇಲ್ಲ. ಫೈನಾನ್ಸ್ ಕಮಿಷನ್ನಿನವರು ಹೇಳುವ ಪ್ರಕಾರ 1-1-1972ರ ನಂತರ 'ಏನು ಡಿ. ಎ. ಕೊಟ್ಟಿದ್ದೀರಿ ಅದನ್ನು ಗಮನದಲ್ಲಿ ಇಟ್ಟುಕೊಳ್ಳುವುದಿಲ್ಲ ಎಂದು ಹೇಳಿದ್ದಾರೆ. ನಾವು ನವಂಬರ್ ತಿಂಗಳಿನಿಂದ ಕೊಟ್ಟಿದ್ದರೂ ಅಷ್ಟೆ ಆಗುತ್ತಿತ್ತು. ಆದ್ದರಿಂದ ನಂವಬರ್ ತಿಂಗಳಿನಿಂದ ಡಿ.ಎ. ಕೊಟ್ಟಿದ್ದರೂ ಅನುಕೂಲವಾಗುತ್ತಿರಲಿಲ್ಲ. ಫೈನಾನ್ಸ್ ಕಮಿಷನ್ನಿನವರ ಹೇಳಿಕೆ ಪ್ರಕಾರ 1-1-1972ರಲ್ಲಿ ಡಿ. ಎ. ಕೊಟ್ಟಿದ್ದರೂ ಅದನ್ನು ಗಮನಕ್ಕೆ ತೆಗೆದುಕೊಳ್ಳುವುದಿಲ್ಲ ಎಂದು ಅವರು ಹೇಳಿದ್ದಾರೆ. ಅವರು ಆ ರೀತಿ ಡೆಡ್ ಲೈನ್ ಹಾಕಿದ್ದು ಸರಿಯಲ್ಲ.

ಸ್ಪೆಷಲ್ ಎಂಪ್ಲಾಯ್‌ಮೆಂಟ್ ಬಗ್ಗೆ ಒಂದು ಮಾತು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಕೇಂದ್ರ ಸರ್ಕಾರದವರು ಸ್ಪೆಷಲ್ ಎಂಪ್ಲಾಯ್‌ಮೆಂಟ್‌ಗೋಸ್ಕರ 10 ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ಹಾಕಿಕೊಂಡಿದ್ದಾರೆ. ಅದರಲ್ಲಿ ನಮಗೆ 6-7 ಕೋಟಿ ರೂಪಾಯಿಗಳು ಬರಬಹುದು. ಆದಕಾರಣ ನಾವು ಆ ಬಗ್ಗೆ 7ಕೋಟಿ 60ಲಕ್ಷ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಹೋದ ವರ್ಷ 1 ಕೋಟಿ 43ಲಕ್ಷ ರೂಪಾಯಿಗಳ ಸ್ಪೆಷಲ್ ಎಂಪ್ಲಾಯ್‌ಮೆಂಟ್ ಪ್ರೋಗ್ರಾಮ್ ಹಾಕಿಕೊಂಡಿದ್ದೆವು ಇದನ್ನು ಮುಂದುವರಿಸಿ ಈ ವರ್ಷಕ್ಕೆ 3 ಕೋಟಿ 37 ಲಕ್ಷ ರೂಪಾಯಿಗಳ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಈ 6-7ಕೋಟಿ ರೂಪಾಯಿಗಳನ್ನು ಸೇರಿಸಿ 10-98 ಕೋಟಿ ರೂಪಾಯಿಗಳ ಒಂದು ಸ್ಪೆಷಲ್ ಎಂಪ್ಲಾಯ್‌ಮೆಂಟ್ ಪ್ರೋಗ್ರಾಮ್ ಮಾಡಿ ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ರೆಗ್ಯುಲರ್ ಎಂಪ್ಲಾಯ್‌ಮೆಂಟ್ 2½ ಸಾವಿರ ಜನಗಳಿಗೆ, ಕ್ಯಾಷ್ ಎಂಪ್ಲಾಯ್‌ಮೆಂಟ್ 16 ಸಾವಿರ ಜನಗಳ ಹಾಗೂ 40 ಸಾವಿರ ಜನಗಳಿಗೆ ಕೊಡುವುದು ಈ ರೀತಿ ಒಂದು ಪ್ರೋಗ್ರಾಮ್ ಇದೆ.

Programme designed to cover among others are the following.—Assistance to techical person to set up their own indnstrial units; assistance in the from of seed, money on hire prchase system setting up agro-based service industries, survey of forests, minerals ground water survey, etc., ಈ ರೀತಿ ಎಂಪ್ಲಾಯ್‌ಮೆಂಟ್ ಕೊಡುವ ದೃಷ್ಟಿಯಿಂದ ಮಾಡಿದ್ದಾರೆ. ಈ ರೀತಿಯಾದಂತಹ 10ಕೋಟಿ ರೂಪಾಯಿಗಳ ಒಂದು ಕಾರ್ಯಕ್ರಮ ನಮ್ಮ ಮುಂದೆ ಇದೆ;

ಸೋಷಿಯಲ್ ವೆಲ್‌ಫೇರಿಗೆ ಜಾಸ್ತಿ ಹಣವನ್ನು ಕೊಡಬೇಕೆಂದು ಹೇಳಿದ್ದಾರೆ. ಹೌಸಿಂಗ್ ಕಾರ್ಯಕ್ರಮ ಮತ್ತು ಸೋಷಿಯಲ್ ಕಾರ್ಯಕ್ರಮಕ್ಕೋಸ್ಕರ 5 ಕೋಟಿ ರೂಪಾಯಿಗಳ ಒಂದು ದೊಡ್ಡ ಕಾರ್ಯಕ್ರಮ ಇದೆ. ಅದು ಮಾನ್ಯ ಮುಖ್ಯ ಮಂತ್ರಿಗಳ ನೇತೃತ್ವದಲ್ಲಿ ಕಾರ್ಯಕ್ರಮ ಮುಂದುವರಿಯುತ್ತದೆ. ಅವರಿಗೂ ಇದರಲ್ಲಿ ಹೆಚ್ಚಿನ ಆಸಕ್ತಿ ಇದೆ. ಅವರು ಈ ಬಗ್ಗೆ ಎಷ್ಟೋ ವಿಚಾರಗಳನ್ನು ಹೇಳುತ್ತಿದ್ದಾರೆ. ನಮ್ಮಲ್ಲಿರತಕ್ಕ ಲೋಕಲ್ ಮೆಟೀರಿಯಲ್ಸ್ ಉಪಯೋಗ ಮಾಡಿಕೊಂಡು ಮನೆಗಳನ್ನು ಕಟ್ಟುವಂಥದ್ದು ಆಗಬೇಕು, ಆ ಕೆಲಸ ಬಹಳ ವೇಗವಾಗಿ ಹೋಗಬೇಕು ಎಂದು ಅವರ ನೇತೃತ್ವದಲ್ಲಿ ಈ ಕೆಲಸಗಳು ನಡೆಯುತ್ತಿವೆ. ಮೈಸೂರು ರಾಜ್ಯದಲ್ಲಿ ಈ ಕಾರ್ಯಕ್ರಮಗಳು ಬಹಳ ಯಶಸ್ವಿಯಾಗಿ ನಡೆಯುತ್ತಿವೆ. ಆದ್ದರಿಂದ ನಾನು ಇದರ ಬಗ್ಗೆ ಹೆಚ್ಚು ಹೇಳಬೇಕಾದ್ದು ಇಲ್ಲ. ಶ್ರೀಮಾನ್ ಕೃಷ್ಣಪ್ಪನವರು ಕೆಲಸವನ್ನು ಕೂಡಿ ಮನೆ ಬೇಡಿ ಎಂದು ಹೇಳಿ

ದ್ದಾರೆ. ಕೆಲಸವನ್ನೂ ಕೊಡಬೇಕು. ಮನೆಗಳನ್ನ ಕಟ್ಟಬೇಕು ದೇಶದ ಪರಿಸ್ಥಿತಿಯನ್ನು ಸುಧಾರಣೆಮಾಡಬೇಕು. ಈಗ 20 ವರ್ಷಗಳಿಂದ ಕೆಲವು ಜನಗಳು ಮನೆ ಇಲ್ಲದೇ ಇದ್ದಾರೆ. ಇವೊತ್ತಿನ ದಿವಸ ಈ ಒಂದುಹೊಸ ಪರಿಸ್ಥಿತಿಯಲ್ಲಿ ಪ್ರಜಾಪ್ರಭುತ್ವದ ಶಕ್ತಿಯು ಅದು ನಮ್ಮದೇಶದಲ್ಲಿ ಕೆಲಸ ಮಾಡುತ್ತಿದೆ. ಈ ಒಂದು ಪರಿಸ್ಥಿತಿಯಲ್ಲಿ ನಮಗೆ ಎಷ್ಟು ಸಾಧ್ಯವೋ ಅಷ್ಟು ಮಾಡಬೇಕಾಗುತ್ತದೆ.

ಜನರು ದಡ್ಡರೇನೂ ಅಲ್ಲ. ಪ್ರತಿಯೊಬ್ಬರೂ ಸರ್ಕಾರ ದೊಡ್ಡ ಮನೆ ಕಟ್ಟಿಸಿಕೊಡುತ್ತದೆ ಎಂದು ತಿಳಿದುಕೊಳ್ಳುವುದಿಲ್ಲ. ಇದರ ಬಗ್ಗೆ ಹಳೆಯ ಕಾರ್ಯಕ್ರಮ ರಿಯಾಲಿಸ್ಟಿಕ್ ಆಗಿರಲಿಲ್ಲ. ಅದನ್ನು ರೀಪೇಮೆಂಟ್ ಕೆಪೇಸಿಟಿ ನೋಡದೆ ಮಾಡಿದ್ದಾರೆ. ಹಾಗೆ ನಾವು ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಇದರ ಬಗ್ಗೆ ಡಿಟೈಲ್ಸ್ ವಿಚಾರ ನನ್ನ ಬಜೆಟ್ ಭಾಷಣದಲ್ಲಿ ಎಷ್ಟು ಬೇಕೋ ಅಷ್ಟು ಹೇಳಿದ್ದೇನೆ. ಇದರ ಬಗ್ಗೆ ನಾವು ಒಂದು ರಿಯಲಿಸ್ಟಿಕ್ ಕಾರ್ಯಕ್ರಮವನ್ನು ಹಾಕಿಕೊಂಡು ಮುಂದುವರಿಯಬೇಕಾಗಿದೆ.

ಇನ್ನು ಕನ್ನಡ ಸಾಹಿತ್ಯ ಪರಿಷತ್ತಿಗೆ ಗ್ರಾಂಟ್ ಕಡಿಮೆ ಮಾಡಿದ್ದಾರೆ ಎಂದು ಹೇಳಿದ್ದಾರೆ. ಬಹುಶಃ ಅವರು ಪ್ಲಾನ್ ಗ್ರಾಂಟ್ 50ಸಾವಿರ ರೂಪಾಯಿ ಇದ್ದದನ್ನು ನೋಡಿಕೊಂಡು ಆ ಮಾತು ಹೇಳಿದ್ದಾರೆಂದು ಕಾಣುತ್ತದೆ. ಆ ಮೇಲೆ ನಾನ್ ಪ್ಲಾನ್ ಬಜೆಟ್ ಅಂಡರ್ 28 ಎಜುಕೇಶನ್‌ನಲ್ಲಿ 4 ಲಕ್ಷ 50ಸಾವಿರ ರೂಪಾಯಿ ಒದಗಿಸಿದೆ. ಅದರಲ್ಲಿ ಒಂದು ಲಕ್ಷ ರೂಪಾಯಿ ಕನ್ನಡ ಸಾಹಿತ್ಯ ಪರಿಷತ್ತಿಗೆ ಇದೆ. ಅದಲ್ಲದೆ 15ಲಕ್ಷ ರೂಪಾಯಿಗಳ ಕನ್ನಡ ಡೆವಲಪ್‌ಮೆಂಟ್ ಕಾರ್ಯಕ್ರಮ ಬೇರೆ ಇದೆ. ಅದು ಸಹ ಕನ್ನಡ ಸಾಹಿತ್ಯ ಪರಿಷತ್ತಿಗೆ ಸಂಬಂಧಪಟ್ಟದು ಎಂದು ಹೇಳಿದರೆ ತಪ್ಪಾಗಲಾರದು. ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಇದಕ್ಕೆ 1[illegible] ಲಕ್ಷ ರೂಪಾಯಿ ಮಾತ್ರ ಖರ್ಚಾಗಿದೆ. ಈಗ 5ನೇ ಪಂಚವಾರ್ಷಿಕ ಯೋಜನೆಯಲ್ಲಿ 50ಲಕ್ಷ ರೂಪಾಯಿನ ಕಾರ್ಯಕ್ರಮ ಹಾಕಿಕೊಂಡಿದ್ದಾರೆ ಆದ್ದರಿಂದ ಕನ್ನಡ ಬೆಳವಣಿಗೋಸ್ಕರ ಹಣದ ಅಭಾವ ಏನೂ ಇಲ್ಲ. ಆದರೆ ಸರಿಯಾದ ಕಾರ್ಯಕ್ರಮವನ್ನು ಹಾಕಿಕೊಂಡು ಮುಂದುವರಿಯಬೇಕಾಗುತ್ತದೆ. ಆದ್ದರಿಂದ ಕನ್ನಡವನ್ನು ಬೆಳೆಸುವುದಕ್ಕೋಸ್ಕರ ಏನು ಕಾರ್ಯಕ್ರಮವನ್ನು ಹಾಕುವುದಕ್ಕೂ ಸಾಧ್ಯ ಮತ್ತು ಅದಕ್ಕೆ ಸರ್ಕಾರ ಸಂಪೂರ್ಣವಾದ ಸಹಕಾರವನ್ನು ಕೊಡುತ್ತಾರೆ. ಈ ರೀತಿ ಇರುವಾಗ ಮಾನ್ಯ ಸದಸ್ಯರು 50ಸಾವಿರ ರೂಪಾಯಿ ಕೊಟ್ಟಿದ್ದಾರೆಂದು ಹೇಳುವುದು ಸರಿಯಲ್ಲ. ಇದನ್ನು ನೋಡಿಕೊಂಡು ನಮ್ಮ ಉರ್ದು ಭಾಷೆಯ ಸದಸ್ಯರು ಸಹ ನಮಗೆ ಏನೂ ಕೊಟ್ಟಿಲ್ಲವೆಂದು ಹೇಳಿದರು. ನೀವು ಸಹ ಅದರ ಬಗ್ಗೆ ಪ್ರೋಗ್ರಾಂ ಹಾಕಿಕೊಳ್ಳಿ ಕೊಡೋಣ ಎಂದು ಹೇಳಿದ್ದೇನೆ. ಏಕೆಂದರೆ ನಮಗೆ ಭಾಷೆಗಳು ಬೇಕು. ಮೈನಾರಿಟಿ ಭಾಷೆಗಳು ಸಹ ಬೆಳೆಯಬೇಕು.

ಶ್ರೀ ಟಿ. ಎಂ. ಮಂಜುನಾಥ.—ಉರ್ದು ಪಾಠ ಶಾಲೆಗಳಿಗೆ ಕಟ್ಟಡಗಳು ಸಹ ಇಲ್ಲ; ಎಜ್ಯುಕೇಷನ್ ಡಿಪಾರ್ಟ್‌ಮೆಂಟಿನಿಂದ ಮೂರು ಸಾವಿರ ರೂಪಾಯಿ ಮಾತ್ರ ಕೊಡುತ್ತಿದ್ದಾರೆ. ಅದು ಎಲ್ಲಿಗೂ ಸಾಲುವುದಿಲ್ಲ.

ಶ್ರೀ ಎಂ. ವೈ. ಘೋರ್ಪಡೆ.—ಉರ್ದು ಬಗ್ಗೆ ಸ್ಕೀಮುಗಳನ್ನು ಮಾಡಿ ನನ್ನ ಹತ್ತಿರ ತೆಗೆದುಕೊಂಡು ಬನ್ನಿ, ನಾನು ಸ್ಯಾಂಕ್ಷನ್ ಮಾಡುತ್ತೇನೆ.

ಆ ಮೇಲೆ ಸಿಂಗಲ್ ಪಾಯಿಂಟ್ ಬಗ್ಗೆ ಬಹಳ ಟೀಕೆ. ಮಾನ್ಯ ಶಾಮಣ್ಣನವರು ಮಾಡಿದ್ದಾರೆ. ಅವರು ಸಹ ಸೇಲ್ಸ್ ಟ್ಯಾಕ್ಸ್ ಆಡ್‌ವೈಸರಿ ಕಮಿಟಿಯಲ್ಲಿ ಇದ್ದಾರೆ. ಮಲ್ಟಿ ಪಾಯಿಂಟಿನಿಂದ ಜನರಿಗೆ ತೊಂದರೆಯಾಗುತ್ತದೆ. ಇದರ ಪ್ರಕಾರ 15 ಐಟಮುಗಳಿಗೆ ಸಿಂಗಲ್ ಪಾಯಿಂಟ್ ಹಾಕಿದರೆ ತಾವು ಸ್ವಾಗತ ಮಾಡುತ್ತೀರೆಂದು ತಿಳಿದುಕೊಂಡಿದ್ದೇನೆ. ಆ ಮೇಲೆ ಶಾಮಣ್ಣನವರು ಎಜ್ಯುಕೇಶನಿಗೆ ಸಾಕಷ್ಟು ಪ್ರೊವಿಜನ್ ಮಾಡಿದ್ದಾರೆಂದು ಹೇಳಿದರು. ಅವರಿಂದ ಒಂದು ಒಳ್ಳೆಯ ಮಾತು ಬಂದದ್ದಕ್ಕೆ ನಾನು ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಸಿಗಡಿ ಮೀನಿಗೆ ಟ್ಯಾಕ್ಸ್ ಹಾಕಿದ್ದೀರಲ್ಲ.

ಶ್ರೀ ಎಂ. ವೈ. ಘೋರ್ಪಡೆ.—ಇದು ಕ್ಯಾನಿಂಗ್ ಇಂಡಸ್ಟ್ರಿಯವರ ಮೇಲೆ ಬೀಳುತ್ತದೆ. ಲಾಸ್ಟ್ ಪರ್ಚೇಸ್ ಮೇಲೆ ಈ ಟ್ಯಾಕ್ಸ್ ಬೀಳುತ್ತದೆ. ಇವರು ಮೂರು ಪರ್‌ಸೆಂಟ್ ಕೊಡುತ್ತಿದ್ದರು. ಧರ್ಮವೀರರ ಕಾಲಕ್ಕೆ ಅದನ್ನು ಒಂದೂವರೆ ಪರ್‌ಸೆಂಟಿಗೆ ಇಳಿಸಿದರು. ಈಗ 3 ಮಲ್ಟಿ ಪಾಯಿಂಟ್ ಇದ್ದುದನ್ನು 4 ಸಿಂಗಲ್ ಪಾಯಿಂಟ್ ಮಾಡಿದ್ದೇವೆ. ಹೀಗೆ ಮಾಡಿದರೆ ಟ್ಯಾಕ್ಸ್ ಜಾಸ್ತಿ ಮಾಡಿದ ಹಾಗೆ ಆಗುವುದಿಲ್ಲ. ಒಟ್ಟಿನಲ್ಲಿ ಕ್ಯಾನಿಂಗ್ ಇಂಡಸ್ಟ್ರಿಯವರು ಇದನ್ನು ಕೊಡಬೇಕಾಗುತ್ತದೆ.

(ಶ್ರೀ ಎಂ. ವೈ. ಘೋರ್ಪಡೆ)

ಏನಿದೆ ಅದರ ಒಂದು ಕಾರಣದಿಂದ ಈ ಪರಿಸ್ಥಿತಿ ಉಂಟಾಗುತ್ತಿದೆ. ಇದನ್ನು ರಾಜ್ಯಸರ್ಕಾರವೇ. ನೇರವಾಗಿ ಮಾಡಿರತಕ್ಕದ್ದಲ್ಲ. ಈ ಒಂದು ಅಪಾಯಕಾರಿ ಬೆಳವಣಿಗೆ ಏನಿವೆ, ಅದನ್ನು ಕಡಿಮೆ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬಹುದು ಎಂಬ ಬಗ್ಗೆ ಬೇಕಾದರೆ ರಾಜ್ಯಸರ್ಕಾರದ ಮಟ್ಟದಲ್ಲಿ ಚರ್ಚೆ ಮಾಡಬಹುದು. ಎಸೆನ್ಶಿಯಲ್ ಕಮಾಡಿಟೀಸ್ ಮೇಲೆ ಸರ್ಕಾರದ ಹತೋಟಿ ಏನಿವೆ ಅದನ್ನು ಹೆಚ್ಚಿಸಬೇಕು ಎನ್ನುವ ವಿಚಾರವನ್ನು ನಾನು ನನ್ನ ಬಜೆಟ್ ಭಾಷಣದಲ್ಲಿ ಸ್ಪಷ್ಟವಾಗಿ ಹೇಳಿದ್ದೇನೆ. ಅತ್ಯವಶ್ಯ ವಸ್ತುಗಳನ್ನು ಈಗ ಸರ್ಕಾರದವರು ಏನು ಹಂಚಿಕೆ ಮಾಡುತ್ತಿದ್ದಾರೆ ಅದರ ಒಂದು ಪ್ರಮಾಣವನ್ನು ಕೇಂದ್ರ ಸರ್ಕಾರದವರು ಹೆಚ್ಚು ಮಾಡಿದರೆ ಬಡವರಿಗೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಹಂಚುವುದಕ್ಕೆ ಸಾಧ್ಯವಾಗುತ್ತದೆ. ಮೈಸೂರು ರಾಜ್ಯದಲ್ಲಿ ಈಗ ಕೆಲವು ಭಾಗಗಳಲ್ಲಿ ಬರಗಾಲ ಇದೆ. ಅದು ಇಲ್ಲದಿದ್ದರೂ ಸಹ ವರ್ಷದ 3-4 ತಿಂಗಳಲ್ಲಿ ಸಾಮಾನ್ಯ ಜನರು ಆಹಾರವಸ್ತುಗಳನ್ನು ಕೊಳ್ಳುವುದು ಕಷ್ಟವಾಗುತ್ತದೆ. ಬಿಲೋ ಪಾವರ್ಟಿ ಜನರಿಗೆ ಕೊಳ್ಳುವುದು ಕಷ್ಟವಾಗುತ್ತದೆ. ಕೇವಲ ನಾವು ವರ್ತಕರನ್ನು ಅಪೀಲ್ ಮಾಡಿಕೊಂಡರೆ ಬೆಲೆಗಳು ಕಡಿಮೆಯಾಗುವುದಿಲ್ಲ. ಫ್ರೀ ಕಾಂಪಿಟಿಷನಲ್ಲಿ ವರ್ತಕರನ್ನು ಬೈಯುವುದರಲ್ಲಿ ಅರ್ಥವಿರುವುದಿಲ್ಲ. ಸಾಕಷ್ಟು ಪ್ರಮಾಣದಲ್ಲಿ ನ್ಯಾಯಬೆಲೆ ಅಂಗಡಿಗಳ ಮೂಲಕ ಆಹಾರವಸ್ತುಗಳನ್ನು ಹಂಚುವುದಕ್ಕೆ ಸರ್ಕಾರಕ್ಕೆ ಮೊದಲು ಶಕ್ತಿ ಇರಬೇಕಾಗುತ್ತದೆ. ಇದನ್ನು ಹೋಲ್‌ಸೇಲ್ ಟ್ರೇಡ್ ಎಂದು ಬೇಕಾದರೆ ಕರೆಯಿರಿ. ಒಟ್ಟಿನಲ್ಲಿ ಹೇಳಬೇಕಾದರೆ State control over essential commodities and enlarging the distribution system of essential commodities ಇದನ್ನು ಜಾಸ್ತಿ ಮಾಡಬೇಕಾಗುತ್ತದೆ. ಇದರ ಬಗ್ಗೆ ವಾದ ಮಾಡಬೇಕಾದ ಅಗತ್ಯವಿಲ್ಲ. ಈ ವಿಚಾರದಲ್ಲಿ ರಾಜಕೀಯ ವಾದಕ್ಕೆ ಆಸ್ಪದವಿಲ್ಲವೆಂದು ನನ್ನ ಭಾಷಣದಲ್ಲಿ ಸ್ಪಷ್ಟವಾಗಿ ಹೇಳಿದ್ದೇನೆ. Pubiic distribution of essential commodities must be increase l. ಇದು ಆದಾಗ ಬೆಲೆಗಳನ್ನು ಸ್ಥಿಮಿತದಲ್ಲಿಡುವುದಕ್ಕೆ ಸಾಧ್ಯವಾಗುತ್ತದೆ. ಇದನ್ನು ಯಾವ ರೀತಿಯಿಂದ ಮಾಡಬೇಕು, ಇದರ ವಿವರ ಏನಿವೆ ಎಂಬುದನ್ನೆಲ್ಲಾ ಸರ್ಕಾರ ಲೆಕ್ಕ ಹಾಕುತ್ತಿದೆ.

4·00 P. M.

ಇನ್ನು ಕೇಂದ್ರಸರ್ಕಾರದವರು ನೇಮಕ ಮಾಡಿರುವ ಪೇಕಮಿಷನ್ ವಿಚಾರವನ್ನು ಶ್ರೀ ದೇವೇಗೌಡರು ಹೇಳಿದರು. ಪೇಕಮಿಷನ್ ಅವರು ತಮ್ಮ ರಿಪೋರ್ಟ್ ಕೊಟ್ಟಮೇಲೆ ಏನಾಗುತ್ತದೆ ಎಂಬುದು ನಮಗೆ ಗೊತ್ತಿಲ್ಲ. ಈಗ ಡಿ.ಎ. ಕೊಟ್ಟಿದ್ದೇವೆ. ನಮಗೆ ಆರ್ಥಿಕ ಶಕ್ತಿ ಇತ್ತು; ಆದ್ದರಿಂದ ಕೊಟ್ಟಿದ್ದೇವೆ. ನಮ್ಮ ಶಕ್ತಿ ಮೀರಿ ಏನೂ ಕೊಟ್ಟಿಲ್ಲ. It is a question whether we could afford. Fortunately we could afford D·A. parity, ಪೇಕಮಿಷನ್ ಆದಮೇಲೆ ಏನಾಗುತ್ತದೆ ಎಂಬುದು ಗೊತ್ತಿಲ್ಲ. ಎಲ್ಲಾ ರಾಜ್ಯಸರ್ಕಾರಗಳೂ ಕೇಂದ್ರಕ್ಕೆ ಹೇಳುತ್ತಿರುವುದೇನೆಂದರೆ, ನೀವೇನಾದರು ಸಂಬಳ ಜಾಸ್ತಿ ಮಾಡಿದರೆ ಅದರಿಂದ ರಾಜ್ಯ ಮಟ್ಟದಲ್ಲಿ ಏನಾಗುತ್ತದೆಂಬುದನ್ನು ಗಮನದಲ್ಲಿಟ್ಟುಕೊಂಡು ಮಾಡಿ ಎಂಬುದಾಗಿ. ಮುಂದೆ ಬರುವ 5 ವರ್ಷಗಳಲ್ಲಿ ಏನೇನಾಗುತ್ತದೆಂದು ನಿರೀಕ್ಷೆ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಪೇಕಮಿಷನ್ ರಿಪೋರ್ಟನ್ನು ಜಾರಿಗೆ ಕೊಡುವಾಗ ನ್ಯಾಷನಲ್ ಪಾಲಿಸಿಯನ್ನು ಗಮನದಲ್ಲಿಟ್ಟುಕೊಂಡು ಮಾಡಬೇಕೆಂದು ಕೇಂದ್ರಕ್ಕೆ ತಿಳಿಸಿದ್ದೇವೆ. ಈ ವಿಚಾರದಲ್ಲಿ ರಾಜ್ಯಗಳಿಗೆ ಏನಾದರೂ ಹಣಕಾಸಿನ ತೊಂದರೆ ಬಂದರೆ ಅದನ್ನು ಒದಗಿಸುವುದಕ್ಕೂ ವ್ಯವಸ್ಥೆ ಮಾಡಬೇಕೆಂದು ಹೇಳಿದ್ದೇವೆ. ಆರನೇ ಆರ್ಥಿಕ ಆಯೋಗದ ಮುಂದೆ ಸಹ ಇದನ್ನೇ ಹೇಳಿದ್ದೇವೆ. ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಂಡು ಡಿ.ಎ. ವಿಚಾರದಲ್ಲಿಯಾದರೂ ಸಹ ಕೇಂದ್ರದ ಡಿ.ಎ. ಅನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಆದರೆ ಕೇಂದ್ರಸರ್ಕಾರದ ನೌಕರರಿಗೆ ಸಿಗುತ್ತಿರುವ ಸಂಬಳವನ್ನೂ ಸಹ ನಮ್ಮ ನೌಕರರಿಗೆ ಕೊಡಬೇಕೆಂದರೆ ಸಾಧ್ಯವಾಗುವುದಿಲ್ಲ. ಆದಷ್ಟು ಮಟ್ಟಿಗೆ ಡಿ.ಎ. ನಲ್ಲಿರುವ ವ್ಯತ್ಯಾಸವನ್ನು ಹೋಗಲಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇದರ ಬಗ್ಗೆ ರಾಜಕೀಯ ಮಾಡಬಾರದೆಂದು ನನ್ನ ಅಭಿಪ್ರಾಯ. ಬಂಗಾರುಪೇಟೆಯಲ್ಲಿ ನಡೆದ ಎನ್.ಜಿ.ಒ. ಕಾನ್‌ಫರೆನ್ಸನಲ್ಲಿ ರಾಜ್ಯದ ನೌಕರರಿಗೆ ಸ್ಪಷ್ಟವಾಗಿ ಹೇಳಿದ್ದೇನೆ: ನೀವು ನಮ್ಮನ್ನು ಹೊಗಳಿದರೂ ಮಾಡುತ್ತೇವೆ, ಟೀಕೆ ಮಾಡಿದರೂ ಮಾಡುತ್ತೇವೆ; ಆದರೆ ಮಾಡುವಾಗ ನಮ್ಮ ಆರ್ಥಿಕ ಪರಿಸ್ಥಿತಿ ನೋಡಿಕೊಂಡು ಎಷ್ಟು ಮಾಡುವುದಕ್ಕೆ ಸಾಧ್ಯವೋ ಅಷ್ಟನ್ನು ಮಾಡುತ್ತೇವೆಂದು

ಸ್ಪಷ್ಟವಾಗಿ ಹೇಳಿದ್ದೇನೆ. This is a matter of what is financially possible and not one of politics. ಈ ವಿಚಾರದಲ್ಲಿ ಯಾರಾದರೂ ಹೆದರಿಸಲಿಕ್ಕೆ ಬಂದರು ಎಂದುಕೊಂಡು ಬೇಜವಾಬ್ದಾರಿಯಿಂದ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನಮ್ಮ ಶಕ್ತಿ ಮೀರಿ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ ಇಂದು ನಮ್ಮ ರಾಜ್ಯದಲ್ಲಿ ಮೂರೂವರೆ ಲಕ್ಷ ಮಂದಿ ಸರ್ಕಾರೀ ನೌಕರರಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಇವರನ್ನು ಆಧುನಿಕ ಸೈನ್ಯ ಎಂದು ಕರೆಯಬಹುದು. ಇವರಿಗೆ ಸಂಬಳಸಾರಿಗೆಗಳನ್ನು ಸರಿಯಾಗಿ ಕೊಡಬೇಕಾಗುತ್ತದೆ. ಅದರಂತೆ ದಕ್ಷತೆಯಿಂದ ಕೆಲಸ ಮಾಡಬೇಕಾದುದು ಇವರ ಜವಾಬ್ದಾರಿ ಇದೆ.

ಕೇಂದ್ರಸರ್ಕಾರದ ಕೃಪಾಕಟಾಕ್ಷದಲ್ಲಿ ಈ ಸರ್ಕಾರ ಅವಲಂಬಿಸಿದೆ ಎಂದು ಕೆಲವರು ಹೇಳಿದರು. ಟ್ಯಾಕ್ಸ್, ಇನ್‌ಕಮ್-ಟ್ಯಾಕ್ಸ್, ಎಕ್ಸೈಜ್, ಕೇಂದ್ರದ ಸ್ವಾಧೀನದಲ್ಲಿರುವುದರಿಂದ ಅವರ ಕಡೆಯಿಂದ ಹೆಚ್ಚು ಹೆಚ್ಚು ಪ್ರಮಾಣದಲ್ಲಿ ರಾಜ್ಯಗಳಿಗೆ ಸಹಾಯ ಬರಬೇಕು. ಆ ರೀತಿ ಅವರಿಂದ ಬಂದಾಕ್ಷಣ ನಾವು ಅವರ ಕೃಪಾಕಟಾಕ್ಷದಲ್ಲಿದ್ದೇವೆಂದು ಹೇಳುವುದು ಸರಿಯಲ್ಲ. ನಾವು ಅವರಿಗೆ ಡಿಪೆಂಡಿಂಗ್ ಆಗಿದ್ದೇವೆಂದು ಹೇಳುವುದು ಸರಿಯಲ್ಲ. ನ್ಯಾಯವಾಗಿ ಅವರಿಂದ ನಮಗೆ ಬರುವುದು ಬರುತ್ತಿದೆ. ಅವರಿಂದ ನಾವು ಜೀವನ ಮಾಡುತ್ತಿದ್ದೇವೆಂದು ಹೇಳುವುದು ಸರಿಯಲ್ಲ. ಈಗ ಕೇಂದ್ರದ ಹಣ ವಿತರಣೆ ರಾಜ್ಯಗಳಿಗೆ ಯಾವ ರೀತಿ ಆಗುತ್ತಿದೆ ಅದು scientific and systematic ಆಗಿರಬೇಕೆಂದು ಆರ್ಥಿಕ ಆಯೋಗದ ಮುಂದೆ ಸಹ ಹೇಳಿದ್ದೇವೆ.

ಇನ್ನು ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಮತ್ತು ನಾನ್ ಆಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಬಗ್ಗೆ ಕೆಲವು ಮಾನ್ಯ ಸದಸ್ಯರು ಹೇಳಿದ್ದಾರೆ. ಇದು ರಾಜ್ಯಸರ್ಕಾರದ ಹಕ್ಕು ಬಾಧ್ಯತೆಗಳನ್ನು ಕಸಿದುಕೊಳ್ಳುವ ಒಂದು ಕ್ರಮವಾಗಿದೆ ಎಂದು ಹೇಳಿದರು. ಇದರ ಬಗ್ಗೆ ಎರಡು ಮಾತುಗಳನ್ನು ಹೇಳಬೇಕಾಗುತ್ತದೆ. Partial integration of incomes ಬಗ್ಗೆ ಕೆ. ಎನ್. ರಾಜ್ ಕಮಿಟಿಯವರು ಶಿಫಾರಸ್ ಮಾಡುವುದಕ್ಕೆ ಮೊದಲು ಲಾ ಕಮಿಷನ್ ಅಭಿಪ್ರಾಯ ಸಹ ತೆಗೆದುಕೊಂಡಿದ್ದಾರೆ.

The Law Commission's opinion on the subject which has been cited in the Raj Committee Report states :

> "That inclusion of the agricultural income within the scope of total income for the limited purpose of computing rate of tax is only a method of computation of tax and it does not amount to levying of tax on the income. The power of taxation on the non-agricultural income has to be increased for purposs of determining the rate of tax if it is found to be necessary for the efficient exercise of that power."

Therefore it does not amount to direct taxation on agricultural income but only changing the rate of agricultural income after taking into account the non-agricultural income. ಈಗ ನಗರಾಸ್ತಿಯ ಮೇಲೆ ಟ್ಯಾಕ್ಸ್ ಜಾಸ್ತಿ ಇದೆ, ನಾನ್-ಅಗ್ರಿಕಲ್ಚರಲ್ ಇನ್‌ಕಮ್ ಮೇಲೆ ಜಾಸ್ತಿ ಟ್ಯಾಕ್ಸ್ ಇದೆ, ಆದರೆ ಅಗ್ರಿಕಲ್ಚರಲ್ ಇನ್‌ಕಂ ಮೇಲೆ ಜಾಸ್ತಿ ಟ್ಯಾಕ್ಸ್ ಇಲ್ಲ ಎಂದು ಹೇಳುವವರೂ ಸಹ ಇದ್ದಾರೆ. ಈಗ ಲಾ ಕಮೀಷನ್ ಅವರು ಏನು ಅಭಿಪ್ರಾಯ ಕೊಟ್ಟಿದ್ದಾರೆ ಅದರ ಪ್ರಕಾರ ಏನೇ ಮಾಡಿದರೆ ಮತ್ತು ಇನ್‌ಕಮ್ ಟ್ಯಾಕ್ಸ್ ಜಾಸ್ತಿ ವಸೂಲಿ ಮಾಡಿದರೆ ಅದು ರಾಜ್ಯಸರ್ಕಾರಕ್ಕೆ ಬರುತ್ತದೆ. Raj Committee's recommendation is that this income should go to the States. ಆದಕಾರಣ ಅವರೇ ತೆಗೆದುಕೊಂಡು ಹೋಗುತ್ತಾರೆ ಎನ್ನುವಂಥಾದ್ದು ಇಲ್ಲ. ಇನ್‌ಕಂಟ್ಯಾಕ್ಸ್ 75 ಪರ್ಸೆಂಟ್ ಸ್ಟೇಟಿಗೆ ಬರುತ್ತದೆ. ಅದು 90 ಪರ್ಸೆಂಟ್ ಸೇರಬೇಕು ಎಂದು ನಾವು ಹೇಳಿದ್ದೇವೆ. ಆದ್ದರಿಂದ ಇನ್ ಕಂಟ್ಯಾಕ್ಸಿನಿಂದ ರಾಜ್ಯಕ್ಕೆ ಹೆಚ್ಚು ಭಾಗ ಬರುತ್ತದೆ. The point is, this does not compete with your agricultural incometax. Agricultural Income Tax remains ; it is a State tax. It is not as though it affects your agricultural incometax. The Centre has not taken away the power of the State to tax agricultural income What they have done is, in taxing non-agricultural income they have

(ಶ್ರೀ ಎಂ. ವೈ. ಘೋರ್ಪಡೆ)

ಆ ಮೇಲೆ ನಮ್ಮ ನಾಗಣ್ಣನವರು ಒಂದು ಪ್ರಶ್ನೆ ಎತ್ತಿದರು. ಸೇಲ್ ಟ್ಯಾಕ್ಸ್ ಅನ್‌ಟ್ವಿಸ್ಟೆಡ್ ಸಿಲ್ಕ್ ತೆಗೆದುಹಾಕಿದ್ದಾರೆಂದು ಹೇಳಿದರು. ತಮಗೆ ಗೊತ್ತಿರುವಂತೆ ರಾ ಸಿಲ್ಕ್ ಮೇಲೆ ನಮ್ಮ ರಾಜ್ಯದಲ್ಲಿ ಟ್ಯಾಕ್ಸ್ ಇಲ್ಲ. ಟ್ವಿಸ್ಟೆಡ್ ಸಿಲ್ಕ್ ಮೇಲೆ ಟ್ಯಾಕ್ಸ್ ಇದ್ದದನ್ನು ತೆಗೆದಿದ್ದೇವೆ. ರಾ ಸಿಲ್ಕ್ ಬೇರೆ ರಾಜ್ಯಕ್ಕೆ ಹೋಗುತ್ತದೆ. ಆ ಮೇಲೆ ಕಂಪೋಸಿಟ್ ಯೂನಿಟ್ಸ್‌ನವರು ಟ್ವಿಸ್ಟಿಂಗ್ ಯುನಿಟ್ ಇಟ್ಟುಕೊಂಡು ಮಾಡಿದರೂ ಆ ಯಾರ್ನ್ ಮೇಲೆ ಟ್ಯಾಕ್ಸ್ ಬೀಳುವುದಿಲ್ಲ. ಆದರೆ ಯಾರು ಎಕ್ಸ್‌ಪೋರ್ಟ್ ಮಾಡುವುದಕ್ಕೆ ಕಂಪೋಸಿಟ್ ಯುನಿಟ್ ಇಟ್ಟುಕೊಂಡು ಮಾಡುತ್ತಾರೆ ಅಂಥ ಸ್ಮಾಲ್ ಟ್ವಿಸ್ಟರ್ಸ್ ಮಾತ್ರ ಟ್ಯಾಕ್ಸ್ ಕೊಡಬೇಕಾಗುತ್ತದೆ. ಇದರಿಂದ ಸುಮಾರು ಎರಡು ಲಕ್ಷ 20 ಸಾವಿರ ರೂಪಾಯಿ ಮಾತ್ರ ಬರುತ್ತದೆ. ಇದು ದೊಡ್ಡ ಆದಾಯವೇನೂ ಅಲ್ಲ ಇದರಲ್ಲಿ ಒಂದು ಲಕ್ಷ 60 ಸಾವಿರ ರೂಪಾಯಿ ಬರೇ ಗೌರ್ನ್‌ಮೆಂಟ್ ಫಿಲೇಚರಿನಿಂದ ಬರುತ್ತದೆ. ಹೀಗೆ ಸುಮ್ಮನೆ ಸಿಲ್ಕ್ ಕೈಗಾರಿಕೆಯ ಮೇಲೆ ಟ್ಯಾಕ್ಸ್ ಇರಕೂಡದು ಎಂದು ವಾದ ಇರುವಾಗ ನಾವು ಅದನ್ನು ಏಕೆ ಇಡಬೇಕೆಂದು ಯೋಚನೆ ಮಾಡಿ ಅದರ ಬಗ್ಗೆ ಸಿರಿಕಲ್ಚರ್ ಇಲಾಖೆಯಿಂದ ಪ್ರೊಪೋಸಲ್ ಬಂದಾಗ ಸಿಲ್ಕ್ ಮೇಲೆ ಟ್ಯಾಕ್ಸ್ ಇಡಬಾರದು ಎಂದು ತೆಗೆದು ಹಾಕಿದ್ದೇವೆ. ಇದರಿಂದ ಯಾರೊಬ್ಬರಿಗೂ ಫಾಯಿದೆ ಮಾಡಿಕೊಡುವ ದೃಷ್ಟಿ ಇಲ್ಲ. ಸಿಲ್ಕ್ ಇಂಡಸ್ಟ್ರಿಯಿಂದ ಫಾಯಿದೆ ಇದ್ದರೆ ನಮಗೆ ಬಹಳ ಒಳ್ಳೆಯದು. ಟ್ಯಾಕ್ಸ್ ವಿಷಯ ಬಹಳ ಮುಖ್ಯವಲ್ಲ. ಇದು ಸುಮ್ಮನೆ ರೊಟೇಷನ್ ಆಗುತ್ತಾ ಇದೆ. ಕಾಂಪೋಸಿಟ್ ಯೂನಿಟ್‌ಗಳಿಗೂ ಮತ್ತು ಸ್ಮಾಲ್ ಟ್ವಿಸ್ಟಿಂಗ್ ಯೂನಿಟ್ಟುಗಳಿಗೆ ಮೊದಲಿನಿಂದಲೂ ಬಹಳ ವ್ಯತ್ಯಾಸವಿತ್ತು. ಹಿಂದೆ ಕಾಂಪೋಸಿಟ್ ಯೂನಿಟ್‌ಗಳವರು ರಾ ಸಿಲ್ಕನ್ನು ಬೇರೆ ರಾಜ್ಯಗಳಿಗೆ ಟ್ರೇಡ್‌ಗೋಸ್ಕರ ಕಳುಹಿಸುತ್ತಿದ್ದರು. ಆದರೆ ಅದನ್ನು ಕನ್‌ಸೈನ್‌ಮೆಂಟ್ ಬೇಸಿಸ್ ಮೇಲೆ ಕಳುಹಿಸಿಕೊಡುತ್ತಾ ಇರಲಿಲ್ಲ. ಕಾಂಪೋಸಿಟ್ ಯೂನಿಟ್‌ಗಳವರು ಸಣ್ಣ ಪ್ರಮಾಣದಲ್ಲಿಯೂ ಇದನ್ನು ತಯಾರು ಮಾಡುತ್ತಿದ್ದರು. ಆದ್ದರಿಂದ ರಾಜ್ಯಕ್ಕೆ ಹಣಕಾಸಿನ ದೃಷ್ಟಿಯಿಂದ ಅಪಾಯ ಆಗಲಿಲ್ಲ. ಸೆಂಟ್ರಲ್ ಸಿಲ್ಕ್ ಬೋರ್ಡಿನವರು ಆ ಒಂದು ದೃಷ್ಟಿಯಿಂದ ಇದನ್ನು ಕೈಬಿಟ್ಟಿದ್ದಾರೆ. ಆದ್ದರಿಂದ ಅದರ ಮೇಲೆ ಕರಾರುವಾಕ್ಕಾದ ಆಪಾದನೆಯನ್ನು ಮಾಡಬೇಕಾಗಿಲ್ಲ. ಮಾನ್ಯ ಶ್ರೀ ನಾಗಣ್ಣನವರು ಆ ರೀತಿ ಮಾತನಾಡಬಾರದಾಗಿತ್ತು. ಅದರ ಬಗ್ಗೆ ಚೆನ್ನಾಗಿ ವಿಷಯಗಳನ್ನು ಇನ್ನೂ ತಿಳಿಯಬೇಕಾಗಿತ್ತು.

4-30 P.M.

ಇನ್ನು ಮಾನ್ಯ ಶ್ರೀ ಸರ್‌ದೇಸಾಯಿಯವರು ಬಜೆಟ್ಟಿನಲ್ಲಿ ಮರಾಠಿ ಮಾತನಾಡುವ ಜನಗಳಿಗೆ ಸಾಕಷ್ಟು ಪ್ರಾತಿನಿಧ್ಯವನ್ನು ಕೊಟ್ಟಿಲ್ಲವೆಂದು ಹೇಳಿದರು. ಇದು ನ್ಯಾಯವಾದ ಮಾತಲ್ಲ. ಅವರಿಗೆ ಗೊತ್ತಿದೆ. ನಾನು ಬೆಳಗಾಂಗೆ ಹೋದಾಗ ಖಾನಾಪುರ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಕೆಲಸಗಳನ್ನು ಮಾಡಬೇಕೆಂದು ಹೇಳಿದಾಗ ಅಲ್ಲಿ ಬರಗಾಲವಿಲ್ಲದಿದ್ದರೂ ನಾನೂ ಒಪ್ಪಿದ್ದೇನೆ. ಖಾನಾಪುರ ತಾಲ್ಲೂಕ್ ಸಹ ಕರ್ಣಾಟಕದ ಒಂದು ಭಾಗವಾಗಿರುವುದರಿಂದ ಅಲ್ಲಿ ಸಣ್ಣ ನೀರಾವರಿ ಯೋಜನೆಗಳನ್ನು ಮಾಡುವುದಕ್ಕೆ ಹಿಂಜರಿಯುವುದಿಲ್ಲವೆಂದು ಹೇಳಿದೆ ನಮ್ಮ ರಾಜ್ಯದಲ್ಲಿ ಅಲ್ಲಿಯೂ ಮರಾಠಿ ಮಾತನಾಡುವವರು ಹೆಚ್ಚಿಗೆ ಇದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಅವರದು ಸಂಬಂಧಪಡುವುದಿಲ್ಲ. ಅವರು ಮಹಾರಾಷ್ಟ್ರದಲ್ಲಿದ್ದಾರೆ.

ಶ್ರೀ ಎಂ. ವೈ. ಘೋರ್ಪಡೆ.—ಆದರೆ ಮರಾಠಿ ಜನರು ಇರುವ ಪ್ರದೇಶದಲ್ಲಿ ಬೆಳವಣಿಗೆ ಆಗಬಾರದೆಂಬ ಸಣ್ಣತನಕ್ಕೆ ನಾನು ಹೋಗುವುದಿಲ್ಲ. ಬೆಳಗಾಂಗೆ ನಾನೂ ಮತ್ತು ರೆವಿನ್ಯೂ ಮಂತ್ರಿಗಳು ಹೋಗಿದ್ದಾಗ ಅಲ್ಲಿ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಿಕೊಟ್ಟಿದ್ದೇವೆ. ಆದ್ದರಿಂದ ಮಾನ್ಯ ಸದಸ್ಯರು ಆ ರೀತಿಯಾಗಿ ಮಾತನಾಡಬಾರದಾಗಿತ್ತು.

ಇನ್ನು ಮಾನ್ಯ ಶ್ರೀ ಕೃಷ್ಣನ್ ಅವರು ಈಗ ಈ ಸಭೆಯಲ್ಲಿಲ್ಲ. ಅವರು ಈ ಟ್ಯಾಕ್ಸೇಷನ್ ಬಗ್ಗೆ ಬಹಳ ದೊಡ್ಡದಾಗಿ ಚರ್ಚೆ ಮಾಡಿದರು. ಅದರ ಬಗ್ಗೆ ಅವರು ಒಂದು ಮಾತನ್ನು ಹೇಳಿದರು. ಸೋವಿಯಟ್ ರಷ್ಯಾದಲ್ಲಿ ಇಂತಹ ಟ್ಯಾಕ್ಸೇಷನ್ ಇದೆಯೆಂದು ಹೇಳಿದರು. ಆದರೆ ಸೋವಿಯಟ್ ರಷ್ಯಾದಲ್ಲಿ ಎಲ್ಲಾ ಪದಾರ್ಥಗಳನ್ನು ಅಲ್ಲಿನ ಸರ್ಕಾರ ತಯಾರು ಮಾಡಿದರೂ ಆ ಪದಾರ್ಥಗಳ ಪ್ರೈಸಿಂಗ್ ಪಾಲಿಸಿಯಲ್ಲಿ ಸಾಕಷ್ಟು ಪ್ರಾಫಿಟ್ ಇಟ್ಟಿರುತ್ತಾರೆ. ಅದೇ ಇನ್‌ಡೈರೆಕ್ಟ್ ಟ್ಯಾಕ್ಸ್, ಅಂಥಾದ್ದು ಅಲ್ಲದೆ.

ಮಾನ್ಯ ಶ್ರೀ ಜಿ. ಪುಟ್ಟಸ್ವಾಮಿಯವರು ಷೆಡ್ಯೂಲ್ಡ್ ಕ್ಯಾಸ್ಟ್ ಜನಗಳಿಗೆ ಕೆಲವು ಪ್ರದೇಶಗಳಲ್ಲಿ ರತಕ್ಕ ಬಾವಿಗಳಿಂದ ನೀರು ಕುಡಿಯಲಿಕ್ಕೆ ಅಸ್ಪದವಿಲ್ಲವೆಂದು ಹೇಳಿದರು. ಷೆಡ್ಯೂಲ್ ಕ್ಯಾಸ್ಟ್ ಜನರಿಗೆ ಬಾವಿಗಳಲ್ಲಿ ನೀರು ಕುಡಿಯಲಿಕ್ಕೆ ಅಸ್ಪದ ಕೊಡಬಾರದೆಂದು ಸರ್ಕಾರದ ಉದ್ದೇಶವಲ್ಲ. ಹಾಗೂ ಸರ್ಕಾರದ ಅಭಿಪ್ರಾಯವೂ ಇಲ್ಲ. ಯಾರೂ ಆ ರೀತಿಯಾಗಿ ಹೇಳಲಿಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ತಾವೂ ತುಂಬಾ ಒಳ್ಳೆಯವರು. ಮಂತ್ರಿಗಳ ಮೇಲೆ ಲಂಚದ ಅಪಾದನೆ ಇದೆ. ತಾವು ಉತ್ತಮವಾದಂಥ ಜನರು. ಆದ್ದರಿಂದ ಬಡ್ಜೆಟ್ಟಿನಲ್ಲಿ ಸ್ವಲ್ಪ ಹಣವನ್ನು ಇದಕ್ಕಾಗಿಯೇ ಇಷ್ಟಿಷ್ಟು ಎಂಬುದಾಗಿ ಇಂತಹ ಮಂತ್ರಿಗಳಿಗೆ ಕೊಟ್ಟು ಸ್ವಚ್ಛ ಆಡಳಿತ ವನ್ನು ಜನರಿಗೆ ಕೊಡುವುದು ಒಳ್ಳೆಯದಲ್ಲವೇ ?

ಶ್ರೀ ವಾಟಾಳ್ ನಾಗರಾಜ್.— ಇದರ ಅರ್ಥವೇನೆಂದರೆ, ಲಂಚದ ಇಲಾಖೆಯೆಂದು ಪ್ರತ್ಯೇಕ ವಾಗಿ ಮಾಡಿ ಲಂಚಮಂತ್ರಿಗಳು ಇಷ್ಟು ಎಂಬುದಾಗಿ ಮಾಡಬೇಕೆಂದು ನಾನು ಹೇಳುತ್ತಿದ್ದೇನೆ.

ಶ್ರೀ ಎಂ. ವೈ. ಘೋರ್ಪಡೆ.— ಇದರ ಬಗ್ಗೆ ನಮ್ಮ ದೇಶದಲ್ಲಿ ಗೊತ್ತಿರುವ ಹಾಗೆ ಒಂದು ಆಂದೋಳನೆ ನಡೆಯಿತು. ಕಾನೂನು ಪ್ರಕಾರ ಮಾಡುವುದಕ್ಕಾಗುವುದಿಲ್ಲ. ಬರಗಾಲ ಪ್ರದೇಶ ಗಳಲ್ಲಿ ಮಾಡಿದ್ದಾರೆ. ಟ್ಯಾಂಕ್‌ಗಳನ್ನು ಕೊಟ್ಟಿದ್ದೇವೆ. ಆದರೆ ಇದು ಬರೀ ಲೋಕಲ್ ಪ್ರಾಬ್ಲಮ್ಸ್ ಅಲ್ಲ. ಮಹಾತ್ಮ ಗಾಂಧೀಜಿಯವರು ಇದರ ಬಗ್ಗೆ ಸಾಕಷ್ಟು ಚಳುವಳಿಯನ್ನು ಈ ದೇಶದಲ್ಲಿ ಬಹಳ ಧೈರ್ಯವಾಗಿ ಮಾಡಿದರು. ಹಾಗೆ ಮಾಡಿದ್ದರಿಂದ ಎಲ್ಲಾ ಕಡೆಯೂ ಸಂಪೂರ್ಣವಾಗಿ ತಿಳುವಳಿಕೆ ಬಂದಿದೆ. ಈಗ ಈ ಕಾರ್ಯದಕ್ಷತೆಯನ್ನು ಮುಂದುವರಿಸಬೇಕಾಗಿದೆ. ಇದು ಬರೀ ಕಾನೂನಿನಿಂದ ಆಗುವುದಿಲ್ಲ. ನಮ್ಮ ವಿಚಾರ ಮಾಡುವ ಪದ್ಧತಿ ಏನಿದೆ ಅದರಲ್ಲಿ ಮೂಲಭೂತ ಬದಲಾವಣೆಗಳನ್ನು ಮಾಡಬೇಕು. ಎಲ್ಲಿಯವರೆಗೆ ಈ ಪ್ರಶ್ನೆ ಸಂಪೂರ್ಣವಾಗಿ ಮನಸ್ಸಿನಲ್ಲಿ ಪರಿಣಾಮವಾಗುವು ದಿಲ್ಲವೋ ಅಲ್ಲಿಯವರೆಗೂ ಈ ಪ್ರಶ್ನೆ ಬರುತ್ತಲೇ ಇರುತ್ತದೆ. 1934ರಲ್ಲಿ ಸೊಂಡೂರಿನಲ್ಲಿ ಈ ಬಗ್ಗೆ ಒಂದು ಕಾನೂನು ಮಾಡಬೇಕಾಗುತ್ತದೆಂದು ಹರಿಜನರಿಗೆ ಟೆಂಪಲ್ ಎಂಟ್ರಿ ಇರಬೇಕೆಂದು ಒಂದು ಪ್ರೊಕ್ಲಮೇಷನ್ ಮಾಡಿದರು. ಆಗ ಎಲ್ಲರಿಗೂ ಸರ್ವೇಸಾಮಾನ್ಯವಾಗಿ ಗುಡಿಗಳಲ್ಲಿ ಹೋಗು ವುದಕ್ಕೆ ಅವಕಾಶವಿತ್ತು. ಅಂತಹ ಒಂದು ಕಾಲವಿತ್ತು. ಅದರ ಬಗ್ಗೆ ಮಹಾತ್ಮ ಗಾಂಧಿಯವರು ಅಲ್ಲಿ ಒಂದು ಬಹಿರಂಗ ಸಭೆಯಲ್ಲಿ ಇವರ ವಿಚಾರವಾಗಿ ಮಾತನಾಡಿದರು. ಹರಿಜನ ಪತ್ರಿಕೆ ಯಲ್ಲಿಯೂ ಇವರ ವಿಚಾರವನ್ನು ಬರೆದರು. ಅಂತಹ ಒಂದು ಕಾಲ ಹಿಂದೆ ಇತ್ತು.

ಶ್ರೀ ವಾಟಾಳ್ ನಾಗರಾಜ್.—ಮಹಾತ್ಮ ಗಾಂಧಿಯವರ ವಿಚಾರವನ್ನು ಮಾನ್ಯ ಶ್ರೀ ಬಸವ ಲಿಂಗಪ್ಪನವರು ಒಪ್ಪುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಅದು ಮಾನ್ಯ ಸದಸ್ಯರ ತಿಳುವಳಿಕೆಯಷ್ಟೇ.

ಶ್ರೀ ಎಂ. ವೈ. ಘೋರ್ಪಡೆ.—ಇವತ್ತಿನವರೆಗೂ ಏನು ಪ್ರಗತಿ ಮಾಡಿದ್ದೇವೆಯೋ ಅದು ಏನೇನೂ ಸಾಲದು. ಇನ್ನು ಹೊಸ ರೀತಿಯಲ್ಲಿ ಆಧುನಿಕವಾಗಿ ಯೋಚನೆಮಾಡುವ ಜನರು ನಮ್ಮಲ್ಲಿ ಜಾಸ್ತಿ ಇದ್ದಾರೆ. ಅನೇಕರಿಗೆ ಆಧುನಿಕ ವಿಚಾರದಲ್ಲಿ ಯೋಚನೆ ಮಾಡುವ ಶಕ್ತಿ ಇದೆ. ಇಲ್ಲದೇ ಹೋದರೆ ಹಳೆಯ ವಿಚಾರದಿಂದ ಏನೂ ಆಗುವುದಿಲ್ಲ. ಹೊಸ ವಿಚಾರಗಳೇ ಬರುತ್ತವೆ.

ಒಬ್ಬ ಸದಸ್ಯರು.—ಮಾನ್ಯ ಸಚಿವರು ತಮ್ಮ ಮನೋವರ್ತನೆಗೆ ಹಾಗೂ ಸಮಯಕ್ಕೆ ತಕ್ಕ ಹಾಗೆ ವಿಚಾರ ಪ್ರವೃತ್ತರಾಗಿ ಯೋಚನೆ ಮಾಡುತ್ತಿದ್ದಾರೆ.

Sri M. Y. GHORPADE.—Vested interests can be crushed not only by law but public opinion also.

Sri V. N. PATIL.—I want to ask him......

Mr. DEPUTY SPEAKER.—Mr. Patil, I cannot permit you.

ಶ್ರೀ ಕೋಣಂದೂರು ಲಿಂಗಪ್ಪ.—ಅದನ್ನು ಮಾಡುವುದು ತಮ್ಮ ಕೈಲೇ ಇತ್ತು.

ಉಪಾಧ್ಯಕ್ಷರು.—ಮಾನ್ಯ ಮಂತ್ರಿಗಳು ಈಗ್ಲಾಗಲೇ ಇದ್ದಾಗ ನೀವು ಹೇಗೆ ಮಾತನಾಡುವು ದಕ್ಕೆ ಸಾಧ್ಯ ? Mr. Lingappa, please resume your seat. We have a lot of business to be transacted still.

ಶ್ರೀ ಕೋಣಂದೂರು ಲಿಂಗಪ್ಪ.—ಆ ಬರಗಾಲ ಪ್ರದೇಶದಲ್ಲಿ ಜನರನ್ನು ಕೆಲಸಕ್ಕೆ ನೇಮಕ ಮಾಡಿದ್ದಾಗ ಅಲ್ಲಿ ಎಲ್ಲರಿಗೂ ಒಂದೇ ಕಡೆ ಊಟ, ತಿಂಡಿ, ಅಡಿಗೆ ವಸತಿ ಎಲ್ಲವನ್ನೂ ಸಾಮೂಹಿಕ ವಾಗಿ ಮಾಡಿದ್ದರೆ ಜನರಲ್ಲಿ ಒಂದು ಸಾರ್ವತ್ರಿಕ ಮನೋಭಾವನೆ ಬೆಳಯುವುದಕ್ಕೆ ಅವಕಾಶವಾಗುತ್ತಿತ್ತು, ಅದನ್ನು ತಾವೇಕೆ ಮಾಡಲಿಲ್ಲ ?

ಶ್ರೀ ಎಂ. ವೈ. ಘೋರ್ಪಡೆ.—ಅಲ್ಲಿ ಕೆಲಸಕ್ಕೆ ಬಂದಿದ್ದ ಜನರೆಲ್ಲಾ ಒಂದೇ ಕಡೆ ಇದ್ದರು. Whenever we have got our labour camps, there are no differences. Harijans are never treated seperately. We will never tolerate it. ಹಾಗೆ ಎಲ್ಲೆಲ್ಲಿ ಸರ್ಕಾರ ಕೆಲಸ ಕಾರ್ಯಗಳು ನಡೆಯುತ್ತವೆಯೋ ಅಲ್ಲೆಲ್ಲಾ ನಾವು ಹಾಗೆ ವ್ಯತ್ಯಾಸಮಾಡುವುದಕ್ಕೆ ಅವಕಾಶವಿಲ್ಲ—ಅದಕ್ಕೆ ನಾನು ಆಸ್ಪದ ಕೂಡ ಕೊಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ತಾವು ಇದನ್ನು ಮಾಡುವುದಕ್ಕೆ ಆ ಬರಗಾಲದ ಪ್ರದೇಶಕ್ಕೆ ಏನೂ ಹೋಗಬೇಕಾದ್ದಿಲ್ಲ. ಇಲ್ಲೇ ಶಾಸಕರ ಭವನ ಮತ್ತು ಜನರಲ್ ಹಾಸ್ಟಲಲ್ಲಿ ಏಕೆ ಮಾಡಬಾರದು ?

ಶ್ರೀ ಎ. ಎನ್. ಪಾಟೀಲ್.—ತಾವು ಅಲ್ಲಿ ಆಹಾರವನ್ನು ಸಬ್‌ಸಿಡೈಜ್ಡ್ ರೇಟಿನಲ್ಲಿ ತಯಾರಿಸಿ ಹಂಚಿ ಅಲ್ಲಿಗೆ ಎಲ್ಲರೂ ಬರುತ್ತಾರೆ. ಅದನ್ನೇಕೆ ಮಾಡಬಾರದು ?

Mr. DEPUTY SPEAKER.—Mr. Patil, we are in the Assembly. Is it not ? Please sit down. At the outset, when the Hon. Minister for Finance started replying, I anticipated all these things, I said let there be no interruptions. Unless, of Course, one is inclined to be humerous or musical or rhetorical, such discussions should not be indulged in' I tri d to be rigid and everything went on well. I wanted the Hon. Minister not to yield. By his yielding, the beauty of the speech is lost. When such interruptions are made, somebody loses his temper and there is trouble for the Presiding Officers: So, the best thing is to be as rigid as possible.

(Sri S. Bangarappa stood up to speak)

Mr DEPUTY SPEAKER.—Mr. Bangarappa, you are in a new dhoti; at least to adjust with the new dress, be sober. I would urge upon the hon. Members to just allow the Hon. Minister to complete his reply. You can seek clarifications after he completes his spaech.

Sri D. DEVARAJ URS.—If you permit somebody to be humorous, it is alright. But if they start singing and if they are musical what are we to do ?

Mr. DEPUTY SPEAKER.—Pandit Nehru said that interruptions may be permitted, provided they are musical. I cannot allow anybody to sing here.

ಶ್ರೀ ಎ. ಎನ್. ಪಾಟೀಲ್.—ಪದಗಳನ್ನು ಹಾಡಿ ; ಆದರೆ ಅಪಸ್ವರ ಬೇಡ ಅನ್ನುತ್ತೀರಾ ?

ಶ್ರೀ ವಾಟಾಳ್ ನಾಗರಾಜ್.—ಸಂಗೀತ ರೂಪದಲ್ಲಿ ಬೇಕಾದರೂ ಭಾಷಣ ಮಾಡುವುದಕ್ಕೆ ನಾವು ತಯಾರಾಗಿದ್ದೇವೆ.

Sri M. Y. GHORPADE.—I have to cover two or three more points.

Mr. DEPUTY SPEAKER.—Please take your own time, but do not allow interruptions ; do not go on yeilding.

ಶ್ರೀ ಎಂ. ವೈ. ಘೋರ್ಪಡೆ.—ಇನ್ನು ನೇಕಾರರ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಆದರೆ ಇದರ ಲೇಟೆಸ್ಟ್ ಪೊಜಿಷನ್ ಏನಿದೆ ಎಂಬುದನ್ನು ತಿಳಿಸಬೇಕೆಂದು ಮಾನ್ಯ ವಿರೋಧ ಪಕ್ಷದ ನಾಯಕರು ಕೇಳಿದ್ದಾರೆ. ಅದರ ಬಗ್ಗೆ ನಾನು ತಿಳಿಸಬೇಕೆಂದಿರುವುದು ಇಷ್ಟೇ.

During 1972-73, 7 yarn depots costing Rs. 55 lakhs have been opened. So far, yarn worth about Rs. 23 lakhs have been purchased and distributed to weavers through Government Yarn Depots. Government have also sanctioned pledge loan for handloom weavers to the extent of Rs. 10 lakhs to the District Industrial Co-operative Bank. Starting of 15 relief centres costing Rs. 75 lakhs is under consideration of Government.

In addition to the above schemes, proposals having a total outlay of about Rs. 2 crores have been submitted to the Government of India for giving relief to handloom weavers in drought affected areas. These proposals include the establishment of 5 additional yarn depots, 6 Collective Weaving Centres, drought discount and pledge loan to weavers.

In addition to these schemes, preliminary steps have been taken to open central godowns and select primary agencies for distribution of yarn in the State as soon as Government of India orders about 100 percent control over procurement and distribution of yarn are received. The Mysore Small Industries Corporation is being entrusted with the wholesale distribution work and primary Handloom weavers societies and other agencies having sound management and financial ability are being selected to take up retail distribution work.

So far as urban property ceiling-to which Mr. Kakkilaya referred, is concerned there is nothing for me to say.

ಇನ್ನು ಕೆಲವರು ಅರ್ಬನ್ ಪ್ರಾಪರ್ಟಿ ಸೀಲಿಂಗ್ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಕೇಂದ್ರದವರೇ ಎಲ್ಲಾ ರಾಜ್ಯಗಳಿಗೂ ಸಂಬಂಧಪಟ್ಟಂತೆ ಒಂದು ಯೂನಿಫಾರಂ ಬಿಲ್ಲನ್ನು ತಯಾರಿಸಲು ಕೇಂದ್ರಕ್ಕೆ ಈ ವಿಷಯವನ್ನು ಬಿಟ್ಟುಬಿಡಬೇಕೆಂದು ಇದು ಆಗಲೇ ತೀರ್ಮಾನವಾಗಿದೆ. ಆದ್ದರಿಂದ ಅದನ್ನು ಇನ್ನು ಮುಂದೆ ಲಂಬಿಸುವುದಕ್ಕೆ ಹೋಗುವುದಿಲ್ಲ.

ಇನ್ನು ಶ್ರೀ ಸಿದ್ದಪ್ಪನವರು ಪಶುಸಂಗೋಪನೆಯ ವಿಚಾರ ಎತ್ತಿದ್ದಾರೆ. ಅದರ ಬಗ್ಗೆ ಸರ್ಕಾರಕ್ಕೆ ಭಿನ್ನಾಭಿಪ್ರಾಯವೇ ಇಲ್ಲ. ಅನ್‌ಇರಿಗೇಟೆಡ್ ಏರಿಯಾದಲ್ಲಿ ಇದನ್ನು ಹೆಚ್ಚು ಅಭಿವೃದ್ಧಿ ಮಾಡಬೇಕೆಂದಿದ್ದೇವೆ. ಈಗಾಗಲೇ 140 ಹೊಸ ಡಿಸ್ಪೆನ್ಸರಿಗಳನ್ನು ತೆರೆಯಬೇಕೆಂದು ತೀರ್ಮಾನವನ್ನು ಕೈಕೊಂಡಿದ್ದೇವೆ. ಈಗ 40 ಇತ್ತು ಅದನ್ನು 140 ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. apart from upgraded 20 dispenseries. ಐದನೇ ಪಂಚವಾರ್ಷಿಕ ಯೋಜನೆಯಲ್ಲಿ ಇವುಗಳನ್ನು ಇನ್ನೂ ಹೆಚ್ಚಿಗೆ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ.

ಆದರೆ ಇನ್ನೂ ಅನೇಕ ಮಾನ್ಯ ಸದಸ್ಯರುಗಳು ಅನೇಕ ಬೇರೆ ಬೇರೆ ವಿಷಯಗಳ ಬಗ್ಗೆ ಸಲಹೆಗಳನ್ನು ಕೊಟ್ಟಿದ್ದಾರೆ. ಆದರೆ ಅವುಗಳಿಗೆಲ್ಲಾ ಸಧ್ಯದಲ್ಲಿ ಉತ್ತರ ಕೊಡುವುದಕ್ಕಾಗುವುದಿಲ್ಲ. ಡಿಮ್ಯಾಂಡ್‌ಗಳ ಮೇಲೆ ಉತ್ತರ ಕೊಡತಕ್ಕ ಕಾಲದಲ್ಲಿ ಆಯಾಯ ಬಾಬಿಗೆ ಸಂಬಂಧಪಟ್ಟ ಸಚಿವರುಗಳು ಉತ್ತರ ಕೊಡುತ್ತಾರೆಂದು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ನಾನಾಗಲೇ ಹೇಳಿದಂತೆ ಈ ಡ್ರಾಟ್ ಮತ್ತು ಡೆವಲಪ್‌ಮೆಂಟ್ ಬಜೆಟ್ಟನ್ನು ಏನು ತಮ್ಮ ಮುಂದೆ ಮಂಡಿಸಿದ್ದೇನೆ. ಇದರ ಬಗ್ಗೆ ಸರ್ಕಾರಕ್ಕೆ ಏನೇನು ಸಾಧ್ಯವಿತ್ತು ಅವೆಲ್ಲವನ್ನೂ ಮಾಡಿದ್ದೇವೆ. ಆದುದರಿಂದ ತಾವುಗಳೆಲ್ಲರೂ ಇದಕ್ಕೆ ಒಪ್ಪಿ ತಮ್ಮ ಬೆಂಬಲ ಕೊಡುತ್ತೀರೆಂದು ನಾನು ನಂಬಿದ್ದೇನೆ.

ಶ್ರೀ ಕೆ. ಎಂ. ನಾಗಣ್ಣ.—ಅಧ್ಯಕ್ಷರೇ ; ಮಾನ್ಯ ಸಚಿವರು ನನ್ನ ಬಗ್ಗೆ ವಾಸ್ತವಾಂಶಕ್ಕೆ ದೂರವಾದ ವಿಷಯವನ್ನು ಹೇಳಿದ್ದಾರೆ. ನಾನು ಸಾಧ್ಯವಾದ ಮಟ್ಟಿಗೂ ಮುಖ್ಯ ಮಂತ್ರಿಗಳು ಸದನದಲ್ಲಿದ್ದ ಕಾಲದಲ್ಲೇ ನನ್ನ ಭಾಷಣ ಮಾಡಬೇಕೆಂದಿದ್ದೆ. ಆದರೆ ಅದು ಸಾಧ್ಯವಾಗಲಿಲ್ಲ. ಆದರೆ ಅವರೂ ಕೂಡ ಈ ದಿವಸ ಇಲ್ಲದ್ದಾರೆ. ಆದ್ದರಿಂದ ನಾನು ಈ ಸಂದರ್ಭದಲ್ಲಿ ಎರಡು ಮಾತುಗಳನ್ನು ಹೇಳಲೇಬೇಕಾಗಿದೆ. ತ್ರೋನ್ ಸಿಲ್ಕ್‌ಮೇಲೆ ಸೇಲ್ಸ್ ಟ್ಯಾಕ್ಸ್ ತೆಗೆಯುವುದಾಗಿ ತಿಳಿಸಿದ್ದಾರೆ, ಆದರಿಂದ ಬಡ ನೇಕಾರರಿಗೇನೂ ಅನುಕೂಲವಿಲ್ಲ. ಏಳೆಂಟು ಜನರು ಹಿಂದೆ 2 ಲಕ್ಷ ರೂಪಾಯಿ ವಸೂಲುಮಾಡಿ ಸರಕಾರಕ್ಕೆ ಕೊಡಬೇಕೆಂದು ಹೇಳಿ ಅದನ್ನು ಕೊಟ್ಟಿದ್ದಾರೆ. ಯಾರು ಅದನ್ನು ತೆಗೆದುಕೊಂಡರು ಎಂಬುದನ್ನು ಮುಖ್ಯಮಂತ್ರಿಗಳು ಪ್ರೋಬ್ ಮಾಡಬೇಕು. ರೂಮರ್ ಇರುವುದು ಮಂತ್ರಿಗಳಿಗೆ ಕೊಡಲು ವಸೂಲು ಮಾಡಿದ್ದಾರೆ ತಂದು ಬಜೆಟ್ ಮಾಡಿದಮೇಲೆ 60 ಸಾವಿರ ರೂಪಾಯಿ ವಸೂಲುಮಾಡಿದ್ದಾರೆ. ಮುಖ್ಯಮಂತ್ರಿಗಳಿಗೆ ಕೆಟ್ಟ ಹೆಸರು ಬರಬಾರದು ಎಂದು ಇದನ್ನು ತಿಳಿಸುತ್ತಿದ್ದೇನೆ. ಇದನ್ನು ಕೊಡಬಾರದೆಂದು ನಾನು ಹೇಳಿದ್ದೇನೆ. ಚಂದಾ ಕೊಟ್ಟಿರುವವರ ಹೆಸರು ನನ್ನ ಹತ್ತಿರ ಇದೆ, ಆ ಪಟ್ಟಿ ಇದೆ. ಅವರಿಗೆ ಶಿಕ್ಷೆಯಾಗಬೇಕು.

ಶ್ರೀ ಡಿ. ದೇವರಾಜ ಅರಸ್.—ಈ ವಿಚಾರವನ್ನು ಮಾನ್ಯ ಸದಸ್ಯರು ಒಂದು ಸಲ ಹೇಳಿದ್ದರು, ಎನ್‌ಕ್ವೈರಿ ಮಾಡಿದಾಗ ಅಂಥಾದ್ದೇನೂ ಇಲ್ಲವೆಂದು ತಿಳಿದು ಬಂದು ಆ ವಿಚಾರ ಬರೆದಿದ್ದೇನೆ. ಒಂದು ವಿಚಾರ ಬಹಿರಂಗವಾಗಿ ಹೇಳಬಹುದು. ನನ್ನ ಮಟ್ಟಿಗೆ ಹೇಳುವುದಾದರೆ ಅದು ನಿಜವಲ್ಲ. ಒಂದು ವೇಳೆ ಮಧ್ಯವರ್ತಿಗಳಿದ್ದರೆ ಎನ್‌ಕ್ವೈರಿ ಮಾಡಲು ಅಡ್ಡಿಯಿಲ್ಲ. ಸಿ.ಬಿ.ಐ.ಗೂ ಹೇಳೋಣ.

ಶ್ರೀ ಕೆ. ಎಂ. ನಾಗಣ್ಣ.—ಸಿ.ಬಿ.ಐ. ಎನ್‌ಕ್ವೈರಿ ಮಾಡಿದರೆ ತಪ್ಪುಮಾಡಿರುವವರು ಹೊರಗೆ ಬರುವರು.

ಶ್ರೀ ಟಿ. ಎಂ. ಮಂಜುನಾಥ.—ತೆಂಗಿನಕಾಯಿನಿಂದ ತಯಾರಿಸಿದ ಎಣ್ಣೆಯ ಮೇಲೆ ತೆರಿಗೆ ಹಾಕುತ್ತಿದ್ದಾರೆ, ಇದು ಜನ ಸಾಮಾನ್ಯರು ಉಪಯೋಗಿಸುವ ಎಣ್ಣೆ. ಆದುದರಿಂದ ಇದರ ಮೇಲೆ ವಿಧಿಸಿರುವ ಪರ್ಚೇಸ್ ಟ್ಯಾಕ್ಸನ್ನು ತೆಗೆಯಬೇಕೆಂದು ಸೂಚಿಸುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ನಾವು ಮಾತನಾಡುವಾಗ ಹೇಳಿದ ಒಂದೆರಡು ವಿಷಯಗಳನ್ನು ಮಾನ್ಯ ಅರ್ಥ ಸಚಿವರು ಪ್ರಸ್ತಾಪಿಸಿಲ್ಲ. ಬಹಳ ಮುಖ್ಯವಾಗಿ ಸಂಡೂರು ಬಗ್ಗೆ ಹೇಳಿತ್ತು. ಅಲ್ಲಿಯ ರೈತರನ್ನು ನಿರ್ಗತಿಕರನ್ನಾಗಿ ನಿರ್ವಸಿತರನ್ನಾಗಿ ಮಾಡುವುದಕ್ಕೆ ನಂದಿಹಳ್ಳಿ ಹತ್ತಿರ ಒಂದು ಹೊಸ ಯೋಜನೆ ಮಾಡಿದ್ದಾರೆ. ಸೊಂಡೂರಿನಲ್ಲಿ 1948ರಿಂದ ಇವತ್ತಿನವರೆಗೆ ಅರ್ಥಸಚಿವರು ರಾಜರು. ನೇರವಾಗಿ ಅವರ ಮೇಲೆ ಈ ಅಪಾದನೆ ಪ್ರಸ್ತಾಪಮಾಡಿರುವ ಬಗ್ಗೆ ಅವರು ಏನೂ ಹೇಳಲಿಲ್ಲ.

ಶ್ರೀ ಎಂ. ವೈ. ಘೋರ್ಪಡೆ,—ನಂದಿಹಳ್ಳಿಯಲ್ಲಿ ರೈತರನ್ನು ಬಿಡಿಸುವ ಪ್ರಶ್ನೆ ಬರುವುದಿಲ್ಲ, ನಂದಿಹಳ್ಳಿ ಭೂಮಿ ಸರಕಾರಕ್ಕೆ ಸೇರಿರುವುದು. ರೈತರನ್ನು ಅಲ್ಲಿ ಬಿಡಿಸಿ ಏನೋ ಮಾಡುತ್ತಿದ್ದೇವೆಂದು ಹೇಳುವುದು ಸತ್ಯಕ್ಕೆ ದೂರವಾದ ಮಾತು. ಅಲ್ಲಿ ಸ್ವಲ್ಪ ಭೂಮಿ ಇದೆ, ಅದರ ಸುತ್ತ ಅರಣ್ಯವಿದೆ, ಅದು ಬಹಳ ಸುಂದರವಾಗಿರುವ ಒಂದು ಪ್ರದೇಶ. ಅದು ಸುಮಾರು ಒಂದು--ಒಂದೂವರೆ ಸಾವಿರ ಎಕರೆ ಎಲ್ಲಾ ಸೇರಿ ಆಗಬಹುದು. ಅಂಥ ಸ್ಥಳ ಪೋಸ್ಟ್ ಗ್ರಾಜುಯೇಟ್ ಸೆಂಟರ್ ಮಾಡುವುದಕ್ಕೆ ಸಿಕ್ಕುವುದಿಲ್ಲ, ಅಂಥ ಸ್ಥಳವಿದೆ ನಂದಿಹಳ್ಳಿಯಲ್ಲಿ. ಮೊನ್ನೆ ಕೂಡ ಹೋದಾಗ ನೋಡಿದೆ. ಯಾವ ರೈತರು ವ್ಯವಸಾಯ ಮಾಡಿರುವ ಭೂಮಿ ಅದಲ್ಲ. ಮಾನ್ಯ ಲಿಂಗಪ್ಪನವರು ಇದರ ಬಗ್ಗೆ ರಾಜಕೀಯ ಮಾಡುವುದಿದ್ದರೆ ಮಾಡಲಿ. ಇಲ್ಲದಿದ್ದರೆ ನೇರವಾಗಿ ಕೇಳಲಿ, ಕೇಳಿದರೆ ಹೇಳುತ್ತೇನೆ. ಒಂದು ದಿವಸವಾದರೂ ಕೇಳದೆ ಹೇಳಿಕೆ ಕೊಟ್ಟರೆ ಇದು ಬರೀ ರಾಜಕೀಯವಾಗುತ್ತದೆ. ನಿಮಗೇನು ತೊಂದರೆ ? ರಾಜ ಮನೆತನಕ್ಕೆ ಸೇರಿದ ಕಾರಣ ಜನರನ್ನು ಶೋಷಣೆ ಮಾಡಿರಲೇಬೇಕು ಎಂಬುದು ನಿಮ್ಮ ರಾಜಕೀಯ ಸಿದ್ಧಾಂತ.

ಶ್ರೀ ಕೋಣಂದೂರು ಲಿಂಗಪ್ಪ.—ವೈಯುಕ್ತಿಕವಾಗಿ ಸಚಿವರ ಬಗ್ಗೆ ನನಗೆ ವಿಶ್ವಾಸವಿದೆ. ಹೀಗೆ ಹೇಳಬಾರದು. ರಾಜರಾಗಬೇಕೆಂದು ಕೇಳಿಕೊಂಡು ಹುಟ್ಟಿಧಿರಬಹುದು, ಅದು ಗೊತ್ತು. 25 ವರ್ಷದಿಂದ ಅಲ್ಲಿ ರೈತರಿಗೇನಾಗಿದೆ ಎಂಬ ಪ್ರಶ್ನೆ ಇದೆ.

ಶ್ರೀ ಎಂ. ವೈ. ಘೋರ್ಪಡೆ.—ಆ ವಿಚಾರ ನನ್ನಲ್ಲಿ ಕೇಳುತ್ತಿಲ್ಲ. ಕೇಳಿದರೆ ನಿಜಾಂಶ ಗೊತ್ತಾಗುತ್ತಿತ್ತು. ರಾಜಮನೆತನದಲ್ಲಿ ಹುಟ್ಟಿದವರೆಲ್ಲರೂ ಶೋಷಣೆ ಮಾಡುವವರು ಎಂಬ ಅಭಿಪ್ರಾಯವಿರಬಾರದು. ರೈತರ ಬಗ್ಗೆ ಸಾಕಷ್ಟು ಸಹಾಯ ಮಾಡಲಾಗಿದ್ದೆ, ಅವರನ್ನು ಶೋಷಣೆ

ಮಾಡುವ ಪ್ರಶ್ನೆಯಿಲ್ಲ. 60 ಎಕರೆ ಮಾತ್ರ ನನ್ನ ಕಡೆ ಇದೆ. ನಾನು ರೈತರನ್ನು ದುಡಿಸಿ ಶ್ರೀಮಂತನಾಗಿಲ್ಲ. ದೇವಸ್ಥಾನ ಬಗ್ಗೆ ಕೂಡ ಪದೇ ಪದೇ ಹೇಳಬೇಕಾಗಿಲ್ಲ. ನನಗೆ ಜವಾಬ್ದಾರಿ ಅದರ ಬಗ್ಗೆ ಇಲ್ಲ, ಕೇಳುವುದರಿಂದ ಹೇಳಬೇಕು. ದೇವಸ್ಥಾನದ ಭೂಮಿ ಸರಕಾರದ ಕಡೆ ಇದೆ. ಬಹಳ ಕಾಲದಿಂದ ರೈತರಿಗೆ ಪಟ್ಟ ಮಾಡಿಕೊಡಬೇಕೆಂದು ಹೇಳಿದ್ದೇನೆ. ಇನಾಂ ರದ್ದು ಮಾಡಬೇಕು, ರೈತರ ಕಡೆ ಭೂಮಿ ಇದೆ. ಅದು ಸರಕಾರಕ್ಕೆ ಸೇರಿರುವ ಭೂಮಿ; ಟ್ರಸ್ಟ್ ಅಲ್ಲ. ಇನಾಮನ್ನು ರದ್ದು ಮಾಡುವುದರ ಫಲವಾಗಿ ದೇವಸ್ಥಾನದ ರೈತರ ಹೆಸರಿಗೆ ಪಟ್ಟ ಮಾಡುವ ಅಧಿಕಾರ ಈಗ ಬಂದಿದೆ. ಖಂಡಿತ ಅದನ್ನು ಮಾಡುತ್ತೇವೆ. ಇದರಿಂದ ಅನೇಕರಿಗೆ ಅನುಕೂಲವಾಗುತ್ತದೆ. ಮಾನ್ಯ ಸದಸ್ಯರು ಯುವಕರು, ಅವರು ನೇರವಾಗಿ ಕೇಳಬೇಕು. ಸೊಂಡೂರಿನ ಬಗ್ಗೆ ಜನರು ಹೀಗೆ ಹೇಳುವರು, ಇದರ ಬಗ್ಗೆ ತಮ್ಮ ಅಭಿಪ್ರಾಯವೇನು ಎಂದು ಕೇಳಬಹುದು. ಕೇಳಿದ್ದರೆ ಹೇಳಬಹುದಾಗಿತ್ತು. ಹಾಗೆ ಮಾಡದೆ ಇಲ್ಲಿ ಪ್ರಸ್ತಾಪಿಸಿರುವುದರಿಂದ ಇದು ರಾಜಕೀಯಕ್ಕೆ ಮಾಡಿರುವುದು ಎಂದು ತಿಳಿಯಬೇಕಾಗುತ್ತದೆ. ರೈತರು ಯಾರು ಭೂಮಿ ಮಾಡುವರೋ ಅವರನ್ನು ಬಿಡಿಸಬಾರದು ಎಂಬ ಸಿದ್ಧಾಂತದಮೇಲೆ ನಾನು ಸಾಕಷ್ಟು ದುಡಿದಿದ್ದೇನೆ. ದೇವಸ್ಥಾನ ಈ ಭೂಮಿಯನ್ನು ಮಾಡುವುದು, ಆಕ್ಷನ್ನಿಗೆ ಹಾಕಬಾರದು ಎಂದು ರಿಕಾರ್ಡಿದೆ. ಆಕ್ಷನ್ ಪ್ರತಿ ವರ್ಷ ಮಾಡಿದರೆ ಶ್ರೀಮಂತರು ತೆಗೆದುಕೊಳ್ಳುವರು, ಆದುದರಿಂದ ಆಕ್ಷನ್ ಮಾಡಬಾರದು ಎಂದು ಭೂಮಿಯನ್ನು ಮಾಡುವವರಿಗೇ ಕೊಟ್ಟಿದ್ದೇವೆ ಸೊಂಡೂರಿನಲ್ಲಿ ರೈತರಿಗೆ ಯಾದ ಕಿರುಕುಳವೂ ಇಲ್ಲ. ದಯವಿಟ್ಟು ಸೊಂಡೂರಿನ ಬಗ್ಗೆ ಏನಾದರೂ ಸಮಾಚಾರ ಬೇಕಾದರೆ ನೇರವಾಗಿ ನನ್ನನ್ನು ಕೇಳಿ. ನಿಮಗೆ ಅನುಮಾನ ಇದ್ದರೆ, ನಾನು ಹೇಳುತ್ತೇನೆ ಎಂದು ಈ ಸಂದರ್ಭದಲ್ಲಿ ಇಷ್ಟು ಮಾತ್ರ ಹೇಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ತಾವು ನಾಳೆ ಹೊರಗಡೆ ಬಂದು ನಮ್ಮ ರೈತರಿಗೂ- ನಿಮ್ಮ ರೈತರಿಗೂ ಈ ಮಾತನ್ನು ಹೇಳಿ. ನಿಮ್ಮನ್ನು ನಾವು ಸ್ವಾಗತ ಮಾಡುತ್ತೇನೆ.

Sri M.Y. GHORPADE.—You are welcome at any time either in the House or in the office.

ಶ್ರೀ ವಿ. ಎನ್. ಪಾಟೀಲ್ —ಈ ಡ್ರಾಟ್ ಸಿಚ್ಯುಯೇಷನ್‌ನಲ್ಲಿ ಈ ಗೋಲ್ಡ್‌ಸ್ಮಿತ್ಸ್, ಆರ್ಟಿಸಾನ್ಸ್, ಎಕ್ಸ್‌ಪ್ಲೋರರ್ಸ್ ಮತ್ತು ಡೀಲರ್ಸ್ ಇವರೆಲ್ಲಾ ಸಂಪೂರ್ಣವಾಗಿ ನಿರುದ್ಯೋಗಿಗಳಾಗಿದ್ದಾರೆ. ಅವರ ಬಗ್ಗೆ ಬಜೆಟ್ಟಿನಲ್ಲಿ ಏನು ಪ್ರಾವಿಷನ್ ಮಾಡಿದ್ದೀರಿ ? ಯಾವ ತರಹ ಅವರಿಗೆ ಒತ್ತಾಸೆ ಕೊಡುವುದಕ್ಕೆ ಸಾಧ್ಯವಿದೆ ? ಯಾವ ಒತ್ತಾಸೆ ಕೊಡುತ್ತೀರಿ !

ಶ್ರೀ ಎಂ. ವೈ. ಘೋರ್ಪಡೆ.—ವೀವರ್ಸ್ ಬಗ್ಗೆ ನಾನು ಹೇಳಿದೆ, ಎಕ್ಸ್‌ಪ್ಲೋರರ್ಸ್ ವಿಷಯದಲ್ಲಿ ತಾವು ಏನಾದರೂ ಸಲಹೆ ಇದ್ದರೆ ಹೇಳಿ, ಅದನ್ನು ನಾವು ಪರಿಶೀಲನೆ ಮಾಡೋಣ.

5-00 P. M.

ಶ್ರೀ ಕೆ. ಆರ್. ಶ್ರೀನಿವಾಸುಲುನಾಯ್ಡು.—ಮಾನ್ಯ ಅರ್ಥ ಸಚಿವರು ಉತ್ತರ ಕೊಡುವಾಗ ಪೆನ್‌ಷನ್ ಬಗ್ಗೆ ಹೇಳಬೇಕು. ಪೆನ್‌ಷನ್‌ದಾರರು 30-35 ವರ್ಷ ದುಡಿದಿದ್ದಾರೆ, ಅವರಿಗೆ ಏನಾದರೂ ಕೊಡುವ ಯೋಚನೆ ಇದೆಯೇ ! ಪೊಲಿಟಿಕಲ್ ಪೆನ್‌ಷನರ್ಸ್ ಹಾಗೆ ಅವರನ್ನು ಪರಿಗಣನೆ ಮಾಡಿ ಹಣವನ್ನು ಜಾಸ್ತಿ ಕೊಡುವುದಕ್ಕೆ ಯೋಚನೆ ಮಾಡುತ್ತೀರಾ !

Sri M. Y. GHORPADE.—Without their asking, the Government increased their pension. This time we have not done it. I cannot give any assurance except that Government has every sympathy for the pensioners and we will always do what we can from time to time.

ಶ್ರೀ ಕೆ. ಪ್ರಭಾಕರ.—ಮಾನ್ಯ ಅರ್ಥಸಚಿವರು ಮಾತನಾಡುತ್ತಾ, ಅಸ್ಪೃಶ್ಯತೆಯು ಬೇನೆ ಸಮಾಜವನ್ನು ಯಾವ ರೀತಿ ಹಾಳುಮಾಡುತ್ತದೆ ಎಂದು ಹೇಳಿದರು. ಬಾವಿಗಳಲ್ಲಿ ನೀರು ತೆಗೆದುಕೊಳ್ಳುವುದು ಕಷ್ಟ ಇದೆಯೆಂದು ತಮ್ಮ ಉತ್ತರದ ಒಂದು ರೂಪದಲ್ಲಿ ಹೇಳಿದರು. ಇತ್ತೀಚೆಗೆ ಅಸ್ಪೃಶ್ಯತೆ ಬೇನೆ ಕಡಿಮೆಯಾಗುತ್ತಾ ಇದೆ. ಯಾವ ಜನ ಒಂದು ಕಡೆ ಈ ರೀತಿ ಹೇಳುತ್ತಾರೋ ಅಂಥವರಿಂದಲೇ ಇದು ನಿವಾರಣೆಯಾಗುತ್ತಿಲ್ಲ ಎನ್ನುವುದು ಸರ್ಕಾರಕ್ಕೆ ಗೊತ್ತಿದೆ. ಸರ್ಕಾರದ ವಶದಲ್ಲಿರತಕ್ಕ ಪ್ರಪೋಗೇಟಿಂಗ್ ಮೆಷಿನರಿಯನ್ನು ಈ ರೋಗ ನಿವಾರಣೆಗೆ ಬಳಸಿ, ಪ್ರಪೋಗೇಟ್ ಮಾಡಬೇಕು. ಎಕ್ಸ್‌ಸೈಜ್‌ನಿಂದ ಬರುವ ಕೋಟ್ಯಾಂತರ ರೂಪಾಯಿಗಳನ್ನು ಇದಕ್ಕೆ ಬಳಸಿ ಒಂದು ಯೋಜನೆಯನ್ನು ತಯಾರು ಮಾಡುವುದು ಸೂಕ್ತವಲ್ಲವೆ ?